ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೪೦

ಸಹಕಾರ

ಎಸ್. ಗೋಪಾಲಸ್ವಾಮಿ, ಎಂ.ಎ.

ಮೈಸೂರು :
ಮೈಸೂರು ವಿಶ್ವವಿದ್ಯಾನಿಲಯ
೧೯೪೫

ಬೆಲೆ : ೩ ಆಣೆ

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರಪುಸ್ತಕ ಮಾಲೆ

[... ತಿನ ಪುಸ್ತಕಗಳು ಮುಗಿದುಹೋಗಿವೆ.]

೧. ಖಗೋಳಶಾಸ್ತ್ರ ಪ್ರವೇಶ—
ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು*—
ಜಿ. ಹ... ..., ಎಂ.ಎ.
೩. ತೆರಿಗೆ*—ಬಿ. ಆರ್. ಸುಬ್ಬರಾ...
೪. ನವರತ್ನಗಳು*—ಎಚ್. ಸುಬ್ಬಜೋ... ಎಂ.ಎಸ್‌ಸಿ.
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
... ಕುಮಾರವ್ಯಾಸ*—ಎಸ್. ವಿ. ರಂಗಣ್ಣ, ಎಂ.ಎ.
... ...ಸೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
... ...ಪಸಾಹಿತ್ಯ*—ಕೆ. ವೆಂಕಟರಾಮಪ್ಪ, ಎಂ.ಎ.
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್,
ಎಂ. ಎಸ್‌ಸಿ.
೧೦. ಪಂಪ—ತೀ. ನಂ. ಶ್ರೀಕಂಠಯ್ಯ, ಎಂ.ಎ.
೧೧. ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರಿ, ಎಂ.ಎ., ಡಿ.
೧೩. ಮದುವೆ*—ನಾ. ಕಸ್ತೂರಿ, ಎಂ.ಎ., ಬಿ.ಎಲ್.
೧೪. ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ*—ಕೆ. ಶೇಷಾದ್ರಿ ಅಯ್ಯಂಗಾರ್,
ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು*—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು*—ಎಸ್. ರಾಮಚಂದ್ರರಾವ್, ಎ
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ*—
ಪಿ. ಜಿ. ಸತ್ಯಗಿರಿನಾಥನ್, ಎಂ.ಎ.



ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್, ಅವರು

(೧೮೮೮-೧೯೪೦)

(ಶ್ರೀಮನ್ಮಹಾರಾಜರವರ ಹುಜೂರ್ ಸೆಕ್ರೆಟೆರಿಯವರ ಕೃಪೆಯಿಂದ)



ರಾಬರ್ಟ್ ಓವನ್

(೧೭೭೧–೧೮೫೮)

ಬಿನ್ನಹ

ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಆಶ್ರಯದಲ್ಲಿ ನಾನು ರಕಲಗೂಡಿನಲ್ಲಿ ಕೊಟ್ಟ ಉಪನ್ಯಾಸಗಳ ಆಧಾರದ ಮೇಲೆ ಬರೆದ ೕಖನವಿದು. ೧೯೩೯ರಲ್ಲಿ ಈ ವಿಷಯವನ್ನು ಕುರಿತು ಆಕಾಶವಾಣಿಯ ಂಗಳೂರು ಕೇಂದ್ರದಿಂದ ನಾನು ಮಾಡಿದ ಭಾಷಣಗಳ ಹಲವು ಭಾಗ ಳು ಇಲ್ಲಿ ಅಡಗಿರುವುವು. ಅವುಗಳಲ್ಲಿ ಸ್ವಲ್ಪಭಾಗ ಅದೇ ವರ್ಷ ಒಂದೆರಡು ತ್ರಿಕೆಗಳಲ್ಲೂ ಪ್ರಕಟವಾಗಿದೆ. ನನಗೆ ಅನೇಕ ವಿಧವಾಗಿ ಉತ್ತೇಜನ ೂಟ್ಟ ಆಕಾಶವಾಣಿಯ ಡೈರೆಕ್ಟರಾದ ಡಾ|| ಎಂ. ವಿ. ಗೋಪಾಲ ಸ್ವಾಮಿ ಅವರಿಗೆ ನನ್ನ ವಂದನೆಗಳು ಸಲ್ಲತಕ್ಕದ್ದಾಗಿದೆ. ಈ ಲೇಖನದ ೂನೆಯಲ್ಲಿ ಕೊಟ್ಟಿರುವ "ಸಹಕಾರಗೀತ"ವನ್ನು ಉಪಯೋಗಿಸಿಕೊಳ್ಳಲು ನನಗೆ ಅನುಮತಿಯನ್ನಿತ್ತುದಕ್ಕಾಗಿ ನಾನು ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರನ್ನು ವಂದಿಸುತ್ತೇನೆ.

ಇದರ ಹಸ್ತಪ್ರತಿಯನ್ನು ನನ್ನೊಡನೆ ಓದಿ ನನಗೆ ಸಲಹೆಗಳ ನ್ನಿತ್ತು ಅನೇಕ ವಿಧದಲ್ಲಿ ಸಹಾಯ ಮಾಡಿದ ನನ್ನ ಮಾನ್ಯಮಿತ್ರರೂ ತೆಯ ಕೆಲಸಗಾರರೂ ಆದ ಶ್ರೀಮಾನ್ ಜಿ. ಹನುಮಂತರಾಯರಿಗೆ ನಾನು ಚಿರಋಣಿ.

ಮೈಸೂರು,
ತಾ|| ೫-೬-೧೯೪೨.

ಎಸ್. ಜಿ.

S.

ವಿಷಯಾನುಕ್ರಮಣಿಕೆ

ಸಹಕಾರ

೧. ವಿಷಯಪರಿಚಯ

"ಸಹಕಾರ" ಎಂಬ ಪದಕ್ಕೆ ಸಾಮಾನ್ಯ ಅರ್ಥ ಒಟ್ಟುಗೂಡಿ ಕೆಲಸಮಾಡುವುದು ಎಂದು. ಒಟ್ಟುಗೂಡಿ ಕೆಲಸಮಾಡುವುದು ಪ್ರಕೃತಿ ರಚನಾವಿಶೇಷಗಳಲ್ಲಿ ಒಂದು. ಇರುವೆ ಮತ್ತು ಜೇನುಹುಳುಗಳ ಜೀವನವು ಪ್ರಾಣಿವರ್ಗದಲ್ಲಿ ಕಂಡುಬರುವ ಸಹಕಾರಕ್ಕೆ ಉತ್ತಮ ನಿದರ್ಶನ. ಮಾನವಜೀವನದಲ್ಲಿ, ಮುಖ್ಯವಾಗಿ ಆರ್ಥಿಕಜೀವನದಲ್ಲಿ, ಸಹಕಾರದ ಉಪಯೋಗವು ಸ್ಪಷ್ಟವಾಗಿ ಕಾಣುವುದು. ಆದರೂ ಇದು ವ್ಯವಸ್ಥಿತವಾದ ರೂಪಕ್ಕೆ ಬಂದುದು ಕೇವಲ ಇನ್ನೂರು ವರ್ಷಗಳಿಂದೀಚೆಗೆ. ಅರ್ಥೋತ್ಪತ್ತಿಗೆ ಯಂತ್ರ, ಮತ್ತು ಕಲ್ಲಿದ್ದಲು ಪೆಟ್ರೋಲ್ ಮುಂತಾದ ಶಕ್ತಿಸಾಧಕಗಳು ನೆರವಾದುದೇ ಇದಕ್ಕೆ ಮುಖ್ಯಕಾರಣ. ಈರೀತಿ ಬದಲಾವಣೆಯಾದಂದಿನಿಂದ ಆರ್ಥಿಕಕ್ರಾಂತಿಯ ಯುಗವು ಆರಂಭವಾಯಿತು. ಹಿಂದೆ ಒಬ್ಬನೋ ಅಥವಾ ಒಂದು ಸಂಸಾರದವರೋ ನಡೆಸುತ್ತಿದ್ದ ಒಂದು ಕೆಲಸವನ್ನು ಈಗ ಅನೇಕ ಭಾಗಗಳಾಗಿ ವಿಂಗಡಿಸಿ ಒಂದೊಂದು ಭಾಗವನ್ನೂ ಹಲವು ಕೆಲಸಗಾರರಿಗೆ ಹಂಚಿ ಯಂತ್ರೋಪಕರಣಗಳ ಸಹಾಯದಿಂದ ಗಿರಣಿಗಳಲ್ಲಿ ನಡೆಸುತ್ತಿರುವರು. ಈ ವಿಧವಾದ ವ್ಯವಸ್ಥೆಯು ಫಲಕಾರಿಯಾಗುವುದು ಸಹಕಾರಬಲದಿಂದ. ಹೀಗೆ ಒಟ್ಟುಗೂಡಿ ಕೆಲಸ ನಡೆಸುವುದು ಇಂದಿನ ಆರ್ಥಿಕಜೀವನದ ತಳಹದಿಯಾಗಿದೆ.

ಇಲ್ಲಿ ಪ್ರಸ್ತಾಪಿಸಬೇಕಾಗಿರುವ "ಸಹಕಾರ"ವು ಈ ಸಾಮಾನ್ಯ ಅರ್ಥದಲ್ಲಲ್ಲ. ಇಲ್ಲಿ "ಸಹಕಾರ" ಎಂದರೆ ಒಂದು ವಿಶೇಷರೀತಿಯಾದ ಆರ್ಥಿಕ ಜೀವನಕ್ರಮ. ಸಹಕಾರ ಮಾರ್ಗವು ಅರ್ಥ ಮತ್ತು ಧರ್ಮ ಈ ಎರಡು ಪುರುಷಾರ್ಥಗಳನ್ನೂ ಒಂದಕ್ಕೊಂದು ವಿರೋಧವಾಗದಂತೆ ಸಮನಾಗಿ ಸಾಧಿಸುವ ಮಾರ್ಗ. ಸಹಕಾರಪದವು "ಸಹಕಾರ ಪದ್ಧತಿ" ಎನ್ನುವ ಅರ್ಥದಲ್ಲಿ ತಿಳಿಯತಕ್ಕದಾಗಿದೆ.

ಆಧುನಿಕ ಅರ್ಥಶಾಸ್ತ್ರಜ್ಞರು ಆರ್ಥಿಕ ಜೀವನ ವ್ಯವಸ್ಥೆಗಳನ್ನು ಮೂರು ರೀತಿಯಾಗಿ ವಿಂಗಡಿಸಿರುವರು. ಅವು ಯಾವುವೆಂದರೆ: ಮೊದಲನೆಯದು ಬಂಡವಾಳಗಾರರ ಪ್ರಭುತ್ವ ಪದ್ಧತಿ; ಎರಡನೆಯದು ಸಹಕಾರ ಪದ್ಧತಿ; ಮೂರನೆಯದು ಸಮಾಜ ಸಮತಾವಾದ ಕ್ರಮ. ಸಹಕಾರ ಪದ್ಧತಿಯ ಮೂಲತತ್ವಗಳು ತಿಳಿಯಬೇಕಾದರೆ ಉಳಿದ ಎರಡು ವ್ಯವಸ್ಥೆಗಳ ನಿಜಸ್ವರೂಪವನ್ನು ತಿಳಿಯಬೇಕಾದುದು ಅವಶ್ಯಕ.

ಬಂಡವಾಳಗಾರರ ಪ್ರಭುತ್ವ ಕ್ರಮದ ಸ್ವರೂಪವು ಅದರ ಹೆಸರಿನಿಂದಲೇ ವಿಶದವಾಗುವುದು. ಬಂಡವಾಳಗಾರರ ಮೇಲ್ಮೆಯೇ ಈ ಪದ್ಧತಿಯ ಮುಖ್ಯಗುರಿ. ದುಡ್ಡೇ ಎಲ್ಲದಕ್ಕಿಂತಲೂ ದೊಡ್ಡದು; ದುಡ್ಡಿದ್ದವನೇ ದೊಡ್ಡಪ್ಪ; ಅದಕ್ಕಾಗಿ ಅಸಾಧ್ಯ ಪೈಪೋಟಿ, ಹೋರಾಟ. ತನ್ನ ಬೊಕ್ಕಸವನ್ನು ಹೇಗೆ ತುಂಬಿಕೊಳ್ಳುವುದು, ದಯಾದಾಕ್ಷಿಣ್ಯವಿಲ್ಲದೆ ಸ್ವಾರ್ಥ ಸಾಧನೆ ಹೇಗೆಮಾಡಿಕೊಳ್ಳುವುದು—ಇವು ವಿನಾ ಮಾನವಕೋಟಿಯ ಶ್ರೇಯಸ್ಸಿನ ಕಡೆಗೆ ಲಕ್ಷ್ಯವೇ ಇಲ್ಲ. ನೂರಾರು ಜನರನ್ನು ದುಡಿಸಿ ಅವರನ್ನು ಮೆತ್ತಗೆಮಾಡಿ ತಾನೊಬ್ಬ ದೊಡ್ಡವನಾಗುವುದು ಬಂಡವಾಳಗಾರನ ರೀತಿ. ಬಂಡವಾಳಗಾರರ ಸಮಾಜದಲ್ಲಿ ಬಡಪಾಯಿಯ ಪಾಡು ನಾಯಿಪಾಡು; ಇತರರ ಲಾಭಸಂಪಾದನೆಗೆ ದುಡಿಯುವುದೊಂದೇ ಸಾಮಾನ್ಯಜನರ ಹಣೆಯಬರಹ.

ಈ ಕ್ರಮದಲ್ಲಿ ತತ್ವಶಃ ಪ್ರತಿಯೊಬ್ಬ ವ್ಯಕ್ತಿಗೂ ಸ್ವಾತಂತ್ರ್ಯದ ಸುಖವುಂಟು; ದರಿದ್ರನೂ ಧನಿಕನಾಗುವ ಸಂಭವವುಂಟು. ಆದರೆ ಹೀಗೆ ಪರಿವರ್ತನೆಯಾಗುವುದು ಕೇವಲ ಅಪರೂಪ. ಬಂಡವಾಳವುಳ್ಳ ಬಲಿಷ್ಠರು ದಿನದಿನಕ್ಕೆ ಪ್ರಬಲರಾಗುವರು. ಬಡವರು ದಿನದಿನಕ್ಕೆ ಕ್ಷೀಣದಶೆಗೆ ಇಳಿಯುವ ಸಂಭವವೇ ಹೆಚ್ಚು. ಬಂಡವಾಳಗಾರರ ಸಮಾಜದಲ್ಲಿ ಮಾನುಷ ವ್ಯಕ್ತಿತ್ವಕ್ಕೆ, ಶೀಲಕ್ಕೆ, ಆತ್ಮಗೌರವಕ್ಕೆ ಅಷ್ಟು ಅವಕಾಶವಿಲ್ಲ. ಹಣವಂತನಾದರೆ ಗುಣಹೀನನಾದರೂ ಮರ್ಯಾದೆ; ಧನಹೀನನು ಎಷ್ಟೇ ಶೀಲವಂತನಾದರೂ, ಗುಣಾಢ್ಯನಾದರೂ ಅವನಿಗೆ ಮನ್ನಣೆ ಇಲ್ಲ.

ಆದರೂ ಬಂಡವಾಳಗಾರರ ವ್ಯವಸ್ಥೆಯು ಪ್ರಪಂಚದ ಸಂಪದಭಿವೃದ್ಧಿಗೆ ಸಾಧಕವಾಗಿದೆ. ಬಂಡವಾಳಗಾರರ ಪ್ರಭುತ್ವದ ವ್ಯವಸ್ಥೆಯು ಮೂರು ವಿಧವಾಗಿರಬಹುದು. (೧) ತನ್ನ ಸ್ವಂತ ಬಂಡವಾಳದ ಬಲ

ದಿಂದ ಒಬ್ಬನೇ ಒಂದು ಕೆಲಸ ನಡೆಸುವುದು ; (೨) ನಾಲ್ಕಾರು ಬಂಡವಾಳಗಾರರು ಪಾಲುಗಾರರಾಗಿ ಸೇರಿ ಕೆಲಸ ನಡೆಸುವುದು ; (೩) ಅನೇಕ ಜನರಿಂದ ಬಂಡವಾಳವನ್ನು ಸೇರಿಸಿ ಒಂದು ಸಂಸ್ಥೆಯಾಗಿ ಕೆಲಸ ನಡೆಸುವುದು. ಒಂಟಿ ಬಂಡವಾಳಗಾರರೂ ಜಂಟಿ ಬಂಡವಾಳಗಾರರೂ ಎಷ್ಟೇ ಉಪಪತ್ತಿಯುಳ್ಳವರಾದರೂ ಅವರಿಂದ ಈಗಿನ ಕಾಲದ ಆರ್ಥಿಕ ಉದ್ಯಮಗಳಿಗೆ ತಕ್ಕಷ್ಟು ಬಂಡವಾಳವನ್ನೊದಗಿಸುವ ಶಕ್ತಿಯಾಗಲಿ, ಕಾಲಕ್ರಮದಲ್ಲಿ ಆ ಉದ್ಯಮಗಳಿಗೆ ಸಂಭವಿಸಬಹುದಾದ ಕಷ್ಟನಷ್ಟಗಳನ್ನು ನಿಭಾಯಿಸುವ ಚೈತನ್ಯವಾಗಲಿ ಇರುವುದಿಲ್ಲ. ಇವೆರಡು ಶಕ್ತಿಗಳೂ ಮೂರನೆಯದಾದ ಸಾಮೂಹಿಕ ಬಂಡವಾಳ ಸಂಸ್ಥೆಗಳಿಗೆ ಇವೆ. ಆದುದರಿಂದಲೇ ಇವು ಎಲ್ಲೆಲ್ಲೂ ಹರಡಿವೆ; ಹರಡುತ್ತಲೂ ಇವೆ. ಇವು ಲಕ್ಷಾಂತರ ಜನರಿಂದ ಹೇರಳವಾಗಿ ಬಂಡವಾಳವನ್ನು ಕೂಡಿಸಿ ಬಹಳ ಭಾರಿ ಉದ್ಯಮಗಳನ್ನು ನಡೆಸಲು ನೆರವಾಗಿವೆ. ಇವಕ್ಕೆ ನಷ್ಟ ಸಂಭವಿಸಿದಾಗ ನಷ್ಟವು ಸಮೂಹದ ಮೇಲೆ ದಾಮಾಷಾ ಮೇರೆ ಅಲ್ಪಪ್ರಮಾಣದಲ್ಲಿ ಹಂಚಿ ಬೀಳುವುದರಿಂದ ಒಂಟಿ ಮತ್ತು ಜಂಟಿ ಬಂಡವಾಳಗಾರರ ಸಂಸ್ಥೆಗಳಂತೆ ಕುಸಿದು ಬೀಳುವುದಿಲ್ಲ.

ಈ ಮೂರು ವಿಧವಾದ ಬಂಡವಾಳಗಾರರ ಸಂಸ್ಥೆಗಳು ಎಲ್ಲೆಲ್ಲೂ ಪ್ರಾಮುಖ್ಯಕ್ಕೆ ಬಂದುದು ಪ್ರಪಂಚದ ಆರ್ಥಿಕ ಅಭಿವೃದ್ಧಿಗೆ ಕಾರಣವಾಗಿದ್ದರೂ ಸಾಮಾಜಿಕ ದೃಷ್ಟಿಯಿಂದ ಇವೂ ದುಷ್ಪರಿಣಾಮಕಾರಿಯಾಗಿವೆ. ಬಂಡವಾಳಗಾರರು, ಕೆಲಸಗಾರರು ಎಂಬ ಎರಡು ವಿರೋಧ ಪಂಗಡಗಳಾಗಿ ಕಕ್ಷಿಪ್ರತಿಕಕ್ಷಿಗಳಾಗಿ ಹೋರಾಡುವ ಸನ್ನಿವೇಶವು ಒದಗಿದೆ. ಲಾಭದಲ್ಲಿ ಹದಿನಾರಾಣೆಯ ಭಾಗ ಬಂಡವಾಳಗಾರರಿಗೆ ಸಂದಾಯವಾಗುತ್ತಿರುವುದೇ ಈ ಹೋರಾಟಕ್ಕೆ ಮುಖ್ಯ ಕಾರಣ. ಅವರಿಬ್ಬರಿಗೂ ಪರಸ್ಪರ ವೈಷಮ್ಯವು ದಿನೇ ದಿನೇ ಬೆಳೆಯುತ್ತಿದೆ. ಕೆಲಸಗಾರರ ಬಾಳು ದಿನೇ ದಿನೇ ಕಳೆಗುಂದಿ ಅವರಿಗೆ ಜೀವನದಲ್ಲಿ ಜಿಗುಪ್ಸೆ ತಲೆದೋರಿದೆ. ಆದುದರಿಂದ ಕೆಲಸಗಾರರು ಜಾಗ್ರತಿಗೊಂಡು, ತಮ್ಮನ್ನು ಮೆತ್ತಗೆ ಮಾಡುತ್ತಿರುವ ಬಂಡವಾಳಗಾರರ ಪಾಶದಿಂದ ಬಿಡುಗಡೆ ಹೊಂದಲು ಸಮತಾಭಾವನೆಯುಳ್ಳ ಅಥವಾ ಸಾಮೂಹಿಕ ಹಿತಸಾಧನೆಯೇ ಮುಖ್ಯ ಧ್ಯೇಯವಾಗಿರುವ ಆರ್ಥಿಕ ವ್ಯವಸ್ಥೆಗಳನ್ನು ಈಗ ಸುಮಾರು ಒಂದು

ಶತಮಾನದಿಂದ ಏರ್ಪಡಿಸಿಕೊಳ್ಳುತ್ತಿರುವರು. ಇವುಗಳಿಗೆ ಬೇರೆ ಬೇ ಹೆಸರುಗಳಿವೆ. ಇವನ್ನು ಬೇರೆ ಬೇರೆಯಾಗಿ ವಿಮರ್ಶಿಸಬಹುದು. ಇವ ಹೆಚ್ಚು ಕಡಿಮೆ ಸಮಾಜಸಮತಾವಾದದ ಪ್ರಭೇದಗಳೆಂದೆನ ಬಹುದು.

ಸಮಾಜಸಮತಾವಾದ ವ್ಯವಸ್ಥೆಯಲ್ಲಿ ಬಂಡವಾಳವು ಹೇರಳವಾ ಉಪಯೋಗದಲ್ಲಿದ್ದರೂ ಅದು ಬಂಡವಾಳಗಾರರ ಅಧೀನ್ಯಕ್ಕೆ ಒ ಪಟ್ಟಿಲ್ಲ. ಆಸ್ತಿ ವ್ಯಕ್ತಿಗಳದಲ್ಲ. ಒಟ್ಟು ಸಮಾಜದ್ದು. ಇದನ್ನು ಎಲ್ಲರ ಸೇರಿ ರೂಢಿಸುವರು; ಅದರಿಂದ ಬಂದ ಫಲವನ್ನು ಎಲ್ಲರೂ ಅನುಭವಿಸ ವರು. ಸಾಮೂಹಿಕ ಹಿತವನ್ನು ಗಳಿಸಿ ತನ್ಮೂಲಕ ವ್ಯಕ್ತಿಯ ಹಿತವನ ಸಾಧಿಸುವುದು ಈ ವ್ಯವಸ್ಥೆಯ ಉದ್ದೇಶ. ಈ ವ್ಯವಸ್ಥೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯವಿಲ್ಲ. ಏನು ಮಾಡಬೇಕಾದರೂ ವಿಧಾಯಕವಾದ ಕಟ್ಟು ಳಿಗೆ ಒಳಗಾಗಿ ಸದಾ ಸಾಮೂಹಿಕ ಮೇಲ್ವಿಚಾರಣೆಯಲ್ಲಿ ಕೆಲಸ ಮಾ ಬೇಕು. ಎಲ್ಲ ಉದ್ಯಮಗಳಿಗೂ ಮೂಲಕಾರಣವಾದದ್ದು ಆತ್ಮಶಕ್ತಿ. ಇದ ವಿಕಾಸಕ್ಕೆ ಅವಕಾಶವಿಲ್ಲ. ಎಲ್ಲರೂ ಒಂದೇ—ಎಲ್ಲರಿಗೂ ಒಂದೇ ಸೂತ್ರ ಈ ನಿರ್ಜೀವವಾದ ಸರ್ವಸಮದೃಷ್ಟಿಯು ಮನುಷ್ಯನ ವ್ಯಕ್ತಿತ್ವವನ್ನು ಕ ಗುಂದಿಸುವುದು. ಇಂಥಾ ವ್ಯವಸ್ಥೆಯ ಆಧಾರದ ಮೇಲೆ ರಷ್ಯಾ ದೇ ದವರು ಈಗ ಸುಮಾರು ಇಪ್ಪತ್ತು ವರುಷಗಳಿಂದೀಚೆಗೆ ದೇಶದ ವ್ಯವಸ್ ಯನ್ನು ರೂಪಾಂತರಗೊಳಿಸಿರುವರು. ಈ ವ್ಯವಸ್ಥೆಯಿಂದ ದೇಶವು ಸರ್ವ ತೋಮುಖವಾಗಿ ಅಭಿವೃದ್ಧಿ ಹೊಂದಿದೆಯೇ ಎಂಬುದು ವಿವಾದಾಸ್ಪ ವಾಗಿದ್ದರೂ ಜನಸಾಮಾನ್ಯದ ಆರ್ಥಿಕ ಸ್ಥಿತಿಯು ಉತ್ತಮಗೊಂಡಿ ಎಂಬುದನ್ನು ಎಲ್ಲರೂ ಒಪ್ಪುವರು.

ಬಂಡವಾಳಗಾರರ ಪ್ರಭುತ್ವಕ್ರಮವೂ ಸಮಾಜಸಮತಾವಾದ ಕ್ರಮ ವೂ ಮೂಲತತ್ವಗಳಲ್ಲಿ ಒಂದಕ್ಕೊಂದು ವಿರೋಧವಾಗಿವೆ. ಸಮಾಜ ಸಮತಾವಾದಕ್ರಮವು ಜನಿಸಿದುದು ಬಂಡವಾಳ ಪ್ರಭುತ್ವಕ್ರಮದ ಪ್ರ ಕಕ್ಷಿಯಾಗಿ. ಆದುದರಿಂದ ಇವೆರಡರಲ್ಲಿ ಕಂಡುಬರುವ ಪರಸ್ಪರ ವಿರೋ ಭಾವವು ಸ್ವಾಭಾವಿಕವಾದುದು. ಆದರೆ ಈ ಎರಡು ಕ್ರಮಗಳಲ್ಲಿಯೂ ಗುಣದೋಷಗಳಿವೆ. ಇವೆರಡರಲ್ಲಿನ ದೋಷಗಳನ್ನೆಲ್ಲಾ ತ್ಯಜಿಸಿ, ಗು ಗಳನ್ನು ಗ್ರಹಿಸುವ ಮಾಧ್ಯಮಿಕಮಾರ್ಗ ಸಹಕಾರಮಾರ್ಗ.

ಬಂಡವಾಳಕ್ರಮದಂತೆಯೇ ಸಹಕಾರಕ್ರಮದಲ್ಲೂ ಆಸ್ತಿಯನ್ನು ಊರ್ಜಿತಪಡಿಸಲು ಅವಕಾಶವಿದೆ. ಆದರೆ, ಬಂಡವಾಳ ಪ್ರಭುತ್ವಕ್ರಮದಲ್ಲಿರುವಂತೆ ವಿನಾಶಕರವಾದ ಪೈಪೋಟಿಯಿಲ್ಲ. ವ್ಯಕ್ತಿಸ್ವಾತಂತ್ರ್ಯವಿದ್ದರೂ ಒಟ್ಟುಗೂಡಿ ಕೆಲಸಮಾಡಲು ಅಡಚಣೆಯಿಲ್ಲ; ಸರ್ವ ಸಮಭಾವನೆಗೂ ಸ್ವಲ್ಪಮಟ್ಟಿಗೆ ಅವಕಾಶವುಂಟು. ಆರ್ಥಿಕ ಉದ್ಯಮಗಳಲ್ಲಿ ಶೀಲವಂತರಾದ ಧನಿಕರೂ ಬಡವರೂ ಒಟ್ಟುಗೂಡಿ, ಯಾರೊಬ್ಬರ ಹಕ್ಕು ಬಾಧ್ಯತೆಗಳಿಗೂ ಚ್ಯುತಿಬಾರದಂತೆ ಪರಸ್ಪರ ಬೆಂಬಲದಿಂದ ಕೆಲಸ ಮಾಡಲು ಅವಕಾಶವಿದೆ. ಒಗ್ಗಟ್ಟೇ ಸಹಕಾರಪದ್ಧತಿಯ ಮೂಲಮಂತ್ರ. ಒಬ್ಬನಿಗಾಗಿ ಎಲ್ಲರೂ, ಎಲ್ಲರಿಗಾಗಿ ಪ್ರತಿಯೊಬ್ಬನೂ ಹಂಬಲಿಸಿ ದುಡಿಯುವುದೇ ಇದರ ಪರಮೋದ್ದೇಶ. ಇದು ಶೀಲವಂತರ ಅರ್ಥಸಾಧಕ ಮಾರ್ಗ.

ಬಂಡವಾಳವನ್ನು ಬಂಡವಾಳಗಾರರ ಹಿಡಿತದಿಂದ ತಪ್ಪಿಸಿ ಅದನ್ನು ಮಾನವನ ಸೇವೆಗಾಗಿ ವಿನಿಯೋಗಿಸಿಕೊಳ್ಳುವುದು ಸಹಕಾರಮಾರ್ಗ. ಪ್ರಾಮಾಣಿಕತೆಯಿಂದ ಎಲ್ಲರ ಅಭ್ಯುದಯಕ್ಕಾಗಿ ಎಲ್ಲ ವ್ಯವಹಾರಗಳನ್ನೂ ನಡೆಸುವುದೇ ಅದರ ಆಡಳಿತ ನೀತಿ. ಈ ವ್ಯವಸ್ಥೆಯಲ್ಲಿ ಲೇವಾದೇವಿ, ವ್ಯಾಪಾರಸಾಪಾರ, ಕೃಷಿಕೈಗಾರಿಕೆ--ಎಲ್ಲವೂ ಸಮಾಜಸೇವಾದೃಷ್ಟಿಯಿಂದ ನಡೆಯುವುವು. ಹೀಗೆಂದರೆ ಅದು ಬಲಹೀನರಿಗೆ ಸಹಾಯ ಮಾಡುವ ಧರ್ಮಸಂಸ್ಥೆ ಎಂದು ಎಣಿಸಕೂಡದು. ಸಹಕಾರಿಗಳು ತಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಯಾರೊಬ್ಬರಿಗೂ ಅಧೀನರಾಗಿರದೆ ಸ್ವಸಾಮರ್ಥ್ಯದಿಂದಲೇ ಜೀವನ ನಡೆಸುವರು. ಇತರರಿಂದ ಭಿಕ್ಷೆಯನ್ನು ಕೋರುವುದು ಅಪಮಾನಕರವೆಂದು ಅವರು ಭಾವಿಸಿರುವರು.

ಸಹಕಾರಸಂಸ್ಥೆಗಳ ಆಡಳಿತವನ್ನು ಆಯಾ ಸಂಸ್ಥೆಗಳ ಸದಸ್ಯರೇ ನಡೆಸುವರು. ಪ್ರಯೋಜನ ಪಡೆಯತಕ್ಕವರೂ ಸದಸ್ಯರೇ. ಧಣಿಗಳೂ ಅವರೇ; ದುಡಿಯುವವರೂ ಅವರೇ; ಸ್ವಾಮ್ಯವೂ ಅವರದೇ ; ಸೇವೆಯೂ ಅವರದೇ. ಈ ಸಂಸ್ಥೆಗಳಿಗೆ ಸೇರುವುದೂ ಬಿಡುವುದೂ ಸದಸ್ಯರ ಇಚ್ಛೆಯಂತೆ ; ಸೇರಲೇಬೇಕೆಂಬ ನಿರ್ಬಂಧವಿಲ್ಲ. ಒಂದುಸಲ ಸೇರಿದ ಮೇಲೆ ಸದಸ್ಯರೆಲ್ಲರೂ ಸಂಸ್ಥೆಯ ಹಿತದೃಷ್ಟಿಯಿಂದ ದುಡಿಯಬೇಕಾದುದು ಅವರ ಕರ್ತವ್ಯ; ಅವರ ಧರ್ಮ. ಸಹಕಾರಸಂಸ್ಥೆ ಎಂದರೆ ಅದೊಂದು ದೊಡ್ಡ ಸಂಸಾರ.

ಮಾನವನ ಘನೋದ್ದೇಶಗಳನ್ನು ಆರ್ಥಿಕಜೀವನದಲ್ಲಿ ಸಫಲಗೊ
ಳಿಸಲು ಸಾಧಕವಾದುದೇ ಸಹಕಾರಮಾರ್ಗ. ಮನುಷ್ಯನ ಬದುಕನ್ನೂ
ಬಾಳನ್ನೂ ಉನ್ನತಿಗೆ ಒಯ್ಯಬೇಕೆಂಬುದು ಇದರ ಆಕಾಂಕ್ಷೆ. ಬಾಳನ್ನು
ಉತ್ತಮಪಡಿಸದ ಬದುಕು ಇದ್ದರೂ ಇಲ್ಲದ ಹಾಗೆ ಆದುದರಿಂದಲೇ ಈ
ಪದ್ಧತಿ ಮಾನವನ ಧಾರ್ಮಿಕ ಮತ್ತು ಆರ್ಥಿಕಜೀವನವನ್ನು ವೃದ್ಧಿಗೊಳಿ
ಸುವುದನ್ನೇ ಗುರಿಯಾಗಿ ಇಟ್ಟುಕೊಂಡು ಅವನ ಬದುಕನ್ನು ವ್ಯವಸ್ಥೆ
ಗೊಳಿಸುವುದು.

ಸಹಕಾರಪದ್ಧತಿಯ ತತ್ವಗಳು ಬಹು ಸೂಕ್ಷ್ಮವಾದುವು ಈ ಪದ್ಧ
ತಿಯನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ಅವನ್ನು ಬಹಳ ಎಚ್ಚರಿಕೆ
ಯಿಂದ ಪರಿಶೀಲಿಸಬೇಕು. ಕೆಲವರು ಸಹಕಾರವನ್ನು ರೂಪಮರೆಯಿಸಿ
ಕೊಂಡಿರುವ ಸಮಾಜಸಮತಾವಾದವೆಂದೂ ಮತ್ತೆ ಕೆಲವರು ಅದನ್ನು
ಬಂಡವಾಳಗಾರರ ಪ್ರಭುತ್ವಮಾರ್ಗದ ರೂಪಾಂತರವೆಂದೂ ಹೇಳುವರು
ಆದರೆ ಸಹಕಾರ ಪದ್ಧತಿಯು ಇವೆರಡೂ ಅಲ್ಲ. ಅದು ಸ್ವಾವಲಂಬನೆ
ಮತ್ತು ಸಾಮಾಜಿಕ ಶೀಲ ಇವೆರಡರ ಬಲದಮೇಲೆ ನಿಂತಿರುವ ಅರ್ಥ
ಸಾಧನೆಯ ಮಾರ್ಗ. ಸಹಕಾರವು ಅತಿ ಕಷ್ಟವಾದ ಮತ್ತು ಅತಿ ಸುಂದರ
ವಾದ ಕಲೆ.

ಈ ಮೂಲತತ್ವಗಳ ಆಧಾರದ ಮೇಲೆ ಸ್ಥಾಪನೆಯಾಗಿರುವ ಸಹ
ಕಾರಸಂಸ್ಥೆಗಳು ಈಗ ಸುಮಾರು ನೂರುವರ್ಷಗಳಿಂದಲೂ ಪ್ರಪಂಚದ
ಪ್ರಮುಖದೇಶಗಳಲ್ಲೆಲ್ಲಾ ಕೃಷಿ, ಪಶುಪಾಲನೆ, ಕೈಗಾರಿಕೆ, ವ್ಯಾಪಾರ
ವಿದ್ಯಾಭ್ಯಾಸ, ಆರೋಗ್ಯಸಾಧನೆ ಮತ್ತು ಇತರ ವಿಧದ ಸಮಾಜೋದ್ಧಾ
ರಕ ಕೆಲಸಗಳನ್ನು ಕೈಕೊಂಡು ದಿನೇ ದಿನೇ ಪ್ರವರ್ಧಮಾನಕ್ಕೆ ಬರು
ತ್ತಿವೆ. ಭರತಖಂಡದ ಎಲ್ಲಾ ಪ್ರಾಂತ್ಯಗಳಲ್ಲೂ ಸಂಸ್ಥಾನಗಳಲ್ಲೂ ಸಹ
ಕಾರ ಸಂಸ್ಥೆಗಳು ಹುಟ್ಟಿ ಹರಡುತ್ತಿವೆ.

೨. ಹುಟ್ಟು ಮತ್ತು ಬೆಳವಣಿಗೆ

ಇಂಗ್ಲೆಂಡಿನಲ್ಲಿ

ಸಹಕಾರ ಪದ್ಧತಿಗೆ ಇಂಗ್ಲೆಂಡೇ ತೌರುಮನೆ. ಆ ದೇಶದಲ್ಲಿ ಹದಿನೆಂಟನೆಯ ಶತಮಾನದ ಉತ್ತರಾರ್ಧದಿಂದೀಚೆಗೆ ಉಂಟಾದ ಆರ್ಥಿಕ ಕ್ರಾಂತಿಯ ಪರಿಣಾಮವಾಗಿ, ಆರ್ಥಿಕಜೀವನದಲ್ಲಿ ಮಾತ್ರವಲ್ಲದೆ ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲೂ ಅನೇಕ ಪರಿವರ್ತನೆಗಳುಂಟಾದುವು. ಅರ್ಥೋತ್ಪತ್ತಿಯ ರಚನಾಕ್ರಮದಲ್ಲಿ ಮುಖ್ಯ ಬದಲಾವಣೆ ಎಂದರೆ ಯಂತ್ರಗಳ ಸ್ಥಾಪನೆ. ಈ ಕ್ರಾಂತಿಗೆ ಮುಂಚೆ ಕೆಲಸಗಾರರು ಎಲ್ಲಾ ಸಾಮಾನುಗಳನ್ನೂ ಕೈಯಿಂದಲೇ ತಮ್ಮ ಮನೆಗಳಲ್ಲಿ ಮಾಡುತ್ತಿದ್ದರು. ಬೇಕಾದ ಉಪಕರಣಗಳನ್ನು ಸಾಮಾನ್ಯವಾಗಿ ಕೆಲಸಗಾರನೇ ಮಾಡಿಕೊಳ್ಳುತ್ತಿದ್ದನು. ಹಾಗೆ ತಾನೇ ಮಾಡಿಕೊಳ್ಳಲಾಗದ ಉಪಕರಣಗಳನ್ನು ಕೊಳ್ಳಲು ಹೆಚ್ಚು ಬಂಡವಾಳ ಬೇಕಾಗಿರಲಿಲ್ಲ. ದೊಡ್ಡ ದೊಡ್ಡ ಯಂತ್ರಗಳೂ ಅವುಗಳನ್ನು ನಡೆಸಲುಬೇಕಾದ ಹಬೆ, ವಿದ್ಯುತ್ ಮುಂತಾದ ಶಕ್ತಿಗಳ ಅನುಕೂಲ ಇರಲಿಲ್ಲ. ವ್ಯವಸಾಯವೇ ಮುಖ್ಯ ಕಸಬಾಗಿತ್ತು. ನೂಲುವುದು, ನೇಯುವುದು ಸಾಮಾನ್ಯ ಉಪಕಸಬುಗಳಾಗಿದ್ದವು. ಜನರೆಲ್ಲರೂ ತೃಪ್ತರಾಗಿ ಗ್ರಾಮಜೀವನದ ಆನಂದವನ್ನು ಅನುಭವಿಸುತ್ತಿದ್ದರು.

ಇಂಥಾ ನೆಮ್ಮದಿಯ ಜೀವನವು ಅನೇಕ ವಿಧದ ಯಂತ್ರಗಳ ನಿರ್ಮಾಣದ ಫಲವಾಗಿ ರೂಪಾಂತರ ಹೊಂದಿತು. ಗಿರಣಿಗಳು ಸ್ಥಾಪಿತವಾಗಿ ಹಬೆಯ ಶಕ್ತಿಯಿಂದ ಯಂತ್ರಗಳನ್ನು ಓಡಿಸುವುದು ಆಚರಣೆಗೆ ಬಂದಿತು. ದೇಹಬಲದ ಆವಶ್ಯಕತೆ ಕಡಮೆಯಾಯಿತು. ಇದರಿಂದ ಅಬಲೆಯರೂ ಮತ್ತು ಮಕ್ಕಳೂ ಗಿರಣಿಗಳಲ್ಲಿ ಕೆಲಸಮಾಡಲು ಅವಕಾಶವಾಯಿತು. ಬಂಡವಾಳಗಾರನ ಶಕ್ತಿ ಹೆಚ್ಚಾಯಿತು. ಬಂಡವಾಳಗಾರರಿಗೆ ಧನಪಿಶಾಚಿ ಹಿಡಿದು ಶ್ರಮಜೀವಿಗಳ ಕಷ್ಟಸುಖಗಳನ್ನು ಲೆಕ್ಕಿಸದೆ ಅವರನ್ನು ದುಡಿಸಲಾರಂಭಿಸಿದರು. ಪ್ರಾಯಸ್ಥರು ಗಿರಣಿಗಳಲ್ಲಿ ನಿತ್ಯವೂ ಹದಿನಾಲ್ಕು, ಹದಿನಾರು ಗಂಟೆಗಳ ಕಾಲ ದುಡಿಯುವುದು

ಮಾಡಿಕೆಯಾಯಿತು. ಈ ತೆರದ ದುಡಿತಕ್ಕೆ ಒಳಗಾಗದೆ ಜೀವನ ನಡೆಸು
ವುದು ಸಾಮಾನ್ಯಜನರಿಗೆ ಅಸಾಧ್ಯವಾಯಿತು. ಯಂತ್ರಸಹಾಯದಿಂದ
ಸರಕುಗಳು ಹೇರಳವಾಗಿ ತಯಾರಾಗಿ ಅವುಗಳ ಬೆಲೆಯು ಬಹಳ
ತಗ್ಗಿತು. ಇದರಿಂದ ಕ್ರಮೇಣ ಕೈಕೆಲಸದ ಸಾಮಾನುಗಳಿಗೆ ಗಿರಾಕಿ
ಕಡಮೆಯಾಗಿ ಕೈಕೆಲಸದಿಂದ ಜೀವನ ಸಾಗುತ್ತಿದ್ದ ಅನೇಕರು ನಿರು
ದ್ಯೋಗಿಗಳಾದರು. ಗಿರಣಿಗಳ ಸ್ಥಿತಿಗತಿಗಳು ಕಠಿಣವಾಗಿದ್ದರೂ ಜೀವ
ನೋಪಾಯಕ್ಕೆ ಬೇರೆಯ ಮಾರ್ಗವಿಲ್ಲದೆ, ಕೆಲಸಗಾರರು ಮೇಲಾಟ
ದಿಂದ ಗಿರಣಿಗಳಿಗೆ ನುಗ್ಗಲು ಪ್ರಾರಂಭಿಸಿದರು. ಇದನ್ನು ನೋಡಿ
ಕೊಂಡು ಮಾಲೀಕರು ತಮಗೆ ಬೇಕಾದಷ್ಟು ಮಂದಿ ಕೆಲಸಗಾರರು
ಹೇಗಾದರೂ ಒದಗುವರೆಂಬ ಭರವಸೆಯಿಂದ ಕೂಲಿಯನ್ನು ಕಡಮೆ
ಮಾಡಿದರು. ಆಗಿನಕಾಲದವರ ದೃಷ್ಟಿಯಲ್ಲಿ ಅದು ಸಹಜವೆಂದೇ
ತೋರುತ್ತಿತ್ತು. ಆದರೂ ಗ್ರಾಮಾಂತರಗಳಿಂದ ಜನರು ಗಿರಣಿಗಳ
ಕೂಲಿಕೆಲಸದ ಆಶೆಯಿಂದ ತಂಡತಂಡವಾಗಿ ಪಟ್ಟಣಗಳಿಗೆ ಬರಲಾರಂಭಿ
ಸಿದರು. ಬಂಡವಾಳಗಾರರು ಹಣ ಸಂಪಾದನೆಯ ಆತುರದಲ್ಲಿ ಕೆಲಸ
ಗಾರರ ಆರೋಗ್ಯ ಕ್ಷೇಮಲಾಭಗಳನ್ನು ಗಣನೆಗೆ ತೆಗೆದುಕೊಳ್ಳದೆ ಅವ
ರನ್ನು ಗಾಳಿ ಬೆಳಕಿಲ್ಲದ ಕೊಳಕು ಕೋಣೆಗಳಲ್ಲಿ ಕೂಡಿ ಕೆಲಸಮಾಡಿಸು
ತ್ತಿದ್ದರು. ಈ ದುಃಸ್ಥಿತಿಯಲ್ಲಿಯೂ ಕೆಲಸಗಾರರು ತಮಗೆ ಕೆಲಸ ದೊರೆ
ತುದೇ ಒಂದು ಪುಣ್ಯವಿಶೇಷವೆಂದು ಭಾವಿಸಿ ಇಷ್ಟು ಕಷ್ಟಗಳಿದ್ದರೂ ಸಹಿ
ಷ್ಣುತೆಯಿಂದ ದುಡಿಯುತ್ತಿದ್ದರು. ಈ ಹೀನಸ್ಥಿತಿಯು ಅವರನ್ನು ಬಾಧಿ
ಸಿದರೂ ಯತ್ನವಿಲ್ಲದೆ ಸುಮ್ಮನಿರಬೇಕಾಗಿತ್ತು. ಈಗಿನ ಹಾಗೆ ಆ
ಕಾಲದಲ್ಲಿ ಸರ್ಕಾರದವರು ಕೈಗಾರಿಕೆಯ ವ್ಯವಸ್ಥೆಯ ಯಾವ ವಿಚಾರ
ದಲ್ಲೂ ಕೈಹಾಕುತ್ತಿರಲಿಲ್ಲ. ಹಾಗೆ ಕೈಹಾಕುವುದು ಬಂಡವಾಳಗಾರರ
ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡಚಣೆ ಎಂದು ಆಗಿನ ಕಾಲದ ಜನರ ಅಭಿಪ್ರಾ
ಯವಾಗಿತ್ತು. ಗಿರಣಿ ಮಾಲೀಕರ ನಿರಂಕುಶಪ್ರಭುತ್ವವನ್ನು ಮೊಟಕುವು
ದಕ್ಕಾಗಲಿ ಕೆಲಸಗಾರರ ಹಕ್ಕುಬಾಧ್ಯತೆಯ ರಕ್ಷಣೆಗಾಗಲಿ ಸರ್ಕಾರವು
ಯಾವುದೊಂದು ಕಾನೂನನ್ನೂ ವಿಧಾಯಕಮಾಡಿರಲಿಲ್ಲ. ಇದರಿಂದ
ಸರ್ಕಾರದವರು ಬಂಡವಾಳಗಾರರ ಪಕ್ಷವನ್ನು ವಹಿಸುತ್ತಿದ್ದರೆಂದು
ತಿಳಿಯಕೂಡದು. ತಾಟಸ್ಥ್ಯ ಧೋರಣೆಯು ಆ ಕಾಲದ ಸಾಮಾಜಿಕ

ಮತ್ತು ರಾಜಕೀಯ ನೀತಿಯಾಗಿತ್ತು. ಆದುದರಿಂದ ಬಂಡವಾಳಗಾರರು ಸ್ವಾರ್ಥದಿಂದ ಕೆಲಸಗಾರರನ್ನು ದುಡಿಸಿ ದ್ರವ್ಯಾರ್ಜನೆ ಮಾಡುತ್ತಿದ್ದರೂ ಕೂಡ ಸರ್ಕಾರದವರು ಅದನ್ನು ತಡೆಗಟ್ಟಲು ಏನನ್ನೂ ಮಾಡಲೆತ್ನಿಸಲಿಲ್ಲ.

ಕೆಲಸಗಾರರಾದರೋ ಒಗ್ಗಟ್ಟಿಲ್ಲದೆ, ತಿಳಿವಳಿಕೆ ಇಲ್ಲದೆ, ತಮ್ಮ ತಮ್ಮಲ್ಲೇ ಪೈಪೋಟಿ ನಡೆಸಿ ಬಂಡವಾಳಗಾರರ ಬಲೆಗೆ ಸಿಕ್ಕಿ ನರಳುತ್ತಿದ್ದರು. ಇವರಲ್ಲಿ ಪೈಪೋಟಿ ತಪ್ಪಿಸಿ ಪರಸ್ಪರ ಬೆಂಬಲ ಬೆಳಸಿ ಇವರನ್ನು ಈ ಕಷ್ಟದಿಂದ ಬಿಡಿಸಲು ಮಾಡಿದ ಎರಡುಮೂರು ಪ್ರಯತ್ನಗಳು ಫಲಿಸಲಿಲ್ಲ. ಇದು ಕೆಲಸಗಾರರನ್ನು ಮತ್ತಷ್ಟು ನಿರುತ್ಸಾಹಿಗಳನ್ನಾಗಿ ಮಾಡಿತು. ಎಲ್ಲೆಲ್ಲೂ ನಿರಾಶೆಯ ಕಗ್ಗತ್ತಲೆ ಮೂಡಿ ಕೆಲಸಗಾರರಿಗೆ ದಿಕ್ಕೇ ತೋರದಂತಾಯಿತು. ಇಂಥ ದುರಂತ ಸ್ಥಿತಿಯಿಂದ ಕೂಲಿಗಾರರನ್ನು ಪಾರುಮಾಡಲು ಶ್ರಮಿಸಿದವನು ರಾಬರ್ಟ್ ಓವನ್. ಕೂಲಿಗಾರರಿಗೆ ಸಹಕಾರ ಮಂತ್ರವನ್ನುಪದೇಶಿಸಿ ಅದು ಅಚರಣೆಗೆ ಬರುವಂತೆ ಯತ್ನಿಸಿದುದು ಈ ಮಹನೀಯನ ಕೆಲಸ.

ರಾಬರ್ಟ್ ಓವನ್ (೧೭೭೧–೧೮೫೮) ನ ತಾಯಿತಂದೆಗಳು ಬಡವರು. ಚಿಕ್ಕಂದಿನಿಂದಲೂ ಓವನ್ನನಿಗೆ ಓದಿನಲ್ಲಿ ಬಹಳ ಆಸಕ್ತಿಯಿದ್ದರೂ ಸಂಸಾರವನ್ನು ನೀಗಲು ಇವನು ಓದುವುದನ್ನು ಬಿಟ್ಟು ದುಡಿಯಬೇಕಾಗಲು, ತನ್ನ ಒಂಭತ್ತನೆಯ ವಯಸ್ಸಿನಲ್ಲೇ ಒಬ್ಬ ವರ್ತಕನ ಹತ್ತಿರವಾಣಿಯ ಕೆಲಸಕ್ಕೆ ಸೇರಬೇಕಾಯಿತು. ಕ್ರಮೇಣ ಸ್ವಸಾಮರ್ಥ್ಯದಿಂದ ಬೇರೆ ಬೇರೆ ಊರುಗಳಲ್ಲಿ ಮೇಲ್ತರದ ನೌಕರಿ ಸಂಪಾದಿಸಿಕೊಂಡು ತನ್ನ ಹತ್ತೊಂಭತ್ತನೆಯ ವಯುಸ್ಸಿನಲ್ಲಿ ಮ್ಯಾಂಚೆಸ್ಟರ್ ಪಟ್ಟಣದ ಒಂದು ಯಂತ್ರ ತಯಾರಿಸುವ ಉದ್ಯಮದಲ್ಲಿ ಪಾಲುಗಾರನಾಗಿ ಸೇರಿದನು. ಆತನು ತನ್ನ ದೂರದರ್ಶಿತ್ವ ಮತ್ತು ತೀಕ್ಷ್ಣಬುದ್ಧಿಯ ಬಲದಿಂದ ವ್ಯಾಪಾರದಲ್ಲಿ ಬಹಳ ಅಭಿವೃದ್ಧಿಹೊಂದಿ ೧೭೯೯ರಲ್ಲಿ ಸ್ಕಾಟ್ಲೆಂಡಿನ ನ್ಯೂಲನಾರ್ಕ್ ಎಂಬ ಸ್ಥಳದಲ್ಲಿದ್ದ ಒಂದು ನೂಲಿನ ಗಿರಣಿಯಲ್ಲಿ ಪಾಲುಗಾರನಾದನು.

ನ್ಯೂಲನಾರ್ಕ್ ಒಂದು ಹಳ್ಳಿ. ಆ ಹಳ್ಳಿ ಸ್ಕಾಂಟ್ಲೆಂಡಿನ ಪ್ರಕೃತಿ ಸೌಂದರ್ಯದ ನೆಲೆವೀಡು. ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ

ರಮ್ಯಪ್ರದೇಶದಲ್ಲಿ ಗಿರಣಿಯು ಸ್ಥಾಪಿತವಾಗಿದ್ದರೂ ಆ ಗಿರಣಿಯ ಕೆಲಸಗಾರರ ಜೀವನಮಾತ್ರ ಇತರ ಪ್ರದೇಶಗಳ ಗಿರಣಿ ಕೆಲಸಗಾರರ ಜೀವನದಂತೆಯೇ ಕಷ್ಟಜೀವನವಾಗಿದ್ದುದೇ ವಿನಾ ಯಾವ ರೀತಿಯಲ್ಲಿಯೂ ಮೇಲಾಗಿರಲಿಲ್ಲ. ಎಲ್ಲರೂ ಬಡವರು ; ಸಾಮಾನ್ಯವಾಗಿ ಎಲ್ಲರೂ ಅನಕ್ಷರಸ್ಥರು. ಇಂಥವರಲ್ಲಿ ಕುಡುಕುತನ, ಜಗಳಗಂಟತನ, ಅಪ್ರಾಮಾಣಿಕತೆ, ದ್ರೋಹ, ವಂಚನೆ ಮೊದಲಾದ ದುರ್ಗುಣಗಳು ಹುಟ್ಟುವುದೇನಾಶ್ಚರ್ಯ ? ಅವರ ಆರ್ಥಿಕಸ್ಥಿತಿಯಂತೂ ಹೇಳತೀರದು : ಮುಟ್ಟಿದರೆ ಬೀಳುವಂತಿದ್ದ ಮುರುಕು ಗುಡಿಸಲು ; ತಿಂಗಳುಗಟ್ಟಳೆ ಸ್ನಾನವಿಲ್ಲದ ಮೈ, ಮೈಮೇಲೆ ಮಾಸಲುಚಿಂದಿ ; ಶಿಸ್ತು, ಆದರಣೆ ಮತ್ತು ವಿದ್ಯಾಭ್ಯಾಸವಿಲ್ಲದೆ ಬೆಳೆಯುವ ಮಕ್ಕಳ ಬೇನೆ. ಇದೆಲ್ಲಕ್ಕೂ ಮಿಗಿಲಾಗಿ ಸಾಲಗಾರರ ಕಾಟ. ಎಂತಹವರಿಗಾದರೂ ಎದೆಗುಂದಿ ಪರಿತಪಿಸುವಂತೆ ಮಾಡುವಂತಹ ಪರಿಸ್ಥಿತಿ. ಇದೇ ರಾಬರ್ಟ್ ಓವನ್ನಿನ ಕಾರ್ಯಕ್ಷೇತ್ರ.

ಮಾನವನ ಬಾಳಿನ ಏರಿಳಿತಗಳಿಗೆ ಅವನಿರುವ ವಾತಾವರಣವು ಬಹುಮಟ್ಟಿಗೆ ಕಾರಣವೆಂಬುದು ಓವನ್ನಿನ ದೃಢ ನಂಬಿಕೆ. ಆ ವಾತಾವರಣವನ್ನು ಪರಿಷ್ಕರಿಸುವುದೇ ಸಾಮಾಜಿಕ ಪುನರ್ರಚನೆಯ ಮೊದಲನೆಯ ಹಂತ. ಆದುದರಿಂದ ಓವನ್ನನು ಮೊದಲು ಜನರಿಗೆ ನೈರ್ಮಲ್ಯದ ಮಹಿಮೆಯನ್ನು ಬೋಧಿಸಿ, ಅವರ ಮೈ, ಬಟ್ಟೆ ಮತ್ತು ವಸತಿಗಳ ಕೊಳೆಯನ್ನು ನಿರ್ಮೂಲಮಾಡಿದನು. ಅನಂತರ ಅವರಿಗೆ ಮೋಸವಿಲ್ಲದೆ ಸುಲಭ ಬೆಲೆಗೆ ಆಹಾರಸಾಮಗ್ರಿಗಳು ದೊರೆಯುವಂತೆ ಒಂದು ಅಂಗಡಿಯನ್ನು ಏರ್ಪಡಿಸಿದನು. ಊಟ, ಬಟ್ಟೆ ಕೊಟ್ಟು ಅನಾಥರಾದ ಮಕ್ಕಳ ಪೋಷಣೆಗೆ ತಕ್ಕ ವ್ಯವಸ್ಥೆ ಮಾಡಿದನು. ಶಿಶುಗಳ ಯೋಗಕ್ಷೇಮವನ್ನು ಮರೆಯಲಿಲ್ಲ. ಅವುಗಳ ಬೆಳವಣಿಗೆಗೆ ಅನುಕೂಲವಾಗುವಂತೆ ಶಿಶುವಿಹಾರಗಳನ್ನೇರ್ಪಡಿಸಿದನು.*

---

* ಈ ಪುಸ್ತಕಮಾಲೆಯಲ್ಲಿ ೨೨ನೆಯ ಕುಸುಮವಾಗಿ ಪ್ರಕಟಣೆಯಾಗಿರುವ ಶ್ರೀ ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್., ಅವರ "ಶಿಶುವಿಹಾರಗಳು" ಎಂಬ ಪುಸ್ತಕದಲ್ಲಿ ಹೆಚ್ಚು ವಿವರಗಳು ದೊರಕುವುವು.

ತನ್ನ ಗಿರಣಿಯಲ್ಲಿ ಕೆಲಸಮಾಡುವವರೆಲ್ಲರೂ ಒಂದೇ ಸಂಸಾರದವರೆಂದೇ ಓವನ್ನಿನ ಭಾವನೆ. ಒಗ್ಗಟ್ಟು ಮತ್ತು ಪರಸ್ಪರ ಸಹಾಯವೇ ತನ್ನ ಉದ್ಯಮಕ್ಕೆ ಅಡಿಗಲ್ಲೆಂದು ಭಾವಿಸಿ, ಅದಕ್ಕಾಗಿ ಹಗಲಿರುಳೂ ಶ್ರಮಿಸಿದನು. ಕೆಲಸಗಾರರಿಗೆಲ್ಲಾ ವಸತಿಗಳನ್ನೂ ನಾಟಕಶಾಲೆಗಳನ್ನೂ ಪುಸ್ತಕಭಂಡಾರಗಳನ್ನೂ ಏರ್ಪಡಿಸಿದುದಲ್ಲದೆ, ಅವರಲ್ಲೇ ಪರಸ್ಪರ ಸಹಾಯಬುದ್ಧಿಯು ಬೇರೂರಲು ಅವರೇ ಹಣಕೂಡಿಸಿ ಅಂಗಡಿಗಳನ್ನೇರ್ಪಡಿಸುವಂತೆ ಮಾಡಿದನು. ಮಿತವ್ಯಯವನ್ನು ಬೋಧಿಸಿ ಕೆಲಸಗಾರರಿಗೆ ಹಣಕೂಡಿಸುವ ಮಾರ್ಗವನ್ನು ತೋರಿಸಿಕೊಟ್ಟನು. ನಾನಾ ರೀತಿಯಲ್ಲಿ ಧಣಿಯಾದ ಅವನಿಗೂ ಕೆಲಸಗಾರರಿಗೂ ಪರಸ್ಪರ ಸೌಹಾರ್ದವು ನೆಲಸಿ ಓವನಿನ ಗಿರಣಿಯಲ್ಲಿ ಕೆಲಸವು ಹುರುಪಿನಿಂದಲೂ ಉತ್ಸಾಹದಿಂದಲೂ ನಡೆಯತೊಡಗಿತು. ಇದರಿಂದ ಆ ಗಿರಣಿಗೆ ಸಂಬಂಧಪಟ್ಟ ಪ್ರತಿಯೊಬ್ಬನ ಸಂಪಾದನೆಯೂ ಹೆಚ್ಚಿ ಸಂಪದಭಿವೃದ್ಧಿಯಾಯಿತು. ಪರಸ್ಪರ ಉಪಕಾರ ನೀತಿಯನ್ನನುಸರಿಸಿ ಗಿರಣಿ ನಡೆಸಿದುದರ ಫಲವು ಕಣ್ಣೆದುರಿಗೆ ಬಂದು ನಿಂತಿತು.

ಓವನ್ನನು ಇಷ್ಟನ್ನು ಸಾಧಿಸಿದ ನಂತರ ತಾನೂ ಮತ್ತು ತನ್ನ ಗಿರಣಿಯ ಕೆಲಸಗಾರರೂ ಒಗ್ಗಟ್ಟು ಮತ್ತು ಸಹಕಾರಗಳ ಸಹಾಯದಿಂದ ಸಾಧಿಸಿದುದನ್ನು ಇತರ ಗಿರಣಿಗಳ ಮಾಲೀಕರಿಗೆ ತಿಳಿಸಿದನು ; ಅವರೂ ಸಹಾ ಇದರಂತೆಯೇ ನಡೆಯುವುದು ಉತ್ತಮವೆಂದು ಸಲಹೆ ಇತ್ತನು. ಆದರೆ ಅವರು ಯಾರೂ ಅವನಮಾತಿಗೆ ಕಿವಿಗೊಡದೆ ತಮ್ಮ ಹಳೆಯ ಮಾರ್ಗದಲ್ಲೇ ಮುಂದುವರಿದರು. ಓವನ್ನನು ಒಬ್ಬೊಂಟಿಗನಾಗಿದ್ದರೂ ಧೈರ್ಯಗೆಡಲಿಲ್ಲ. ತನ್ನ ಆಪ್ತಮಿತ್ರರ ಬೆಂಬಲಪಡೆದು ಕೆಲಸಗಾರರ ಹಿತಸಾಧನೆಗಾಗಿ ಸರ್ಕಾರದವರಿಂದ ಕಾನೂನು ಮಾಡಿಸಲು ಉದ್ಯುಕ್ತನಾದನು. ಕೆಲಸಗಾರರನ್ನು ಅವರಲ್ಲೇ ಪರಸ್ಪರ ಬೆಂಬಲದಿಂದ ತಮ್ಮ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಲು ತಕ್ಕ ಉದ್ಯಮಗಳನ್ನು ಕೈಗೊಳ್ಳುವಂತೆ ಪ್ರೇರಿಸಿದನು. ಆತನೂ ಮತ್ತು ಆತನ ಗೆಳೆಯರೂ ಕೆಲಸಗಾರರೊಡನೆ ಸೇರಿ ಅನೇಕ ಸಾಮೂಹಿಕ ಉದ್ಯಮಗಳನ್ನು ಕೈಕೊಂಡು ನಡೆಸಿದರು.

ಓವನ್ನನು ಸಾಧಿಸಲು ಯತ್ನಿಸಿದುದು ಮೂರು ಕಾರ್ಯಗಳು. ಮೊದಲನೆಯದು, ಗಿರಣಿಯ ಕೆಲಸಗಾರರಿಗೆ ಅತ್ಯಾವಶ್ಯಕವಾದ ಜೀವನದ ಸೌಕರ್ಯಗಳನ್ನೇರ್ಪಡಿಸುವುದು. ಎರಡನೆಯದು, ಗಿರಣಿಯ ಕೆಲಸಗಾರರ ಹಿತದಲ್ಲಿ ಕಾನೂನುಮಾಡುವಂತೆ ಸರ್ಕಾರವನ್ನು ಎಚ್ಚರಗೊಳಿಸುವುದು. ಮೂರನೆಯದು, ಸ್ವಸಾಮರ್ಥ್ಯದಿಂದಲೇ ಕೆಲಸಗಾರರು ತಮ್ಮ ಬದುಕನ್ನೂ ಬಾಳನ್ನೂ ಉತ್ತಮಪಡಿಸಿಕೊಳ್ಳುವಂತೆ ಅವರ ಜೀವನವಿಧಾನವನ್ನು ಮಾರ್ಪಡಿಸುವುದು. ಈ ಮೂರು ಸಾಧನೆಗಳೂ ಈಗ ನಮ್ಮಲ್ಲಿ ಹಲವು ಕಡೆ ಬಳಕೆಗೆ ಬಂದಿರುವುದರಿಂದ ಅವು ತೀರ ಸಾಮಾನ್ಯವಾಗಿ ನಮಗೆ ಕಾಣಬಹುದು. ಆದರೆ ಆಗಿನ ಕಾಲದಲ್ಲಿ ಸರ್ಕಾರಕ್ಕೂ ಮತ್ತು ಗಿರಣಿಮಾಲೀಕರಿಗೂ ಕೆಲಸಗಾರರ ವಿಷಯದಲ್ಲಿದ್ದ ತಿರಸ್ಕಾರಭಾವನೆಯನ್ನೂ, ಕೆಲಸಗಾರರ ನಿಸ್ಸಹಾಯ, ನಿರುತ್ಸಾಹಸ್ಥಿತಿಯನ್ನೂ ನಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಂಡರೆ ಓವನ್ನಿನ ಪ್ರಯತ್ನಗಳ ಮಹತ್ವ ನಮಗೆ ಮನವರಿಕೆಯಾಗುವುದು.

ಓವನ್ನಿನ ಪ್ರಯತ್ನಗಳು ಆತನು ನಿರೀಕ್ಷಿಸಿದಷ್ಟು ಫಲಕಾರಿಯಾಗಲಿಲ್ಲ. ಆದರೂ ಅವನು ತನ್ನ ಶಕ್ತಿ ಉತ್ಸಾಹಗಳಿಂದ ತನ್ನ ಕಾರ್ಯಕ್ಷೇತ್ರವನ್ನು ಬಹು ಚೆನ್ನಾಗಿ ಹದಗೊಳಿಸಿದನು. ಅವನು ಬಿತ್ತಿದ ತತ್ವಗಳು ಉತ್ಕೃಷ್ಟವಾದವು; ಆದುದರಿಂದ ಕಾಲಕ್ರಮದಲ್ಲಿ ಉತ್ತಮ ಫಲ ದೊರಕಿತು. ಆತನ ಜೀವಮಾನ ಕಾಲದಲ್ಲೇ ಕೆಲಸಗಾರರಿಗೆ ಅನುಕೂಲವಾದ ಕಾನೂನುಗಳು ಆಚರಣೆಗೆ ಬಂದುವು; ತನ್ನ ವೃದ್ಧಾಪ್ಯದಲ್ಲಿ ಸಹಕಾರ ಪದ್ಧತಿಯು ಬೆಳೆದು ಹರಡಿದುದನ್ನು ನೋಡಿ ಹಿಗ್ಗುವ ಸುಯೋಗವೂ ಅವನದಾಯಿತು. ಧಣಿಗಳಿಗೂ ಕೆಲಸಗಾರರಿಗೂ ಇರುವ ಸೌಹಾರ್ದವೇ ಕೈಗಾರಿಕೆಗಳ ಏಳಿಗೆಯ ಅಡಿಗಲ್ಲೆಂಬ ಭಾವನೆಯು ಕಾಲಕ್ರಮದಲ್ಲಿ ಎಲ್ಲರಿಗೂ ಮನವರಿಕೆಯಾಯಿತು.

ಓವನ್ನನು ಹಾಕಿಕೊಟ್ಟ ಮೇಲ್ಪಂಕ್ತಿಗನುಸಾರವಾಗಿ ಸಹಕಾರ ಜೀವನವನ್ನು ಕಾರ್ಯರೂಪಕ್ಕೆ ತಂದವರು ಲ್ಯಾಂಕಾಷೈರಿಗೆ ಸೇರಿದ ರಾಕ್‌ಡೇಲ್ ಎಂಬ ಊರಿನ ಇಪ್ಪತ್ತೆಂಟು ನೇಯ್ಗೆಯವರು. ಇವರು ಕೇವಲ ಸಾಮಾನ್ಯ ದರ್ಜೆಯ ಜನರು. ಇವರು ಆ ಊರಿನ ಗಿರಣಿಯಲ್ಲಿ ಕೆಲಸಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಗಿರಣಿ ಮಾಲೀಕರು

ಕೆಲಸಗಾರರ ಅನುಕೂಲಕ್ಕೆಂದು ಗಿರಣಿಯ ಆವರಣದಲ್ಲೇ ದಿನಸಿ ಮತ್ತು ಬಟ್ಟೆ ಚಿಲ್ಲರೆ ಅಂಗಡಿಯನ್ನಿಟ್ಟು ಕೆಲಸಗಾರರೆಲ್ಲರೂ ಅಲ್ಲೇ ಕೊಳ್ಳುವಂತೆ ಒತ್ತಾಯಪಡಿಸುತ್ತಿದ್ದರು. ಈ ರೀತಿಯಲ್ಲಿ ಲಾಭ ಪಡೆಯುವುದೊಂದೇ ಅಲ್ಲದೆ ಕೆಲಸಗಾರರನ್ನೂ ಹತೋಟಿಯಲ್ಲಿಡಲು ಪ್ರಯತ್ನಪಡುವುದೂ ಆ ಕಾಲದ ವಾಡಿಕೆಯಾಗಿತ್ತು. ಇದನ್ನು ಪ್ರತಿಭಟಿಸಲು ೧೮೪೪ರಲ್ಲಿ ಆ ಗಿರಣಿಯ ಕೆಲಸಗಾರರು ಒಂದು ಮುಷ್ಕರಹೂಡಿದರು. ಇದು ನಿಷ್ಫಲವಾಗಿ ಅವರ ಪಾಡು ಇನ್ನೂ ಕಷ್ಟಕ್ಕೀಡಾಯಿತು. ಆದರೂ ಧೈರ್ಯಗೆಡದೆ ಸಮಯ ದೊರೆತಾಗಲೆಲ್ಲ ಕೆಲಸಗಾರರು ಸಭೆ ಸೇರಿ ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಲು ವಿಧಾನಗಳನ್ನು ಚರ್ಚಿಸುತ್ತಿದ್ದರು. ರಾಕ್‌ಡೇಲ್ ಊರಿನಲ್ಲಿ ನಡೆಯುತ್ತಿದ್ದ ಇಂಥಾ ಸಭೆಗಳೊಂದರಲ್ಲಿ ಅದೇ ಊರಿನ ಚಾರಲ್ಸ್ ಹೋವರ್ತ್ ಎಂಬ ನೇಯ್ಗೆಯವನು ಸಹಕಾರಿ ಉಗ್ರಾಣವೊಂದನ್ನು ಸ್ಥಾಪಿಸುವ ಯೋಜನೆಯನ್ನು ಪ್ರಸ್ತಾಪಿಸಿದನು. ಆರಂಭದಲ್ಲಿ ಆತನ ಗೆಳೆಯರು ಆ ಯೋಜನೆಯ ವಿಷಯದಲ್ಲಿ ಉತ್ಸಾಹ ತೋರಿಸಲಿಲ್ಲ. ಕೆಲವರು ಅದನ್ನು ಅಲ್ಲಗಳೆಯಲು ಕೂಡ ಹಿಂಜರಿಯಲಿಲ್ಲ. ಆದರೂ ಕೊನೆಗೆ ಹೋವರ್ತನ ಉತ್ಸಾಹಭರಿತವಾದ ವಾದಕ್ಕೆ ತಲೆಬಾಗಿ ಆತನು ಸೂಚಿಸಿದ ಉದ್ಯಮವನ್ನು ಕೈಕೊಂಡು ತಮ್ಮ ಬದುಕು ಮತ್ತು ಬಾಳನ್ನು ಉತ್ತಮಪಡಿಸಿಕೊಳ್ಳಲು ನಿಶ್ಚಯಿಸಿದರು. ಈ ಹೊಸ ಉದ್ಯಮಕ್ಕೆ ಆ ಊರಿನ ೨೮ ಜನ ನೇಯ್ಗೆಯವರು ಸೇರಲು ಒಪ್ಪಿದರು. ಇವರೇ ಸಹಕಾರದ ಇತಿಹಾಸದಲ್ಲಿ ಪ್ರಸಿದ್ಧರಾದ "ರಾಕ್‌ಡೇಲಿನ ಅಗ್ರಗಾಮಿಗಳು."

ಯಾವ ಉದ್ಯಮಕ್ಕೇ ಆಗಲಿ ಸ್ವಲ್ಪ ಶ್ರಮಪಟ್ಟರೆ ಒಪ್ಪಿಗೆ ದೊರೆಯುವುದು. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಬಹು ಕಷ್ಟ. ನಮ್ಮ ರಾಕ್‌ಡೇಲ್ ನೆಯ್ಗೆಯವರು ಬಂಡವಾಳವನ್ನೊದಗಿಸುವುದು ಹೇಗೆ? ಇದು ಅವರ ಮೊದಲನೆಯ ಸಮಸ್ಯೆಯಾಯಿತು. ಅವರಿಗೆ ಬರುತ್ತಿದ್ದ ಕೂಲಿ ಜೀವನಕ್ಕೆ ಸಾಲದಾಗಿದ್ದರೂ ಅವರು ದೃಢಸಂಕಲ್ಪರಾದುದರಿಂದ ಸಾಲಕ್ಕೆ ಹೋಗದೆ ತಾವು ಸಂಪಾದಿಸಿದ ಕೂಲಿಯ ಅಲ್ಪಸ್ವಲ್ಪವನ್ನು ಕೂಡಿಡುವ ಪ್ರಯತ್ನವನ್ನು ಹೂಡಿದರು. ಪ್ರತಿಯೊಬ್ಬನೂ ವಾರವಾರವೂ ಮೂಲಬಂಡವಾಳಕ್ಕಾಗಿ ತನ್ನ ಕೂಲಿಯಿಂದ ಚಂದಾ

ಕೊಡುತ್ತಾ ಬಂದನು. ಈ ರೀತಿ ಹಲವು ತಿಂಗಳ ಕಾಲ ತಮ್ಮ ಪ್ರತಿಜ್ಞೆಯನ್ನು ಸಾಧಿಸಿದನಂತರ ಒಬ್ಬೊಬ್ಬರು ಕೂಡಿಟ್ಟ ಹಣವು ಒಂದೊಂದು ಪೌಂಡು ಮೊತ್ತವಾಯಿತು. ಒಟ್ಟು ಬಂಡವಾಳ ೨೮ ಪೌಂಡುಗಳಾದುವು.

ಈ ಮಧ್ಯೆ ಆಗಾಗ ಸಭೆ ಸೇರಿ ತಮ್ಮ ಯೋಜನೆಗೆ ಸಂಬಂಧಪಟ್ಟ ಪ್ರತಿಯೊಂದು ವಿಷಯವನ್ನು ವಿಚಾರಮಾಡಿ ತಮ್ಮ ತೀರ್ಮಾನಗಳನ್ನು ಬರೆದಿಡುತ್ತಿದ್ದರು. ಅವರು ತೀರ್ಮಾನಿಸಿದ ಉದ್ದೇಶಗಳಲ್ಲಿ ಇವು ಗಮನಾರ್ಹವಾದುವು—

೧. ಸಂಘದ ಸದಸ್ಯರ ಗೃಹಕೃತ್ಯಕ್ಕೆ ಬೇಕಾದ ಆಹಾರ ಸಾಮಾಗ್ರಿಗಳು ಮತ್ತು ಬಟ್ಟೆಬರೆ ಮುಂತಾದುವುಗಳನ್ನು ಒದಗಿಸುವ ಒಂದು ಸಹಕಾರಿ ಉಗ್ರಾಣವನ್ನು ಸ್ಥಾಪಿಸುವುದು.

೨. ಸಂಘದ ಸದಸ್ಯರ ವಾಸಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟುವುದು ಅಥವಾ ಕೊಳ್ಳುವುದು.

೩. ಸದಸ್ಯರಿಗೆ ಬೇಕಾದ ಸಾಮಾನುಗಳನ್ನು ಕ್ರಮೇಣ ತಾವೇ ತಯಾರಿಸುವುದು ಮತ್ತು ತನ್ಮೂಲಕ ಸದಸ್ಯರುಗಳಲ್ಲಿ ನಿರುದ್ಯೋಗಿಗಳಾಗಿರುವವರಿಗೆ ಕೆಲಸ ಒದಗಿಸುವುದು.

೪. ಸದಸ್ಯರಿಗೆ ಇನ್ನೂ ಹೆಚ್ಚು ಉದ್ಯೋಗವನ್ನು ಕಲ್ಪಿಸಿಕೊಡಲೂ ಮತ್ತು ಸಂಘಕ್ಕೆ ಅಗ್ಗವಾಗಿ ಒಳ್ಳೆಯ ದವಸಧಾನ್ಯಗಳು, ಕಾಯಿಪಲ್ಯಗಳು, ಹಣ್ಣುಹಂಪಲುಗಳು ಇವನ್ನು ದೊರಕಿಸಲೂ ಜಮೀನನ್ನು ಕ್ರಯಕ್ಕಾಗಲಿ ಗುತ್ತಿಗೆಗಾಗಲಿ ಪಡೆದು ವ್ಯವಸಾಯಕ್ಷೇತ್ರಗಳನ್ನೇರ್ಪಡಿಸುವುದು.

೫. ಸಾಧ್ಯವಾದಷ್ಟು ಜಾಗ್ರತೆಯಾಗಿ ಸಂಘವು ತನ್ನದೇ ಒಂದು ಸಾಮಾಜಿಕ ವ್ಯವಸ್ಥೆಯನ್ನು ಏರ್ಪಡಿಸಿಕೊಂಡು ಅದರ ಮೂಲಕ ಸದಸ್ಯರಿಗೆಲ್ಲಾ ಜೀವನಕ್ಕೆ ಸಾಕಾದಷ್ಟು ಉಪಪತ್ತಿ ದೊರೆಯುವಂತೆ ಮಾಡುವುದು. ಇದಕ್ಕೆ ಸಾಧನವಾಗುವಂತೆ ದೇಶದಲ್ಲಿ ವಿದ್ಯಾಭ್ಯಾಸ ಪದ್ಧತಿಯನ್ನೂ ಸರ್ಕಾರಕ್ರಮವನ್ನೂ ಬಲಪಡಿಸಲು ಪುನರ್ವ್ಯವಸ್ಥೆಗೊಳಿಸುವುದು. ಅದರೆ ತಮ್ಮದೇ ಒಂದು ಸುವ್ಯವಸ್ಥಿತವಾದ ವಸಾಹತನ್ನು (Colony) ಸ್ಥಾಪಿಸುವುದು.

ಹೀಗೆ ಕೂಲಂಕಷವಾಗಿ ಯೋಚಿಸಿ ತಯಾರಿಸಿದ ತಮ್ಮ ಯೋಜನೆಯನ್ನು ಸಾಕಾದಷ್ಟು ಬಂಡವಾಳ ಒದಗಿದ ಕೂಡಲೆ ಕಾರ್ಯರೂಪಕ್ಕೆ ತಂದರು. ರಾಕ್‌ಡೇಲಿನ ಟೋಡ್ ಓಣಿಯಲ್ಲಿ ಒಂದು ಮಳಿಗೆಯನ್ನು ಗೊತ್ತುಮಾಡಿ ಅಲ್ಲಿ ಮೊಟ್ಟಮೊದಲು ಸಂಸಾರಕ್ಕೆ ಅತ್ಯಾವಶ್ಯಕವಾಗಿ ಬೇಕಾದ ನಾಲ್ಕು ಸಾಮಾನುಗಳನ್ನು ಮಾತ್ರ ಮಾರಾಟಕ್ಕಿಟ್ಟು ೧೮೪೪ನೆಯ ಇಸವಿ ಡಿಸೆಂಬರ್ ೨೧ನೆಯ ತಾರೀಖು ಸಹಕಾರ ಉಗ್ರಾಣದ ಆರಂಭೋತ್ಸವವನ್ನು ನೆರವೇರಿಸಿದರು. ಉಗ್ರಾಣಕ್ಕೆ ಸಂಬಂಧಪಟ್ಟ ಕೆಲಸವನ್ನು ತಮ್ಮಲ್ಲೇ ಹಂಚಿಕೊಂಡರು. ನವೀನವಾದ ಈ ಉದ್ಯಮವನ್ನು ನೋಡಿದ ಜನರು ಸಹಕಾರ ಅಗ್ರಗಾಮಿಗಳನ್ನು ಹುಚ್ಚರೆಂದು ಹೀಯಾಳಿಸಲು ಕೂಡ ಹೇಸಲಿಲ್ಲ. ಮತ್ತೆ ಕೆಲವರು ಗೇಲಿ ಮಾಡುವ ಉದ್ದೇಶದಿಂದ ಉಗ್ರಾಣದಲ್ಲಿ ದೊರೆಯದ ಸಾಮಾನುಗಳು ಬೇಕೆಂದು ಕೇಳಿ ಇಲ್ಲವೆಂದು ಹೇಳಿದಾಗ ಪರಿಹಾಸ್ಯದ ಮಾತುಗಳನ್ನಾಡುತ್ತಿದ್ದರು. ಬರಿಯ ಬಡುಗಳನ್ನು ನೋಡಿ ನಕ್ಕವರಂತೂ ಎಷ್ಟೋ ಜನ. ಸರಿಯಾದ ಅನುಭವವಿಲ್ಲದ ಕಾರಣ, ಉತ್ಸಾಹಿಗಳಾದ ಸದಸ್ಯರುಗಳಿಗೂ ಬೇಸರ ಹುಟ್ಟಿಸುವಂಥ ಸನ್ನಿವೇಶಗಳು ಕೂಡ ಅನೇಕವೇಳೆ ಒದಗುತ್ತಿದ್ದುವು. ದೂರದಿಂದ ನಡೆದುಬಂದ ಸದಸ್ಯರು ತಮಗೆ ಬೇಕಾದ ಸಾಮಾನಿಲ್ಲದೆ ಬರಿಯ ಕೈಯಲ್ಲಿ ವಾಪಸ್ಸು ಹೋಗಬೇಕಾಗಿತ್ತು. ಅದನ್ನು ನೋಡಿ ಸಹಾನುಭೂತಿಯಿಲ್ಲದ ನೆರೆಹೊರೆಯವರೂ ಸಹೋದ್ಯೋಗಿಗಳೂ ಗೇಲಿಮಾಡುತ್ತಿದ್ದರು. ಇವೇ ಮೊದಲಾದ ಅನೇಕ ಎದೆಗುಂದಿಸುವ ಸನ್ನಿವೇಶಗಳಿದ್ದುವು. ಹೀಗಿದ್ದರೂ ನಮ್ಮ ೨೮ ನೆಯ್ಗೆಯವರೂ ಮತ್ತು ಅವರ ಕುಟುಂಬಕ್ಕೆ ಸೇರಿದವರೂ ಒಕ್ಕಟ್ಟಿನಿಂದಲೂ ದೃಢಸಂಕಲ್ಪದಿಂದಲೂ ಪ್ರಾಮಾಣಿಕತೆಯಿಂದಲೂ ತಮ್ಮ ಪ್ರತಿಜ್ಞಾಪಾಲನೆಗಾಗಿ ತಮಗೆ ಬೇಕಾದ ಸಾಮಾನುಗಳನ್ನೆಲ್ಲಾ ತಮ್ಮದಾದ ಸಹಕಾರಿ ಉಗ್ರಾಣದಲ್ಲೇ ಕೊಳ್ಳುತ್ತಾ ಬಂದರು. ಕೊನೆಯಲ್ಲಿ ಸಂಕಲ್ಪ ಸಿದ್ಧಿಯಾಗುವುದೆಂಬ ನಿಶ್ಚಲ ಭರವಸೆಯು ಅವರಲ್ಲಿ ಮೂಡಿತ್ತು. ಇದಲ್ಲವೆ ಪ್ರಗತಿಗಾಮಿಗಳ ಕಾರ್ಯತತ್ಪರತೆ!

ಈ ರೀತಿ ಪ್ರಾರಂಭಿಸಿದ ರಾಕ್‌ಡೇಲ್ ಸಂಘವು ದಿನೇ ದಿನೇ ಅಭಿವೃದ್ಧಿಗೆ ಬಂದು ಮೊದಲನೆಯ ವರ್ಷದ ಕೊನೆಯಲ್ಲಿ ೭೧೦ ಪೌಂಡು

ಗಳ ಸಾಮಾನು ಬಿಕರಿಯಾಗಿ ೨೨ ಪೌಂಡುಗಳ ನಿವ್ವಳ ನಷೆ ತೇಲಿತು
ಇದರ ರಜತಮಹೋತ್ಸವದ ವರ್ಷದಲ್ಲಿ ಸದಸ್ಯರ ಸಂಖ್ಯೆ ೫,೮೦೦;
ವರ್ಷದ ಒಟ್ಟು ವ್ಯಾಪಾರ ೨,೩೬,೫೦೦ ಪೌಂಡುಗಳು. ನಿವ್ವಳ ನ
೨೮,೫೦೦ ಪೌಂಡುಗಳು. ಸಂಘದ ಎಂಭತ್ತನೆಯ ಹುಟ್ಟಿದ ಹಬ್ಬ
ವರ್ಷ ವ್ಯಾಪಾರ ಏಳುಲಕ್ಷ ಪೌಂಡುಗಳು. ಟೋಡ್ ಓಣಿಯ ಬಾಡಿ
ಮಳಿಗೆಯಲ್ಲಿ ಪ್ರಾರಂಭವಾದ ಈ ಸಹಕಾರ ಉಗ್ರಾಣವು ಈಗ ತನ್ನದೆ
ಆದ ದಿವ್ಯ ಭವನವನ್ನು ಪಡೆದಿದೆ. ೧೯೪೪ನೆಯ ಇಸವಿಯಲ್ಲಿ ಈ ಸಂಘ
ಶತಮಾನೋತ್ಸವವು ನೆರವೇರಲಿರುವುದು.

ಇಂಗ್ಲೆಂಡಿನ ಸಹಕಾರ ಸಂಸ್ಥೆಗಳಲ್ಲಿ ಹೆಚ್ಚು ಪ್ರಶಸ್ತಿ ಪಡೆದು
ಮುಂದುವರಿದಿರುವುವು ಈ ಸಹಕಾರಿ ಉಗ್ರಾಣಗಳೇ. ರಾಕ್‌ಡೇಲ
ಅಗ್ರಗಾಮಿಗಳ ಪ್ರಯತ್ನವು ಸಫಲವಾಗಿ ಅವರ ಬಾಳು ಉತ್ತಮ
ಗೊಂಡ ಸಮಾಚಾರವು ಎಲ್ಲೆಲ್ಲೂ ಹರಡಿ ಇತರ ಊರುಗಳಲ್ಲೂ ಈ
ತರದ ಸಂಘಗಳು ಏರ್ಪಟ್ಟುವು. ಅವೂ ರಾಕ್‌ಡೇಲ್ ಸಂಘದ ಶಿಸ್ತು
ಸಂಪ್ರದಾಯಗಳನ್ನೇ ಅನುಸರಿಸಿದುವು. ಸಹಕಾರ ಪ್ರಪಂಚದಲ್ಲಿ
"ರಾಕ್‌ಡೇಲ್ ತತ್ವಗಳು" ಎಂದು ಪ್ರಸಿದ್ಧಿಗೆ ಬಂದಿರುವುವು ಯಾವು
ವೆಂದರೆ—

೧. ಯಾವಾಗಲೂ ನಗದು ವ್ಯಾಪಾರ ನಡೆಸುವುದು.

೨. ಸಾಮಾನುಗಳನ್ನು ಪೇಟೆ ಧಾರಣೆಗೆ ಮಾರುವುದು.

೩. ನಿವ್ವಳ ನಷೆಯಲ್ಲಿ ಸ್ವಲ್ಪ ಭಾಗವನ್ನು ಆಪದ್ಧನವಾಗಿಯೂ
ಇನ್ನು ಸ್ವಲ್ಪ ಭಾಗವನ್ನು ಸಹಕಾರ ಪ್ರಚಾರಕ್ಕಾಗಿಯೂ ಇನ್ನೊಂದು
ಭಾಗವನ್ನು ಸದಸ್ಯರ ಬಾಳನ್ನು ಉತ್ತಮಪಡಿಸುವ ವಿದ್ಯಾಭ್ಯಾಸ
ಮುಂತಾದ ಕೆಲಸಗಳಿಗಾಗಿಯೂ ಮೀಸಲಾಗಿಡುವುದು.

೪. ಮೂಲಬಂಡವಾಳಗಾರರಿಗೆ ಕ್ಲುಪ್ತವಾದ ಬಡ್ಡಿಯನ್ನು
ಹಂಚಿ ಉಳಿದ ನಷೆಯಲ್ಲಿ ಅಯಾ ಸದಸ್ಯರು ಮಾಡಿದ ವ್ಯಾಪಾರದ ಮೊಬ
ಲಗಿನ ಮೇಲೆ ದಾಮಾಷಾ "ರಿಬೇಟ್" ಹಂಚುವುದು.

೫. ಸಂಘದ ಅಡಳಿತದಲ್ಲಿ ಎಲ್ಲರೂ ಭಾಗವಹಿಸಿ ಕೆಲಸಮಾಡಲು
ಪೂರ್ಣ ಅವಕಾಶ ಕಲ್ಪಿಸುವುದು.

೭. ಮತ ಸಂಬಂಧವಾದ ವಿಷಯಗಳಲ್ಲಿ ತಾಟಸ್ಥ್ಯನೀತಿಯನ್ನು ಅನುಸರಿಸುವುದು.

ಈ ತತ್ವಗಳನ್ನನುಸರಿಸಿ ಕೆಲಸಮಾಡಿದ ಪ್ರತಿಯೊಂದು ಸಹಕಾರಿ ಉಗ್ರಾಣವೂ ಊರ್ಜಿತವಾಗಿದೆ.

ರಾಕ್‌ಡೇಲ್ ಅಗ್ರಗಾಮಿಗಳು ಸಾಧಿಸಲು ಪ್ರಯತ್ನಪಟ್ಟ ಉದ್ದೇಶಗಳು ಐದು. ಈ ಪೈಕಿ ಮೊದಲನೆಯ ನಾಲ್ಕು ಕಾಲ ಕ್ರಮದಲ್ಲಿ ಕೈಗೂಡಿದುವೆಂದು ಹೇಳಬಹುದು. ಐದನೆಯದಾದ ಸಮಾಜದ ಆರ್ಥಿಕ ಪುನರ್ವ್ಯವಸ್ಥೆಯ ಯೋಜನೆಯು ಕಾರ್ಯ ರೂಪಕ್ಕೆ ಬರಲಿಲ್ಲ. ಈ ಐದನೆಯ ಉದ್ದೇಶಸಾಧನೆ ಬಹು ಕಷ್ಟವಾದುದಾದರೂ ಅದನ್ನು ಅಗ್ರಗಾಮಿಗಳು ಮೊದಲಿನಿಂದಲೂ ತಮ್ಮ ಒಂದು ಧ್ಯೇಯವನ್ನಾಗಿಟ್ಟುಕೊಂಡಿದ್ದುದು ಅವರ ಅಂತರಂಗ ಮನೋಭಾವನೆ ಯಾವರೀತಿ ಇದ್ದಿತೆಂಬುದನ್ನು ಸೂಚಿಸುತ್ತದೆ.

ಈಗ ಇಂಗ್ಲೆಂಡಿನಲ್ಲಿ ರಾಕ್‌ಡೇಲ್ ಅಗ್ರಗಾಮಿಗಳು ತೋರಿಸಿ ಕೊಟ್ಟ ದಾರಿಯನ್ನನುಸರಿಸಿ ಸುಮಾರು ೧,೨೦೦ ಸಹಕಾರ ಉಗ್ರಾಣಗಳು ಕೆಲಸಮಾಡುತ್ತಿವೆ. ಸದಸ್ಯರ ಸಂಖ್ಯೆ ಎಪ್ಪತ್ತೆರಡು ಲಕ್ಷಕ್ಕೆ ಮೀರಿದೆ. ಉಗ್ರಾಣಗಳು ಸದಸ್ಯರುಗಳ ಸಂಸಾರಕ್ಕೆ ಬೇಕಾದ ಸಾಮಗ್ರಿಗಳೆಲ್ಲವನ್ನೂ ಒದಗಿಸುತ್ತಿರುವುವು. ಅನೇಕ ಸಾಮಾನುಗಳು ಸಹಕಾರಿಗಳೇ ನಡೆಸುತ್ತಿರುವ ಗಿರಣಿಗಳಲ್ಲಿ ತಯಾರಾಗುತ್ತಿವೆ.

ರಾಕ್‌ಡೇಲ್ ತತ್ವಗಳು ಬಹಳಕಾಲದವರೆಗೂ ಪಾಲನೆಯಾದವು. ಅದರೆ ಈಚೀಚಿಗೆ ನಗದು ವ್ಯಾಪಾರದ ತತ್ವವು ಸಡಲಿ ಸಾಲದ ವ್ಯಾಪಾರವು ಅಲ್ಲಲ್ಲಿ ತಲೆ ಎತ್ತುವ ಸೂಚನೆಗಳು ಕಾಣಬರುತ್ತಿವೆ. ಇದು ವಿನಾ ಇತರ ತತ್ವಗಳು ಆಚರಣೆಯಲ್ಲಿ ಈಗಲೂ ಯಾವ ಬದಲಾವಣೆಯೂ ಹೊಂದದೆ ನಡೆದು ಬರುತ್ತಿವೆ.

ಒಂದೊಂದು ಸಹಕಾರಿ ಉಗ್ರಾಣವೂ ತನಗೆ ಬೇಕಾದಷ್ಟು ಸಾಮಾನುಗಳನ್ನು ಚಿಲ್ಲರೆಯಾಗಿ ಪೇಟೆಯಲ್ಲಿ ಕೊಂಡುಕೊಂಡು ಬಂದು ಮಾರಾಟಕ್ಕಾಗಿ ಇಡುತ್ತಿದ್ದಿತು. ಇದರಲ್ಲಿ ಎರಡು ವಿಧವಾದ ಕೊರತೆಯಿದ್ದಿತು. ಸರಿಯಾದ ಸಾಮಾನನ್ನು ಸರಿಯಾದ ಬೆಲೆಗೆ ಕೊಳ್ಳುವ ಶಕ್ತಿ ಉಗ್ರಾಣಗಳ ವ್ಯವಸ್ಥಾಪಕರಿಗೂ ಇರಲಿಲ್ಲ. ಚಿಲ್ಲರೆಯಾಗಿ ಸಾಮಾನು

ಗಳನ್ನು ಕೊಳ್ಳುವುದರಿಂದ ಅವನ್ನು ಸುಲಭ ಧಾರಣೆಗೆ ಮಾರುವುದು ಕೆಲವು ಸಮಯಗಳಲ್ಲಿ ಸಾಧ್ಯವಾಗುತ್ತಿರಲಿಲ್ಲ. ಉಗ್ರಾಣಗಳೆಲ್ಲಾ ಒಟ್ಟುಗೂಡಿ, ಸಾಮಾನುಗಳನ್ನು ರಾಶಿವ್ಯಾಪಾರದಲ್ಲಿ ಕೊಂಡು ಉಗ್ರಾಣಗಳಿಗೆ ಸರಬರಾಜು ಮಾಡುವ ಸಂಘವನ್ನು ಏರ್ಪಡಿಸಿದರೆ ಈ ತೊಂದರೆಗಳನ್ನು ನಿವಾರಣೆಮಾಡಬಹುದೆಂಬ ಸೂಚನೆ ಬಂತು. ೧೮೬೪ ರಲ್ಲಿ ರಾಶಿ ವ್ಯಾಪಾರದ ಅನುಕೂಲಕ್ಕೆ ಇಂಗ್ಲೆಂಡು ದೇಶಕ್ಕೆಲ್ಲಾ ಅನ್ವಯಿಸುವಂತೆ ಒಂದು "ಹೋಲ್‌ಸೇಲ್" ಅಥವ ಠೋಕು ಸಂಘವು ಸ್ಥಾಪಿತವಾಯಿತು. ಈ ಠೋಕು ಸಂಘದ ಸದಸ್ಯರು ಸಹಕಾರಿ ಉಗ್ರಾಣಗಳು ; ಇದರ ನಡವಳಿಕೆಯೂ ರಾಕ್‌ಡೇಲ್ ತತ್ವಗಳ ಆಧಾರದ ಮೇಲೆ ಏರ್ಪಾಡಾಯಿತು. ಒಂಟೊಂಟಿಯಾಗಿ ಕೆಲಸಮಾಡುತ್ತಿದ್ದ ಸಹಕಾರಿ ಉಗ್ರಾಣಗಳೆಲ್ಲವೂ ಇದರ ಪ್ರಯೋಜನವನ್ನರಿತು ಸದಸ್ಯರಾಗಿ ಸೇರಿ ಠೋಕು ಸಂಘವನ್ನು ಮತ್ತಷ್ಟು ಬಲಪಡಿಸಿದುವು. ೧೮೬೮ ರಲ್ಲಿ ಸ್ಕಾಟ್ಲೆಂಡಿಗೆ ಅನ್ವಯಿಸುವಂತೆ ಮತ್ತೊಂದು ಠೋಕು ಸಂಘ ಸ್ಥಾಪಿತವಾಯಿತು. ಇವೆರಡು ಠೋಕುಗಳು ಸದಸ್ಯ ಸಹಕಾರಿ ಉಗ್ರಾಣಗಳಿಗೆ ಬೇಕಾದ ಸಾಮಾನುಗಳನ್ನೆಲ್ಲಾ ರೈತನಿಂದಲೇ ಅಥವಾ ಕಾರ್ಖಾನೆಯಿಂದಲೇ ನೇರವಾಗಿ ಒಟ್ಟೊಟ್ಟಿಗೆ ಕೊಂಡು ಸನಗನ್ನು ಉಗ್ರಾಣಗಳಿಗೆ ಒದಗಿಸುವ ಏರ್ಪಾಟಾಯಿತು ಇದರಿಂದ ಮಧ್ಯಸ್ಥಿಕೆಯ ವರ್ತಕರಾದ ದಳ್ಳಾಳಿಗಳಿಗೆ ಅನಾವಶ್ಯಕವಾಗಿ ಕೊಡುತ್ತಿದ್ದ ಲಾಭವೆಲ್ಲವೂ ಉಳಿತಾಯವಾಗಿ ಸಾಮಾನುಗಳು ಅತಿ ಸುಲಭ ಬೆಲೆಗೆ ದೊರಕುವಂತಾಯಿತು. ಈ ವ್ಯವಸ್ಥೆಯಿಂದ ರೈತರಿಗೂ ಕಾರ್ಖಾನೆಯವರಿಗೂ ಕೂಡ ಅನುಕೂಲವಾಯಿತು. ಕ್ಲುಪ್ತವಾದ ಗಿರಾಕಿ ದೊರೆತುದರಿಂದ ಗಿರಾಕಿಗಳ ಇಷ್ಟಾನುಸಾರ ಸಾಮಾನುಗಳನ್ನೊದಗಿಸಲು ಅವಕಾಶ ದೊರಕಿತು. ಹಿಂದೆ ಗಿರಾಕಿ ಸಂಪಾದಿಸಲು ಮಾಡಬೇಕಾಗಿದ್ದ ಅನೇಕ ಖರ್ಚು ಬಾಬುಗಳು ಉಳಿತಾಯವಾಗಿ ಅವರ ನಿವ್ವಳ ನಫೆಯು ಏರಿತು. ಸಾಮಾನುಗಳನ್ನು ಉತ್ಪತ್ತಿಮಾಡುವವರಿಗೂ ಉಪಯೋಗಿಸುವವರಿಗೂ ಈ ರೀತಿ ನೇರವಾದ ಸಂಬಂಧವನ್ನುಂಟುಮಾಡಿ ಪರಸ್ಪರ ಅನುಕೂಲಗಳನ್ನೊದಗಿಸುವುದು ಸಹಕಾರದ ಮುಖ್ಯೋದ್ದೇಶಗಳಲ್ಲೊಂದು.

ಕಾಲಕ್ರಮದಲ್ಲಿ ಈ ಶೋಕುಗಳೆರಡೂ ಬಂಡವಾಳ ಸಂಸ್ಥೆಗಳಿಂದ ಸಾಮಾನುಗಳನ್ನು ಕೊಳ್ಳುವುದನ್ನು ನಿಲ್ಲಿಸಿ ಸಹಕಾರ ತತ್ವದ ಆಧಾರದ ಮೇಲೆ ವ್ಯವಸಾಯ ಕ್ಷೇತ್ರವನ್ನೂ ಮತ್ತು ಗಿರಣಿ ಕಾರ್ಖಾನೆಗಳನ್ನೂ ಏರ್ಪಡಿಸಿ ಅವುಗಳಿಂದ ಸಾಮಾನುಗಳನ್ನು ಒದಗಿಸಲು ಮೊದಲುಮಾಡಿದುವು. ಮಾರಾಟವಾದ ಒಟ್ಟು ಸಾಮಾನುಗಳಲ್ಲಿ ಸುಮಾರು ಮೂರನೆಯ ಒಂದು ಭಾಗದಷ್ಟು ಈ ರೀತಿ ಸಹಕಾರ ಸಂಸ್ಥೆಗಳಲ್ಲಿ ತಯಾರಾದುವು. ಬಟ್ಟೆ, ಹೆಣಿಗೆ ಸಾಮಾನುಗಳು, ಸಾಬೂನು, ಮೇಣದಬತ್ತಿ, ಜೋಡು, ಟೋಪಿ, ಬಿಸ್ಕತ್ತು, ಚಾಕೊಲೆಟ್, ಟೀ, ಕಾಫಿ, ಕೋಕೊ, ಹಣ್ಣಿನ ರಸಾಯನ, ಪೀಠೋಪಕರಣ—ಈ ವಿವಿಧ ಸಾಮಾನುಗಳನ್ನು ಶೋಕುಗಳೇ ತಯಾರಿಸಿ ಒದಗಿಸುತ್ತಿವೆ. ಇವುಗಳ ಸಹಾಯಾಂಗಗಳಾಗಿ ಸ್ವಂತ ಬ್ಯಾಂಕು, ವಿಮಾ ಮತ್ತು ಯಾನ ವಾಹನಸೌಕರ್ಯಗಳನ್ನೊದಗಿಸುವ ಶಾಖೆಗಳು ಏರ್ಪಟ್ಟಿವೆ. ಹೊರದೇಶಗಳಲ್ಲಿ ಸ್ವಂತ ಮಳಿಗೆಗಳಿವೆ; ಆಹಾರಪದಾರ್ಥಗಳನ್ನೊದಗಿಸಲು ಸ್ವದೇಶದಲ್ಲೂ ಪರದೇಶಗಳಲ್ಲೂ ಸ್ವಂತ ತೋಟಗಳಿವೆ.

ರಾಕ್‍ಡೇಲ್ ಅಗ್ರಗಾಮಿಗಳು ಮೊದಲಿನಿಂದಲೂ ವಿದ್ಯಾಭ್ಯಾಸ ಮತ್ತು ಸಹಕಾರ ತತ್ವಪ್ರಚಾರಗಳಿಗೆ ಹೆಚ್ಚುಗಮನ ಕೊಟ್ಟರು. ಸಹಕಾರದ ಮೂಲತತ್ವಗಳು ಮನದಟ್ಟಾಗಬೇಕಾದರೆ ವಿದ್ಯಾಪ್ರಚಾರವು ಅತ್ಯಾವಶ್ಯಕ. ಅಲ್ಲದೆ ಬಂಡವಾಳ ಪ್ರಭುತ್ವ, ಸಮಾಜಸಮತಾವಾದ ಚಳವಳಿ ಇವುಗಳ ಮಧ್ಯೆ ಸಿಕ್ಕಿ ಸಹಕಾರಧ್ಯೇಯಗಳು ಮಲಿನವಾಗುವ ಸಂಭವವುಂಟು. ಆದುದರಿಂದಲೇ ಸಹಕಾರಸಂಘಗಳ ಲಾಭದಲ್ಲಿ ಕೊಂಚ ಭಾಗವನ್ನು ಸಹಕಾರ ಪ್ರಚಾರಕ್ಕಾಗಿ ಮೀಸಲಾಗಿಡುವ ಪದ್ಧತಿಯು ಇಂಗ್ಲೆಂಡಿನಲ್ಲಿ ಮೊದಲಿಂದಲೂ ವಾಡಿಕೆಗೆ ಬಂದಿದೆ. ೧೮೬೯ರಲ್ಲಿ ಸಹಕಾರ ಪ್ರಚಾರಕ್ಕಾಗಿಯೇ ಒಂದು ಸಂಘವು ಸ್ಥಾಪನೆಯಾಯಿತು. ಅದು ದಿನೇ ದಿನೇ ಅಭಿವೃದ್ಧಿಗೆ ಬರುತ್ತಿದೆ. ಈ ಪ್ರಚಾರ ಸಂಸ್ಥೆಗೆ ಸಹಕಾರಸಂಘಗಳು ತಮ್ಮ ತಮ್ಮ ವರಮಾನಕ್ಕೆ ತಕ್ಕಂತೆ ಚಂದಾ ಸಲ್ಲಿಸುವುವು. ಹೀಗೆ ವರ್ಷ ವರ್ಷವೂ ವಸೂಲಾಗುವ ಸುಮಾರು ಐವತ್ತುಸಾವಿರ ಪೌಂಡುಗಳಷ್ಟು ಚಂದಾಹಣವೇ ಇಂಗ್ಲೆಂಡಿನ ಸಹಕಾರ

ಪ್ರಚಾರ ಸಂಸ್ಥೆಯು ಕೈಕೊಂಡಿರುವ ನಾನಾವಿಧದ ಪ್ರಚಾರಕಾರ್ಯಕ್ರಮಕ್ಕೆ ಮೂಲಾಧಾರ.

ಕೈಗಾರಿಕೆಯೇ ಮುಖ್ಯ ಕಸಬಾಗಿರುವ ಇಂಗ್ಲೆಂಡಿನಲ್ಲಿ ಗಿರಣಿ ಕೆಲಸಗಾರರಿಗೆ ಕ್ಲುಪ್ತಬಟವಾಡೆ ಸಲ್ಲುವುದು. ಅವರುಗಳು ಸಂಸಾರಕ್ಕೆ ಬೇಕಾದ ಸಾಮಗ್ರಿಗಳನ್ನೊದಗಿಸಿಕೊಳ್ಳಲು ತಮ್ಮ ವರಮಾನವನ್ನು ಎಷ್ಟು ವಿತರಣೆಯಿಂದ ಖರ್ಚುಮಾಡಿದರೆ ಅಷ್ಟು ಸೌಖ್ಯ ದೊರೆಯುವುದೆಂಬುದನ್ನರಿತು ಕೆಲಸಗಾರರ ಕುಟುಂಬವರ್ಗದವರೆಲ್ಲರೂ ಸಹಕಾರಿ ಉಗ್ರಾಣಗಳಲ್ಲೇ ಎಲ್ಲಾ ವ್ಯವಹಾರಗಳನ್ನೂ ನಡೆಸುವರು. ನಿಷ್ಕರ್ಷೆಯಾದ ಬೆಲೆ, ಕರಾರುವಾಕು ತೂಕ ಮತ್ತು ಅಳತೆ; ಒಬ್ಬರಿಗೆ ಒಂದು ಇನ್ನೊಬ್ಬರಿಗೆ ಬೇರೊಂದು ಹೀಗೆ ಸಾಮಾನುಗಳನ್ನು ಕೊಡುವುದರಲ್ಲಿ ತಾರತಮ್ಯ ಪಕ್ಷಪಾತಗಳಿಲ್ಲ; ವ್ಯಾಪಾರದಲ್ಲಿ ಗುಟ್ಟುಗುಮಾನಿಗಳಿಗೆ ಅವಕಾಶವಿಲ್ಲ; ಸಂಸ್ಥೆಯು ಸ್ವಾಮಿತ್ವ ಸದಸ್ಯರದೇ ಎಂಬ ಭಾವನೆ—ಇವೇ ಮೊದಲಾದ ಅನುಕೂಲಭಾವನೆಗಳು ಸದಸ್ಯರುಗಳನ್ನು ಸಹಕಾರನಿಷ್ಠರನ್ನಾಗಿ ಮಾಡಿವೆ. ಚಿಕ್ಕ ಹುಡುಗರುಗಳು ತಮ್ಮ ತಂದೆತಾಯಿಗಳ ಪರವಾಗಿ ಸಲೀಸಾಗಿ ವ್ಯಾಪಾರ ನಡೆಸುವುದು ಈ ತರಹ ಸಂಸ್ಥೆಗಳಲ್ಲಿ ಕಾಣುವ ಸಾಧಾರಣದೃಶ್ಯ. ಅಲ್ಲದೆ ಸದಸ್ಯರುಗಳು ಮಾಡುವ ವ್ಯಾಪಾರದ ಮೊತ್ತದಮೇಲೆ ಸಹಕಾರ ಉಗ್ರಾಣಗಳು ಪ್ರತಿವರ್ಷವೂ "ರಿಬೇಟ್" (ಅದನ್ನು ಇಂಗ್ಲೆಂಡಿನಲ್ಲಿ "ಡಿವಿಡೆಂಡ್" ಅಥವಾ "ಡಿವಿ" ಎಂದು ಕರೆಯುತ್ತಾರೆ) ಹಂಚುವರು. ಈ ಲಾಭಾಂಶವು ಸದಸ್ಯನ ಗೃಹಿಣಿಗೆ ಸಲ್ಲಬೇಕಾದದ್ದೆಂದು ಆ ದೇಶದಲ್ಲಿ ಸಾಮಾನ್ಯವಾಗಿ ಅಂಗೀಕೃತವಾಗಿದೆ; ಇದು ಯಜಮಾನನ ತನಿಖೆಗೆ ಒಳಪಟ್ಟ ವರಮಾನವಲ್ಲವೆಂದು ಗಣಿಸುವುದು ವಾಡಿಕೆಯಾಗಿದೆ. ಆದುದರಿಂದ ರಿಬೇಟನ್ನು ಹೆಚ್ಚಿಸಿಕೊಳ್ಳಲು ಸಹಕಾರಿ ಉಗ್ರಾಣಗಳ ವಿಷಯದಲ್ಲಿ ಗೃಹಿಣಿಯರು ಹೆಚ್ಚು ಆಸಕ್ತಿ ಉತ್ಸಾಹಗಳನ್ನು ತೋರಿಸುವುದು ಸ್ವಾಭಾವಿಕವಾಗಿದೆ.

ಈ ಉಗ್ರಾಣಸಂಘಗಳು ಸದಸ್ಯರುಗಳಲ್ಲಿ ಮಿತವ್ಯಯ ಅಭ್ಯಾಸವನ್ನು ಹರಡುವುದಕ್ಕೂ ಸ್ವಸಾಮರ್ಥ್ಯದಿಂದ ಜೀವನವನ್ನು ಮೇಲುಗೊಳಿಸಿಕೊಳ್ಳುವುದಕ್ಕೂ ಸಹಾಯಮಾಡಿವೆ. ಸಹಕಾರ ಸಂಘಗಳು ತಮ್ಮ ಉಪಪತ್ತಿಗನುಗುಣವಾಗಿ ಒಂಟೊಂಟಿಯಾಗಿ ಆಗಲಿ ಅಥವ ಇತರ

ಸಂಘಗಳ ಜೊತೆಗೂಡಿಯಾಗಲಿ ತಮ್ಮ ಸದಸ್ಯರುಗಳಿಗೆ ನಾನಾವಿಧದ ಸೌಕರ್ಯಗಳನ್ನೊದಗಿಸಿವೆ. ಮಕ್ಕಳ ವಿದ್ಯಾಭ್ಯಾಸ, ವೈದ್ಯಸಹಾಯ, ವಿದೇಶಸಂಚಾರ, ವಿಹಾರ, ವಿಶ್ರಾಂತಿ—ಇವೇ ಮೊದಲಾದ ಅನುಕೂಲ ಗಳನ್ನು ಒದಗಿಸುತ್ತಿವೆ. ಈ ಅನುಕೂಲಗಳ ಜೊತೆಗೆ ಈ ಸಂಘಗಳ ನಿರ್ವಾಹಕಕಾರ್ಯದಲ್ಲಿ ತೊಡಗಿರುವ ಸದಸ್ಯರಿಗೆ ವ್ಯಾಪಾರೋದ್ಯಮಗ ಳಲ್ಲೂ ಸಂಸ್ಥೆಗಳ ಕಾರ್ಯನಿರ್ವಾಹದಲ್ಲೂ ಪ್ರಜಾಪ್ರಭುತ್ವ ವಿಧಾನ ಗಳಲ್ಲೂ ಅತ್ಯುತ್ತಮವಾದ ಶಿಕ್ಷಣ ದೊರೆಯುಲವಕಾಶವಾಗಿದೆ.

ಇಂಗ್ಲೆಂಡಿನಲ್ಲಿ ಸಹಕಾರಪದ್ಧತಿಯು ಈ ರೀತಿ ಉಧ್ರಾಯ ಸ್ಥಿತಿ ಯಲ್ಲಿ ಬೆಳೆದುದಕ್ಕೆ ಅಲ್ಲಿಯ ಪ್ರಜೆಗಳ ಸ್ವಸಾಮರ್ಥ್ಯವೇ ಕಾರಣ; ಕಾಲ ಕ್ರಮದಲ್ಲಿ ಅಗತ್ಯವಾದ ಕಾನೂನು ಮಾಡುವುದು, ಸಹಕಾರಿ ಉದ್ಯಮ ಗಳಿಗೆ ಅವಕಾಶಕೊಡುವುದು ಇವೆರಡು ವಿಧದಲ್ಲಿ ವಿನಾ ಮತ್ತಾವ ವಿಧದಲ್ಲೂ ಆ ದೇಶದ ಸರ್ಕಾರದವರು ಸಹಾಯ ಮಾಡಿಲ್ಲ. ಸರ್ಕಾರದ ಆಶ್ರಯದಲ್ಲೇ ಹುಟ್ಟಿ ಬೆಳೆದ ಭಾರತಖಂಡದ ಸಹಕಾರ ಪದ್ಧತಿ ಯನ್ನು ವಿಮರ್ಶಿಸುವಾಗ ಇಂಗ್ಲೆಂಡಿನ ಸ್ವಭಾವಸಿದ್ಧವಾದ ಪ್ರಜಾಸಾ ಮರ್ಥ್ಯದಿಂದ ಬೆಳೆದಿರುವ ಪದ್ಧತಿಯನ್ನು ಮುಖ್ಯವಾಗಿ ಗಮನದಲ್ಲಿಡ ಬೇಕು.

ಸಹಕಾರ ಪದ್ಧತಿಯ ಮಾರ್ಗವನ್ನು ತೋರಿದವನು ರಾಬರ್ಟ್ ಓವೆನ್. ಅದರ ಕಾರ್ಯಸಿದ್ಧಿಯ ಜಯಭೇರಿ ಹೊಡೆದವರು ರಾಕ್ ಡೇಲಿನ ಅಗ್ರಗಾಮಿಗಳು. ಇಂಗ್ಲೆಂಡಿನ ಸಹಕಾರ ಬೆಳವಣಿಗೆಯು ಇವರು ನೆಟ್ಟ ಬೀಜದಿಂದ ವೃದ್ಧಿಯಾದುದು. ಅಗ್ರಗಾಮಿಗಳು ಹೊಡೆದ ಭೇರಿಯ ನಾದ ಕೇಳಿದ ದೇಶಗಳಲ್ಲೆಲ್ಲಾ ಈ ಪದ್ಧತಿಯು ಹರಡಿ ಅಲ್ಲಲ್ಲಿನ ಆರ್ಥಿಕ ಮತ್ತು ಸಾಮಾಜಿಕ ವಾತಾವರಣವನ್ನನುಸರಿಸಿ ವಿವಿಧ ಉದ್ಯಮಗಳಾಗಿ ಬೆಳೆದಿದೆ

೩. ಇತರ ದೇಶಗಳಲ್ಲಿ ಅದರ ಹಬ್ಬಿಗೆ

ಪ್ರಪಂಚದ ಮುಖ್ಯದೇಶಗಳಲ್ಲೆಲ್ಲಾ ಸಹಕಾರಪದ್ಧತಿಯು ಹಬ್ಬಿದ ಆದರೆ ಅದು ವಿವಿಧವಾಗಿ ಬೆಳೆದಿರುವುದು ಯೂರೋಪುಖಂಡದ ದೇ ಬೇರೆ ದೇಶಗಳಲ್ಲಿ. ಈ ಒಂದೊಂದು ದೇಶದಲ್ಲೂ ಒಂದೊಂದು ವಿ ವಾದ ಸಹಕಾರಪದ್ಧತಿಯು ಮುಂದುವರಿದಿದೆ. ಒಂದೊಂದೂ ಆರ್ಥಿ ಜೀವನದ ಒಂದೊಂದು ಸಮಸ್ಯೆಗೆ ಹೆಚ್ಚು ಗಮನಕೊಟ್ಟಿದೆ. ಇಂಗ್ಲೆಂ ನಲ್ಲಿ ಸಹಕಾರಿ ಉಗ್ರಾಣಗಳು ಮುಂದುವರಿದಿವೆಯಾದರೆ, ಡೆನ್ಮಾರ್ಕ್ ದೇಶದಲ್ಲಿ ಮಾರಾಟದ ಸಂಘಗಳೂ, ಫ್ರಾನ್ಸ್ ಮತ್ತು ಬೆಲ್ಜಿಯಂಗಳಲ್ಲಿ ವಿಮಾ ಸಂಘಗಳೂ, ನಾರ್ವೆ ಮತ್ತು ಸ್ವೀಡನ್‌ಗಳಲ್ಲಿ ಹರಿದು ಛಿದ್ರವಾಗಿ ರುವ ಹಿಡುವಳಿ ಜಮೀನುಗಳನ್ನು ಒಟ್ಟುಗೂಡಿಸುವ ಸಂಘಗಳೂ ಜರ್ಮನಿ ಮತ್ತು ಇಟಲಿ ದೇಶಗಳಲ್ಲಿ ಲೇವಾದೇವಿ (ಪತ್ತು Credit) ಸಂಘಗಳೂ ಸಹಕಾರಪದ್ಧತಿಯನ್ನನುಸರಿಸಿ ಊರ್ಜಿತವಾಗುತ್ತಿವೆ ಇವೊಂದೊಂದೂ ಒಂದೊಂದು ರೀತಿಯಲ್ಲಿ ಆದರ್ಶಪ್ರಾಯವಾಗಿವೆ ಭರತಖಂಡದಲ್ಲಿ ಏರ್ಪಟ್ಟಿರುವ ಪತ್ತುಸಂಘಗಳು ವಿಶೇಷವಾಗಿ ಜರ್ಮನಿಯ ಪತ್ತುಸಂಘಗಳನ್ನು ಅನುಸರಿಸಿವೆ. ಇಂಗ್ಲೆಂಡು ಸಹಕಾರಿ ಉಗ್ರಾಣಗಳಿಗೆ ತೌರುಮನೆಯಾದರೆ ಜರ್ಮನಿಯು ಪತ್ತುಸಹಕಾರ ಸಂಘಗಳಿಗೆ ತೌರುಮನೆಯಾಗಿದೆ.

ಜರ್ಮನಿ ದೇಶದ ಲೇವಾದೇವಿ ಸಂಘಗಳು ಎರಡು ಮಾದರಿ ಯವು. ಒಂದು ಬಗೆಯವು ಗ್ರಾಮಜೀವನಕ್ಕೆ ಯೋಗ್ಯವಾದವು. ಇವುಗಳ ಜನಕ ರೈಫೀಸೆನ್. ನಗರ ವಾಸಿಗಳಿಗೆ ಬೇಕಾದವು ಎರಡನೆಯ ಮಾದರಿಯವು. ಇವುಗಳಿಗೆ ಕಾರಣ ಕರ್ತನಾದವನು ಷುಲ್ ಎಂಬಾತನು. ಮೊದಲನೆಯವನ್ನು ರೈಫೀಸೆನ್ ಸಂಘಗಳೆಂದೂ, ಎರಡನೆಯವನ್ನು ಷುರ್ಲ್ಸ್ ಸಂಘಗಳೆಂದೂ ಕರೆಯುವುದು ವಾಡಿಕೆಯಾ ಗಿದೆ. ನಮ್ಮ ದೇಶದ ಗ್ರಾಮಾಂತರಗಳಲ್ಲಿ ರೈಫೀಸೆನ್ ಸಂಘಗಳೂ, ನಗರಗಳಲ್ಲಿ ಷುರ್ಲ್ಸ್ ಸಂಘಗಳೂ ಬಳಕೆಗೆ ಬಂದಿವೆ. ಭಾರತೀಯರ ಆರ್ಥಿಕ ಜೀವನದಲ್ಲಿ ಈ ಎರಡು ಮಾದರಿಯ ಸಂಘಗಳೂ ಬಹಳ ಪರಿಣಾ

ಮಕಾರಿಯಾಗಿರುವುದರಿಂದ ಅವುಗಳ ಸ್ಥಾಪಕರು ಅನುಸರಿಸಿದ ರೀತಿ ನೀತಿಗಳನ್ನು ನಾವು ಪರಿಚಯಮಾಡಿಕೊಳ್ಳುವುದು ಆವಶ್ಯಕ.

ರೈಫೀಸೆನ್ (೧೮೧೮-೧೮೮೮) ತನ್ನ ಮೂವತ್ತನೆಯ ವಯಸ್ಸಿನಲ್ಲಿ—ಎಂದರೆ ೧೮೪೭ ರಲ್ಲಿ—ಒಂದು ಸಣ್ಣ ಹಳ್ಳಿಯಲ್ಲಿ ಬಡಜನರಿಗೆ ದವಸ ಧಾನ್ಯಗಳನ್ನೂ ಆಲೂಗೆಡ್ಡೆಯನ್ನೂ ಸುಲಭವಾಗಿ ದೊರಕಿಸಲು ಒಂದು ಸಹಕಾರ ಸಂಸ್ಥೆಯನ್ನು ಸ್ಥಾಪಿಸಿದನು. ಅದೇ ಸಮಯದಲ್ಲಿ ಜರ್ಮನಿಯಲ್ಲಿ ಅನೇಕ ಕಡೆ ಕ್ಷಾಮ ತಲೆದೋರಿ ಕ್ಷಾಮಪೀಡಿತ ಪ್ರದೇಶಗಳಲ್ಲೆಲ್ಲಾ ಈ ತರಹ ಸಂಘಗಳು ಹುಟ್ಟಿಕೊಂಡುವು. ಇದಾದ ಎರಡು ವರ್ಷಗಳನಂತರ ಅವನು ಬೇರೊಂದು ಹಳ್ಳಿಯಲ್ಲಿ ಜಮೀನುದಾರರಿಗೆ ದನಕರುಗಳನ್ನು ಸುಲಭ ಕ್ರಯಕ್ಕೆ ಒದಗಿಸುವ ಸಲುವಾಗಿ ಮತ್ತೊಂದು ಸಂಘ ಸ್ಥಾಪನೆಮಾಡಿದನು. ಅವನು ಸ್ಥಾಪಿಸಿದ ಮೂರನೆಯ ಸಂಘವು ಲೇವಾದೇವಿ ನಡೆಸುವ ಪತ್ತಿನ ಸಂಘ. ಆದರೆ ಈ ಸಂಘದ ಸದಸ್ಯರುಗಳು ತಾವೇ ಸಾಲವನ್ನು ತೆಗೆದುಕೊಳ್ಳದೆ ತಮ್ಮ ಆಧಾರದಮೇಲೆ ಬಂಡವಾಳವನ್ನೊದಗಿಸಿ ಇತರ ಬಡ ವ್ಯವಸಾಯಗಾರರಿಗೆ ಸಾಲಕೊಡುತ್ತಿದ್ದರು. ಈ ರೀತಿ ಸಾಲ ಪಡೆದವರು ಸಂಘದ ಆಡಳಿತದಲ್ಲಿ ಭಾಗವಹಿಸುತ್ತಿರಲಿಲ್ಲ; ನಫೆಯೂ ಕೂಡ ಅವರಲ್ಲಿ ಹಂಚಿಕೆಯಾಗುತ್ತಿರಲಿಲ್ಲ. ಸಹಕಾರಪದ್ಧತಿಯ ದೃಷ್ಟಿಯಿಂದ ಇವೆರಡೂ ಲೋಪಗಳೆಂದೇ ಭಾವಿಸಬೇಕು. ಇವು ತನ್ನ ವ್ಯವಸ್ಥೆಯ ಲೋಪಗಳೆಂದು ರೈಫೀಸೆನ್ನನ ಮನಸ್ಸಿಗೂ ಜಾಗ್ರತೆಯಾಗಿಯೇ ಅಂಟಿತು. ಈ ಲೋಪಗಳಿಲ್ಲದ ಒಂದು ಸಂಘವನ್ನು ೧೮೬೨ ರಲ್ಲಿ ಅವನು ಸ್ಥಾಪಿಸಿದನು. ಈ ಸಂಘದ ಆಡಳಿತದಲ್ಲಿ ಸಾಲ ತೆಗೆದುಕೊಳ್ಳುವವರು ಭಾಗಿಗಳಾದುದಲ್ಲದೆ, ಬಂದ ನಫೆಯನ್ನು ಪಡೆಯುವುದಕ್ಕೂ ಬಾಧ್ಯರಾದರು. ಈ ಸಂಘದ ಇನ್ನೊಂದು ವಿಶೇಷ ಅಂಶವೇನೆಂದರೆ ಸಾಲ ಪಡೆಯಲು ಜಮೀನು, ಮನೆ, ಒಡವೆ ಇವುಗಳ ಆಧಾರ ಬೇಕಾಗಿರಲಿಲ್ಲ. ಸಾಲಪಡೆಯುವವನು ಪ್ರಾಮಾಣಿಕನಾದ ಪಕ್ಷದಲ್ಲಿ ತನ್ನ ಪ್ರಾಮಾಣಿಕತೆಯ ಆಧಾರದಮೇಲೆ ಸಾಲ ಪಡೆಯಬಹುದಾಗಿತ್ತು. ಇದರಿಂದ ಗುಣಾಢ್ಯರಾದ ಬಡವರಿಗೆ ಸಾಲದ ಮೂಲಕ ಬಂಡವಾಳವನ್ನೊದಗಿಸಿ ಅವರ ಆರ್ಥಿಕ ಜೀವನವನ್ನು ಉತ್ತಮಪಡಿಸುವುದು ಸಾಧ್ಯವಾಯಿತು. ಸಾಲಪಡೆಯುವವನ ಪ್ರಾಮಾಣಿಕತೆ

ಸ್ಪಷ್ಟವಾಗಿ ದೃಢಪಡದಿದ್ದ ಸಂದರ್ಭಗಳಲ್ಲಿ ಸದಸ್ಯರಲ್ಲಿ ಒಬ್ಬೊಬ್ಬರ ಸಾಲಕ್ಕೆ ಜಂಟಿಯಾಗಲು ಒಪ್ಪಿದರೆ ಸಾಲಕೊಡುವ ಪದ್ಧತಿ ಏರ್ಪಟ್ಟಿತ ಇದರಿಂದ ಸಾಲ ಪಡೆದವನ ಆರ್ಥಿಕ ಜೀವನದಲ್ಲಿ ಅವನ ಜಂಟಿದಾ ರಾದ ಸ್ನೇಹಿತರುಗಳೂ ಭಾಗಿಗಳಾಗುವಂತಾಯಿತು ; ಪರಸ್ಪ ಸಹಾಯದ ಮೂಲತತ್ವವೂ ಆಚರಣೆಗೆ ಬಂತು.

ಸಾಲಕ್ಕೆ ಬೇಕಾದಷ್ಟು ಮೂಲಧನವನ್ನು ಸೇರಿಸುವುದು ಯಾವಾ ಗಲೂ ಕಷ್ಟವೇ. ಧನಿಕರಿಂದ ಹಣವನ್ನು ತಂದು ಬಂಡವಾಳವನ್ನು ಕೂಡಿಸುವುದು ಸಾಧ್ಯವಾದರೂ ಸದಸ್ಯರು ಕೂಡಿಟ್ಟ ಹಣದಿಂದಲೇ ಬಂಡವಾಳವನ್ನು ಶೇಖರಿಸುವುದು ಅತ್ಯುತ್ತಮ ಸಹಕಾರ ನೀತಿ. ಮೊದ ಲಲ್ಲಿ ಇದನ್ನು ಅನುಸರಿಸಲು ಸಾಧ್ಯವಾಗದೆ ಹೋಯಿತು. ಹಣಗಾರ ರಿಂದ ಠೇವಣಿಗಳನ್ನೂ ಸಾಲಗಳನ್ನೂ ಪಡೆಯುವುದು ಅತ್ಯಾವಶ್ಯಕವಾಗಿ ಕಂಡುಬಂದುದರಿಂದ ರೈಫೀಸೆನ್ನನು ತನ್ನ ಸ್ಥಳದಲ್ಲೇ ಕೈಲಾದಮಟ್ಟಿಗೆ ಹಣಕೂಡಿಸಲು ಉದ್ಯುಕ್ತನಾದನು ಇದೂ ಸಾಧ್ಯವಿಲ್ಲದಿದ್ದಾಗ ಹೊರ ಗಡೆಯಿಂದ ಬಂಡವಾಳವನ್ನು ಪಡೆದನು.

ಬಂಡವಾಳವನ್ನು ಈ ರೀತಿ ಒದಗಿಸಿಕೊಳ್ಳಲು ಸಂಘವೇನೋ ಸಿದ್ಧವಾಗಿರಬಹುದು. ಆದರೆ ಬಂಡವಾಳಗಾರರು ಯಾವ ನಂಬಿಕೆಯ ಮೇಲೆ ಹಣ ಕೊಡುವರು ? ಬಂಡವಾಳಗಾರರಲ್ಲಿ ನಂಬಿಕೆಯನ್ನು ಹುಟ್ಟಿ ಸಲು ರೈಫೀಸೆನ್ನನು ಸಂಘದ ಸದಸ್ಯರ ಜವಾಬ್ದಾರಿಯನ್ನು ಅನಿಯಮಿ ತವಾಗಿ ಮಾಡಬೇಕಾಯಿತು. ಇದರ ಪ್ರಕಾರ ಸಂಘವು ಮಾಡುವ ಎಲ್ಲಾ ತರಹ ಸಾಲಗಳನ್ನು ತೀರಿಸುವ ಜವಾಬ್ದಾರಿಯು ಒಂಟಿಯಾಗಿ ಯಾಗಲಿ ಜಂಟಿಯಾಗಿಯಾಗಲಿ ಸದಸ್ಯರುಗಳಿಗೆಲ್ಲಾ ಸೇರಿದುದಾಯಿತು. ಸಾಲ ತೆಗೆದಿರಲಿ ಇಲ್ಲದಿರಲಿ ಪ್ರತಿಯೊಬ್ಬ ಸದಸ್ಯನೂ ಸಂಘದ ದೇಣಿಗೆ ಸಂಪೂರ್ಣ ಜವಾಬ್ದಾರಿ ವಹಿಸುವುದು ಈ ಅನಿಯಮಿತ ಜವಾಬ್ದಾರಿ ತತ್ವದ ಉದ್ದೇಶ. ಈ ರೀತಿ ಭದ್ರವಾದ ಖಾತರಿಯ ಮೇಲೆ ಯಾರು ತಾನೆ ಬಂಡವಾಳವನ್ನೊದಗಿಸಲು ಹಿಂಜರಿಯುವರು ?

ಆಸ್ತಿವಂತರು ಗುಣಾಢ್ಯರಾದ ಬಡ ಸದಸ್ಯರೊಂದಿಗೆ ಸೇರಿ ಅನಿಯಮಿತ ಜವಾಬ್ದಾರಿಯ ಮೇಲೆ ಬಂಡವಾಳವನ್ನು ಕೂಡಿಸುವ ತತ್ವ ಎಷ್ಟು ಸ್ಪಷ್ಟವೋ, ಈ ತತ್ವದ ಆಧಾರದ ಮೇಲೆ ಸದಸ್ಯರನ್ನು ಒಟ್ಟು

ಕೂಡಿಸುವುದು ಅಷ್ಟೇ ಕಷ್ಟವಾದುದು. ಅನುಕೂಲಸ್ಥರಾದ ಆಸ್ತಿವಂತರು ಅನಿಯಮಿತ ಜವಾಬ್ದಾರಿಯ ಸಂಘದ ಸದಸ್ಯರಾಗಲು ಬಡಪೆಟ್ಟಿಗೆ ಒಪ್ಪುವುದಿಲ್ಲ. ಸಂಘದ ಇತರ ಸದಸ್ಯರು ಶೀಲವಂತರು, ಪ್ರಾಮಾಣಿಕರು, ಎಂಬುದನ್ನು ಅವರಿಗೆ ಸ್ಪಷ್ಟಪಡಿಸಬೇಕು. ಆದುದರಿಂದ ರೈಫೀಸೆನ್ನನು ಸಂಘಕ್ಕೆ ಗುಣಾಢ್ಯರನ್ನೇ ಸದಸ್ಯರನ್ನಾಗಿ ಆರಿಸಿಕೊಳ್ಳುವುದನ್ನು ಆಚರಣೆಗೆ ತರಬೇಕಾಯಿತು. ಇದರಲ್ಲಿ ಅವನು ಜಯಶೀಲನಾದನು. ರೈಫೀಸೆ಼ ಸಂಘದ ಸದಸ್ಯನೆಂದರೆ ಗುಣಾಢ್ಯನೆಂಬ ನಂಬಿಕೆ ಜನರಲ್ಲಿ ಬೇರೂರಿತು. ಇದರಿಂದ ಸಹಕಾರ ಸಂಸ್ಥೆಯು ಶೀಲವಂತರ ಸಂಘ, ಗುಣವೇ ಸಹಕಾರದ ಗಂಟು ಎಂಬುದು ಸ್ಥಿರಪಟ್ಟಿತು. ಪರಸ್ಪರ ಸಹಾಯಸಂಘದಲ್ಲಿ ಗುಣವೇ ಗಂಟಾದುದರಿಂದ ಅದರ ಸದಸ್ಯತ್ವದ ವಿಚಾರದಲ್ಲಿ ಕೆಲವು ನಿಬಂಧನೆಗಳು ಆಚರಣೆಗೆ ಬಂದುವು. ಇವು ಯಾವುವೆಂದರೆ ಸದಸ್ಯನಾಗುವವನು ಸಂಘದ ಇತರ ಸದಸ್ಯರಿಗೆ ಚೆನ್ನಾಗಿ ಪರಿಚಿತನಾಗಿರಬೇಕು. ಅವನ ಪ್ರಾಮಾಣಿಕತೆಯಲ್ಲಿ ಇತರರಿಗೆ ನಂಬಿಕೆ ಇರಬೇಕು. ಪರಸ್ಥಳದವರಿಗೆ ಸದಸ್ಯರಾಗಲು ಅವಕಾಶವಿಲ್ಲ. ಸಾಲಗಳು ಸದಸ್ಯರುಗಳಿಗೆ ಮಾತ್ರ ಒದಗಿಸುವುದು. ಸಾಲದ ಉದ್ದೇಶವು ಸದಸ್ಯನ ಜೀವನವನ್ನು ಉತ್ತಮಪಡಿಸತಕ್ಕದ್ದಾಗಿರಬೇಕು; ಮತ್ತು ಉದ್ದೇಶವು ಪಂಚಾಯಿತರು ಒಪ್ಪತಕ್ಕದ್ದಾಗಿರಬೇಕು; ಮತ್ತು ಸಾಲದ ಹಣದ ವಿನಿಯೋಗ ಅವರ ಮೇಲ್ವಿಚಾರಣೆಗೆ ಒಳಪಟ್ಟಿರಬೇಕು.

ಈ ನಿಬಂಧನೆಗಳಿಗೊಳಪಟ್ಟು ಸಂಘದ ಸದಸ್ಯರಿಗೆ ಸರ್ವಸಮವಾದ ಹಕ್ಕೂ ಸಂಪೂರ್ಣ ಸ್ವಾತಂತ್ರ್ಯವೂ ಉಂಟು.

ರೈಫೀಸೆ಼ ಸಂಘಗಳು ಜರ್ಮನಿಯ ರೈತಾಪಿ ಜನಗಳಿಗೆ ಬಹಳ ಉಪಯುಕ್ತವಾಗಿ ಕಂಡುಬಂದುದರಿಂದ ದೇಶದಲ್ಲೆಲ್ಲಾ ಹರಡಿದುವು. ಇದರ ಪರಿಣಾಮವಾಗಿ ರೈತರ ಬದುಕೂ ಬಾಳೂ ಉತ್ತಮಗೊಂಡುವು. ರೈತರು ತಮಗೆ ಬೇಕಾದ ಸಲಕರಣೆಗಳನ್ನೆಲ್ಲಾ ಸುಲಭ ದರದಲ್ಲಿ ಕೊಳ್ಳಲೂ, ಸಾಲಸೋಲಗಳನ್ನು ಸುಲಭವಾಗಿ ತೀರಿಸಲೂ, ತಮ್ಮ ಸಂಪಾದನೆಯ ಸ್ವಲ್ಪ ಭಾಗವನ್ನು ಕೂಡಿಡಲೂ ಅನುಕೂಲವಾಯಿತು. ಮಿತವ್ಯಯದ ಅಭ್ಯಾಸ ಬೇರೂರಿ ಸಾಹುಕಾರರ ಸೊಕ್ಕು ಸ್ವಲ್ಪಮಟ್ಟಿಗೆ ಮುರಿಯಿತು.

ಇವಿಷ್ಟೂ ರೈಫೀಸೆನ್ನಿನ ಸಹಕಾರದ ಮಾರ್ಗ. ಇನ್ನು ಪಟ್ಟ ಗಳಲ್ಲಿ ಏರ್ಪಾಟಾದ ಷುಲ್ಸನ ಸಹಕಾರ ಮಾರ್ಗವನ್ನು ಪರಿಶೀಲಿ ಬಹುದು.

ಹಳ್ಳಿಗಳ ರೈತರ ಆರ್ಥಿಕ ಜೀವನವನ್ನು ಸುಗಮವಾಗಿ ಮಾಡ ವುದು ರೈಫೀಸೆನ್ ಸಂಘದ ಧ್ಯೇಯವಾದರೆ ಪಟ್ಟಣಗಳಲ್ಲಿರುವ ಕೆಲ ಗಾರರ ಆರ್ಥಿಕ ಜೀವನವನ್ನು ಉತ್ತಮಗೊಳಿಸುವುದು ಷುಲ್ಸ್ ಸಂಘ ಧ್ಯೇಯವಾಗಿತ್ತು. ಇದರ ನಿರ್ಮಾಪಕನಾದ ಷುಲ್ಸನು (೧೮೦೮ ೧೮೮೩) ಬಡಗಿ, ಚಮ್ಮಾರ ಮುಂತಾದ ಕೆಲಸಗಾರರ ಜೀವನಸ್ಥಿ ಯನ್ನು ಚನ್ನಾಗಿ ಅರಿತಿದ್ದನು. ಕೈ ಕಸಬುಗಳಲ್ಲಿ ಉದ್ಯುಕ್ತರಾಗಿದ್ದ ಕೆಲಸಗಾರರು ತಮ್ಮ ಕಸಬಿಗೆ ಬೇಕಾದ ಬಂಡವಾಳವನ್ನೊದಗಿ ಕೊಳ್ಳಲು ಮಾರ್ಗವಿಲ್ಲದೆ ತೊಂದರೆಪಡುತ್ತಿದ್ದುದನ್ನು ನೋಡಿದ್ದನು ೧೮೪೯ರಲ್ಲಿ ಚಮ್ಮಾರರಿಗೆ ಸಾಮಾನೊದಗಿಸುವ ಒಂದು ಸಹಕಾರ ಸಂಸ್ಥೆಯನ್ನು ಸ್ಥಾಪಿಸಿದನು. ಇದಕ್ಕೆ ಸೇರಿ ಅದನ್ನು ನಡೆಸಿದ ಕೆಲಸ ಗಾರರಿಗೆ ತಾವು ಸ್ವಶಕ್ತಿ ಸ್ವಸಾಮರ್ಥ್ಯದಿಂದ ಏನನ್ನಾದರೂ ಸಾಧಿಸ ವಕಾಶವಾಗುವುದೆಂಬುದು ಅನುಭವವಾಯಿತು. ೧೮೫೦ ರಲ್ಲಿ ನಗ ವಾಸಿಗಳಾದ ವಿವಿಧ ಕಸಬಿನ ಕೈಕೆಲಸದವರಿಗೆ ಬಂಡವಾಳವನ್ನೊದಗಿ ಸಲು ಇನ್ನೊಂದು ಸಂಘವನ್ನು ಏರ್ಪಡಿಸಿದನು. ಈ ಸಂಸ್ಥೆಯ ಅವನ ಹೆಸರನ್ನು ತಾಳಿ ಈಗ ಜಗದ್ವಿಖ್ಯಾತವಾಗಿರುವ ಸಂಘಗಳಿಗೆ ಮೇಲ್ಪಂಕ್ತಿಯಾದ ಸಂಘ.

ಈ ಷುಲ್ಸ್ ಸಂಘಗಳ ಮಾದರಿಯೇ ಬೇರೆ. ಇವುಗಳಿಗೂ ರೈಫೀಸೆನ್ ಸಂಘಗಳಿಗೂ ಅನೇಕ ವಿಧಗಳಲ್ಲಿ ವ್ಯತ್ಯಾಸಗಳಿವೆ. ಇವ ಪರಸ್ಪರ ಹೆಚ್ಚು ಪರಿಚಯವಿಲ್ಲದ ನಗರ ವಾಸಿಗಳಿಗೆ ಅನುಕೂಲಿಸುವಂತೆ ನಿಯಮಿತ ಜವಾಬ್ದಾರಿಯ ಆಧಾರದ ಮೇಲೆ ಕೆಲಸ ಮಾಡತಕ್ಕವುಗಳು ಬೇಕಾದ ಬಂಡವಾಳವನ್ನು ಷೇರು ಹಣದಿಂದಲೂ, ಹೊರಗಿನ ಸಾಲಗ ಳಿಂದಲೂ ಒದಗಿಸಿಕೊಳ್ಳುವುವು. ಸದಸ್ಯರುಗಳ ಜವಾಬ್ದಾರಿಯು ಅವರು ಗಳು ಪಡೆದಿರತಕ್ಕ ಷೇರುಗಳ ಮೊತ್ತಕ್ಕೆ ಮೀರದಂತಿರುವುದರಿಂದ ಅವರವರ ಶಕ್ತಿಗನುಸಾರವಾಗಿ ಜವಾಬ್ದಾರಿಯನ್ನು ವಹಿಸಲು ಸಾಧ್ಯ ಕಾರ್ಯಕ್ಷೇತ್ರವು ಹೆಚ್ಚು ವಿಸ್ತಾರವಾದುದು. ವಿವಿಧ ಕಸಬಿನವರಾದರೂ

ಒಟ್ಟುಕೂಡಿ ಕೆಲಸ ಮಾಡಲು ಅವಕಾಶವನ್ನೊದಗಿಸಿ ಕೊಡುವುದು ಈ ಸಂಘಗಳಿಗೆ ಸಾಧ್ಯ. ಬಂಡವಾಳ ಪ್ರಭುತ್ವ ಸಂಸ್ಥೆಗಳಂತೆಯೇ ಕಾರ್ಯಾಚರಣೆಗಳನ್ನು ಕೈಕೊಂಡರೂ ಸಹಕಾರ ಪದ್ಧತಿಯ ಮೂಲತತ್ವಗಳಿಗನುಗುಣವಾಗಿ ಸದಸ್ಯರುಗಳ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಷುಲ್ಸ್ ಸಂಘಗಳು ಅವಕಾಶವನ್ನಿತ್ತುವು.

ಇಂಗ್ಲೆಂಡಿನಂತೆಯೇ ಜರ್ಮನಿಯಲ್ಲಿಯೂ ಸಹಕಾರ ಸಂಸ್ಥೆಗಳು ಖಾಸಗಿ ಪ್ರಯತ್ನಗಳಿಂದಲೇ ಉದ್ಭಾರವಾದುವು. ಸರಕಾರದ ಬೆಂಬಲವು ಕಾಲಕ್ರಮದಲ್ಲಿ ಒದಗಿದರೂ ರೈಫೀಸೆನ್ ಮತ್ತು ಷುಲ್ಸ್ ಇಬ್ಬರ ಸಮಾಜಸೇವಾಕಾಂಕ್ಷೆಯೇ ಇವು ಹುಟ್ಟಿ ಬೆಳೆಯುವುದಕ್ಕೆ ಮುಖ್ಯ ಕಾರಣ.

ಜರ್ಮನಿಯಲ್ಲಿ ಕೈಗೂಡಿದ ಈ ಉದ್ಯಮಗಳು ಇಟಲಿದೇಶದಲ್ಲೂ ಪ್ರಚಾರಕ್ಕೆ ಬಂದುವು. ಇವುಗಳ ಪ್ರಚಾರಕ್ಕೆ ಕಾರಣನಾದವನು ಲುಝಟಿ (೧೮೪೧–೧೯೨೭). ಇವನು ಷುಲ್ಸನು ತೋರಿಸಿಕೊಟ್ಟ ಮಾರ್ಗವನ್ನನುಸರಿಸಿ ಇಟಲಿ ದೇಶದಲ್ಲಿ ಲೇವಾದೇವಿ ಸಂಘಗಳನ್ನೇರ್ಪಡಿಸಿದನು. ಈ ಉದ್ಯಮದಲ್ಲಿ ಷುಲ್ಸನ ತತ್ವಗಳನ್ನು ತನ್ನ ದೇಶದ ಆರ್ಥಿಕಸ್ಥಿತಿಗಳಿಗೆ ಹೊಂದುವಂತೆ ತಕ್ಕ ಬದಲಾವಣೆಗಳನ್ನು ಮಾಡಿ ರೂಪಗೊಳಿಸಿರುವುದರಿಂದ ಆ ಮಾದರಿ ಸಂಘಗಳಿಗೆ ಲುಝಟಿ ಸಂಘಗಳೆಂದು ಹೆಸರು ಬಂದಿದೆ.

ಜರ್ಮನಿ ಮತ್ತು ಇಟಲಿ ಮಾದರಿಯ ಸಹಕಾರ ಲೇವಾದೇವಿ ಸಂಘಗಳು ಪ್ರಪಂಚದ ನಾನಾ ದೇಶಗಳಲ್ಲಿ ಹರಡಿ ಜನರಿಗೆ ಅಧಿಕ ಪ್ರಯೋಜನವನ್ನುಂಟುಮಾಡಿವೆ.

ನಮ್ಮ ಭರತಖಂಡಕ್ಕೆ ಸಹಕಾರ ಮಾರ್ಗದಲ್ಲಿ ಆದರ್ಶವಾದ ಮತ್ತೊಂದು ದೇಶವೆಂದರೆ ಡೆನ್ಮಾರ್ಕ್. ಆ ದೇಶದ ವಿಸ್ತೀರ್ಣವು ೧೬,೫೦೦ ಚದರ ಮೈಲಿಗಳು. ಪ್ರಜಾಸಂಖ್ಯೆ ೩೫ ಲಕ್ಷ. ೧೮೬೪ರಲ್ಲಿ ಜರ್ಮನಿಯೊಡನೆ ಯುದ್ಧಮಾಡಬೇಕಾಗಿಬಂದು ಅದರ ಪರಿಣಾಮವಾಗಿ ತನ್ನ ಫಲವತ್ತಾದ ಕೆಲವು ಭಾಗಗಳನ್ನು ಕಳೆದುಕೊಂಡಿತು. ಉಳಿದ ಭಾಗಗಳು ಅಷ್ಟು ಫಲವತ್ತಾದುವಲ್ಲ. ಆದರೂ ಆ ದೇಶದ ಜನರಾದ ಡೇನರು ಇದ್ದುದರಲ್ಲೇ ಶಾಂತಮಾರ್ಗದಲ್ಲಿ ತಮ್ಮ ಆರ್ಥಿಕ ಸ್ಥಿತಿಯನು

ಉತ್ತಮಪಡಿಸಿಕೊಳ್ಳಲು ಶಪಥಮಾಡಿದರು. ಈ ಮೂಲಕ ಶಪ ಶಪಥಸಾಧನೆಯಾಗಬೇಕಾದರೆ ಸಹಕಾರ ಪದ್ಧತಿಯು ಆಚರಣೆಯ ಸುಲಭಮಾರ್ಗವೆಂದರಿತು, ಎಲ್ಲಾ ಉದ್ಯಮಗಳನ್ನೂ ಸಹಕಾರ ಪದ್ಧ ಗನುಸಾರವಾಗಿ ನಡೆಸುತ್ತಾ ಬಂದರು. ೧೮೭೭ರಲ್ಲಿ ಮೊದಲನೆ ಸಹಕಾರ ಸಂಸ್ಥೆ ಆರಂಭವಾಗಿ ಅಂದಿನಿಂದ ಏಕಪ್ರಕಾರವಾಗಿ ವೃ ಹೊಂದಿ, ಈಚಿನವರೆಗೆ ಹದಿನೇಳು ಲಕ್ಷ ಸದಸ್ಯರುಗಳನ್ನೊಳಗೊಂ ಏಳು ಸಾವಿರ ಸಹಕಾರ ಸಂಸ್ಥೆಗಳು ಆ ದೇಶದಲ್ಲಿ ಕೆಲಸಮಾಡುತ್ತಿ ಡೇನರಿಗೆ ಸಹಕಾರಸಂಸ್ಥೆಗಳನ್ನೇರ್ಪಡಿಸಿ ಆರ್ಥಿಕ ಉದ್ಯಮಗಳನ ಕೈಕೊಳ್ಳುವುದೆಂದರೆ ಸ್ವಾಭಾವಿಕವಾಗಿದೆ. ಪ್ರತಿಯೊಂದು ವಸ್ತು ವಿ ಉತ್ಪತ್ತಿ, ಮಾರಾಟ ಮತ್ತು ಕೊಳ್ಳುವಿಕೆ — ಇವೆಲ್ಲವೂ ಸಹಕಾರ ಸಂಸ ಗಳ ಮೂಲಕವೇ ನಡೆಯುವುವು. ಈ ದೇಶದಲ್ಲಿ ಉತ್ಪತ್ತಿಯಾಗು ಮುಖ್ಯ ವಸ್ತುಗಳು ಹಾಲು, ಕೆನೆ, ಬೆಣ್ಣೆ, ಕೋಳಿಯಮೊಟ್ಟೆ ಮತ್ತು ತರಹಾವರಿ ಮಾಂಸಗಳು. ಪಶುಪಾಲನೆಯು ಈ ವಿವಿಧ ಉತ್ಪನ್ನಗಳನ ಬಹು ನಿಪುಣತೆಯಿಂದ ವ್ಯವಸ್ಥೆಗೊಳಿಸಿ ಡೇನರು ಪ್ರಬಲವಾದ ರಫ್ತು ವ್ಯಾಪಾರವನ್ನು ಏರ್ಪಡಿಸಿರುವರು. ಸಹಕಾರ ಸಂಸ್ಥೆಯೊದಗಿಸಿರ ಮಾಲಿನಲ್ಲಿ ಗಿರಾಕಿಗಳಿಗೆ ಹೆಚ್ಚು ನಂಬಿಕೆಯುಂಟಾಗಿ ಅದಕ್ಕೆ ಹೆಚ್ಚು ಬೆಲ ದೊರಕುವಂತಾಯಿತು. ಡೆನ್ಮಾರ್ಕಿನ ಉತ್ಪತ್ತಿಗಳಲ್ಲಿ ಶೇಕಡ ೯೦ರಷ್ಟು ಬೆಣ್ಣೆಯನ್ನೂ, ೭೦ ರಷ್ಟು ಮಾಂಸವನ್ನೂ ಸಹಕಾರ ಸಂಸ್ಥೆಗಳ ತಯಾರಿಸುತ್ತಿವೆ. ವಿದೇಶ ವ್ಯಾಪಾರದಲ್ಲಿ ಶೇಕಡ ೯೦ ರಷ್ಟು ಹಾಲಿನ ವ್ಯಾಪಾರವೂ ಶೇಕಡ ೫೦ ರಷ್ಟು ಕೋಳಿ ಮೊಟ್ಟೆ ವ್ಯಾಪಾರವೂ ಸಹಕಾರ ಸಂಸ್ಥೆಗಳ ಕೈಯಲ್ಲಿದೆ. ಇಷ್ಟಲ್ಲದೆ ವ್ಯವಸಾಯಕ್ಕೆ ಬೇಕಾದ ಸಾಮಾನುಗಳಲ್ಲಿ ಶೇಕಡ ೮೦ ರಷ್ಟು ಭಾಗವನ್ನು ಸಹಕಾರ ಸಂಘಗಳು ಒದಗಿಸುತ್ತಿವೆ.

ಡೆನ್ಮಾರ್ಕಿನಲ್ಲಿ ಸಹಕಾರ ವ್ಯವಸ್ಥೆಯು ಇಷ್ಟು ಉನ್ನತ ಸ್ಥಿತಿಗೆ ಬಂದಿರುವುದಕ್ಕೆ ಆ ದೇಶದ ವಿದ್ಯಾಪ್ರಚಾರವೇ ಕಾರಣ. ಶಿಕ್ಷಣ ಶಾಸ್ತ್ರಜ್ಞರು ಅಲ್ಲಿನ ವಿದ್ಯಾಭ್ಯಾಸದ ಕ್ರಮವನ್ನು ಮೆಚ್ಚಿ ಹೊಗಳುವರು. ಅಲ್ಲಿನ ವಿದ್ಯಾಭ್ಯಾಸದ ಪರಿಣಾಮವಾಗಿ ಅಲ್ಲಿನ ರೈತರುಗಳು ಮ್ಯುನಿಸಿಪಾಲಿಟಿ ಮುಂತಾದ ಸ್ಥಳೀಯ

ಸಂಸ್ಥೆಗಳಲ್ಲೂ ಪ್ರಜಾಪ್ರತಿನಿಧಿ ಸಭೆಗಳಲ್ಲೂ ಗಣ್ಯ ಸದಸ್ಯರಾಗಿರುವರು. ದೇಶದ ಸರಕಾರದ ಮಂತ್ರಿ ಮಂಡಲದಲ್ಲಿ ಸೇರಿ ದೇಶಸೇವೆ ಸಲ್ಲಿಸ ಬೇಕೆಂಬ ಕುತೂಹಲವು ಆ ದೇಶದ ರೈತಾಪಿ ಜನರ ಮಕ್ಕಳಲ್ಲಿ ವಿಶೇಷ ವಾಗಿದೆ. 'ವಿದ್ಯಾಪ್ರಚಾರ ಮತ್ತು ಸಹಕಾರಪದ್ಧತಿ ಇವೆರಡರ ಪರಸ್ಪರ ಬೆಂಬಲದಿಂದುಂಟಾದ ಪ್ರಗತಿಯು ಡೇನರನ್ನು ಒಂದು ಆದರ್ಶ ರೈತ ಜನಾಂಗವನ್ನಾಗಿ ಮಾಡಿವೆ. ಅವರು ಸೌಮ್ಯವಾದ ಜನ; ಶಾಂತಿಪ್ರಿಯರು. ಆ ದೇಶದಲ್ಲಿ ಧನಿಕರಿಗೂ ಸಾಮಾನ್ಯ ಮನುಷ್ಯರಿಗೂ ಹೆಚ್ಚು ಭೇದವಿಲ್ಲ. ಎಲ್ಲರೂ ಒಟ್ಟುಗೂಡಿ ಸರ್ವ ಸಮದೃಷ್ಟಿಯಿಂದ ಕೆಲಸ ನಡೆಸಿ, ಸುಖಸಂಪತ್ತುಗಳನ್ನು ಹೊಂದಿ ಸಂತೋಷದಿಂದ ಜೀವಿಸುತ್ತಿರುವರು. ಇದಕ್ಕೆಲ್ಲಾ ಮೂಲಕಾರಣ ಅವರ ಸಹಕಾರ ಪದ್ಧತಿ. ಹಿಂದುಳಿದಿರುವ ಭಾರತೀಯರಾದ ನಮಗೆ ಮಾತ್ರ ಡೇನರ ಸಹಕಾರ ಪದ್ಧತಿಯು ಬರಿಯ ಹಗಲು ಕನಸಾಗಿದೆ.

ಅಮೇರಿಕಾದ ಸಂಯುಕ್ತ ಸಂಸ್ಥಾನಗಳೂ ಮತ್ತು ಕೆನಡಾ ದೇಶವೂ ಡೆನ್ಮಾರ್ಕಿನಂತೆಯೇ ಮಾರಾಟದ ಸಂಘಗಳನ್ನೇರ್ಪಡಿಸಿವೆ. ಸಂಯುಕ್ತ ಸಂಸ್ಥಾನಗಳಲ್ಲಿ ಈಗಾಗಲೇ ಶೇಖಡ ೬೦ ರಷ್ಟು ಧಾನ್ಯ ಮತ್ತು ಹೊಗೆಸೊಪ್ಪು, ಶೇಕಡ ೪೦ ರಷ್ಟು ಹಣ್ಣು ಮತ್ತು ತರಕಾರಿಯೂ, ಶೇಕಡ ೨೮ ರಷ್ಟು ಹಾಲು ಮತ್ತು ಖೋವಾ ಇವುಗಳ ವ್ಯಾಪಾರವೂ ಸಹಕಾರ ಸಂಸ್ಥೆಗಳ ಹತೋಟಿಯಲ್ಲಿವೆ. ಕ್ಯಾಲಿಫೋರ್ನಿಯಾ ಸಂಸ್ಥಾನದಲ್ಲಿ ನಿಂಬೆ, ಕಿತ್ತಳೆ, ಸೇಬು ಮೊದಲಾದ ಹಣ್ಣುಗಳ ವ್ಯಾಪಾರವೆಲ್ಲಾ ಸಾಮಾನ್ಯವಾಗಿ ಸಹಕಾರ ಸಂಸ್ಥೆಗಳ ಮೂಲಕವೇ ನಡೆಯುತ್ತಿದೆ. ಸಂಯುಕ್ತ ಸಂಸ್ಥಾನಗಳಲ್ಲಿ ಸಹಕಾರ ಪದ್ಧತಿಯು ವಿಶೇಷವಾಗಿ ಮನ್ನಣೆಯನ್ನು ಪಡೆದಿದ್ದರೂ ಆ ದೇಶದ ಸಹಕಾರಿಗಳು ಈಗಲೂ ಯೂರೋಪ್ ದೇಶದ ಕ್ರಮಗಳನ್ನೇ ಆದರ್ಶವಾಗಿಟ್ಟುಕೊಂಡಿರುವರೆಂಬುದನ್ನು ಮಾತ್ರ ಮರೆಯಲಾಗದು. ಆಗಿಂದಾಗ್ಗೆ ಸಹಕಾರ ಪದ್ಧತಿಯ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳನ್ನೂ ಅದರ ಪರಿಶೀಲನೆಗಾಗಿ ಅಧಿಕಾರಿಗಳನ್ನೂ ಸಮಿತಿಗಳನ್ನೂ ಆ ದೇಶಗಳಿಗೆ ಕಳುಹಿಸುತ್ತಿರುವರು.

ಪಾಶ್ಚಾತ್ಯ ದೇಶಗಳಲ್ಲೆಲ್ಲಾ ರಷ್ಯಾದೇಶವು ಸಹಕಾರ ಪದ್ಧತಿಯಲ್ಲಿ ಬಹಳ ಮುಂದುವರಿದಿರುವಂತೆ ಅಂಕಿ ಅಂಶಗಳಿಂದ ಕಾಣ

ಬರುವುದು. ಆ ದೇಶದಲ್ಲಿ ಈಗ ಎಲ್ಲೆಲ್ಲೂ ಸಹಕಾರ ಸಂಸ್ಥೆಗಳ
ಮೂರು ಮನೆಯ ಹಳ್ಳಿಯಲ್ಲಿಯೂ ಒಂದು ಸಹಕಾರಿ ಉಗ್ರಾಣವಿದೆ.
ದೇಶದ ಸಹಕಾರ ಸಂಸ್ಥೆಗಳ ಒಟ್ಟು ಸದಸ್ಯರ ಸಂಖ್ಯೆ ಏಳು ಕೋಟಿ
ಮೀರಿದೆ. ಆರ್ಥಿಕ ಜೀವನವೆಲ್ಲವೂ ಸಹಕಾರ ಪದ್ಧತಿಯ ಶಿಸ್ತಿಗೆ ಒ
ಪಟ್ಟಿರುವಂತೆ ಕಂಡುಬರುವುದು. ಇದನ್ನು ನೋಡಿದರೆ ಹತ್ತೊಂದ
ನೆಯ ಶತಮಾನದ ಮಧ್ಯಭಾಗದಲ್ಲಿ ಇಂಗ್ಲೆಂಡಿನಲ್ಲಿ ಹುಟ್ಟಿದ ಸಹಕಾ
ಪದ್ಧತಿಯು ತನ್ನ ಉನ್ನತಿಯ ಶಿಖರವನ್ನು ಈಗ ರಷ್ಯಾದೇಶದಲ್ಲಿ ಮು
ರುವವಾಗಿ ಹೇಳಬಹುದು. ಆದರೆ ಈಗಿನ ರಷ್ಯಾದೇಶದ ಸಹಕಾ
ಪದ್ಧತಿಯಲ್ಲಿ ಐಚ್ಛಿಕ ಮತ್ತು ಸ್ವತಂತ್ರ ಸದಸ್ಯತ್ವಕ್ಕೆ ಅವಕಾಶವಿಲ್ಲ. ಸ
ಕಾರನೂ ಅಲ್ಲಿನ ಸರ್ಕಾರದ ಪ್ರಭುತ್ವದವರ ಆಡಳಿತಕ್ಕೆ ಒಳಪಟ್ಟಿರು
ದರಿಂದ ವ್ಯಕ್ತಿ ಸ್ವಾತಂತ್ರ್ಯಕ್ಕಾಗಲಿ ಖಾಸಗಿಯಾಗಿ ಆಸ್ತಿಯನ್ನು
ಕೂಡಿಸುವುದಕ್ಕಾಗಲಿ ಅವಕಾಶವಿಲ್ಲ. ಅಲ್ಲಿಯ ಈಗಿನ ಸಹಕಾರ ಸಂ
ಗಳು ಲಾಭದ ಹಂಚಿಕೆಯನ್ನೇ ಕಂಡರಿಯವು. ಕೆಲಸವೆಲ್ಲವೂ ಸಾಮೂ
ಹಿಕ ದೃಷ್ಟಿಯಿಂದ ನಡೆಯುವುದು. ಆ ದೇಶದಲ್ಲಿ ಈಗ ನೆಲೆಸಿರು
ಸಮಾಜಸಮತಾವಾದ ಪ್ರಭುತ್ವವು ಹಿಂದಿನಿಂದಲೂ ನಡೆದು ಬಂದಿದ್ದ
ಸಹಕಾರ ಸಂಘಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಅವುಗಳ ಮೂಲಕ
ಜನಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಅವುಗಳನ್ನು ಸಮಾಜಸಮತಾ
ವಾದ ಕ್ರಮದ ಸೇವೆಗಾಗಿ ರೂಪಾಂತರಗೊಳಿಸಿಕೊಂಡ ಸಾಮೂಹಿಕ
ಸಮತಾ ಸಂಸ್ಥೆಗಳೆನ್ನಬೇಕೇ ಹೊರತು ಸಹಕಾರ ಪದ್ಧತಿಗನುಸಾರ
ವಾಗಿ ಕೆಲಸ ಮಾಡುತ್ತಿರುವ ಸ್ವತಂತ್ರ ಸಂಸ್ಥೆಗಳೆಂದು ಹೇಳುವುದು
ಕಷ್ಟ.

ಇದೇ ರೀತಿ ಈಗಿನ ಇಟಲಿಯಲ್ಲೂ ಜರ್ಮನಿಯಲ್ಲೂ ಸಹ ಸಹಕಾರ
ಸಂಸ್ಥೆಗಳು ಆಯಾ ಸರ್ಕಾರಗಳ ಪ್ರಭುತ್ವ ಬಲದಿಂದ ಅಭಿವೃದ್ಧಿ
ಹೊಂದುತ್ತಿವೆ. ಆಯಾ ಜನಾಂಗದ ಆರ್ಥಿಕ ಮುಂದೋಟದಲ್ಲಿ ಸಹ
ಕಾರ ಸಂಸ್ಥೆಗಳಿಗೂ ನಿರ್ದಿಷ್ಟ ಸ್ಥಾನವಿದೆ. ಸಹಕಾರ ಸಂಸ್ಥೆಗಳು
ಒಂದರೊಂದಿಗೊಂದು ಬೆರೆತು, ಒಟ್ಟಿಗೆ ಕಲೆತು ಆರ್ಥಿಕವ್ಯವಸ್ಥೆಗಳನ್ನು
ಬಹು ದಕ್ಷತೆಯಿಂದ ಮುಂದುವರಿಸುತ್ತಿವೆ. ಆದರೆ ಈ ರಚನೆಯಲ್ಲಿ ವ್ಯಕ್ತಿ
ಸ್ವಾತಂತ್ರ್ಯಕ್ಕೆ ಸ್ಥಾನವಿದೆಯೆ ಎಂಬುದು ಚರ್ಚಾಸ್ಪದವಾದ ವಿಷಯ.

ಸಹಕಾರ ಪದ್ಧತಿ ಹುಟ್ಟಿ ಬೆಳೆದುದು ಸ್ವಾತಂತ್ರ್ಯದ ವಾತಾವರಣದಲ್ಲಿ; ವ್ಯಕ್ತಿ ಸ್ವಾತಂತ್ರ್ಯವೂ ಸರ್ವಸಮದೃಷ್ಟಿಯಿಂದ ಕೂಡಿದ ಸದಸ್ಯ ಪ್ರಭುತ್ವವೂ ಸಹಕಾರ ಸಂಸ್ಥೆಯ ಅಡಿಗಲ್ಲು. ಈ ಅಸ್ತಿಭಾರದ ಮೇಲೆ ಅಂತರ್ರಾಷ್ಟ್ರೀಯ ಆರ್ಥಿಕ ಉದ್ಯಮಗಳನ್ನೂ ಅಂತರ್ರಾಷ್ಟ್ರೀಯ ಸೌಹಾರ್ದವನ್ನೂ ಸ್ಥಾಪಿಸಲು ಸಹಕಾರಿಗಳು ಸಾಹಸ ಪಡುತ್ತಿರುವರು. ಈ ಮೂಲತತ್ವಗಳಿಗೆ ವಿರುದ್ಧವಾಗಿ ಇತರ ಜನಾಂಗಗಳಲ್ಲಿ ದ್ವೇಷಾಸೂಯೆಗಳನ್ನು ಉದ್ರೇಕಿಸುವ ಇಟಲಿ ಜರ್ಮನಿ ಸರ್ಕಾರಗಳ ಕೈಗೊಂಬೆಗಳಾದ ಸಂಸ್ಥೆಗಳು ನಿಜವಾದ ಸಹಕಾರ ಸಂಸ್ಥೆಗಳೆಂದು ಹೇಳಲಾಗುವುದಿಲ್ಲ.

ಪೌರಸ್ತ್ಯದೇಶಗಳಲ್ಲಿ ಸಹಕಾರ ಪದ್ಧತಿಯಲ್ಲಿ ಹೆಚ್ಚು ಅಭಿವೃದ್ಧಿಗೆ ಬಂದಿರುವುದು ಜಪಾನ್, ಚೀಣಾ ಮತ್ತು ಇಂಡಿಯಾ. ಜಪಾನ್ ದೇಶದಲ್ಲಿ ಸಹಕಾರ ಪದ್ಧತಿಯು ೧೯೦೦ ರಲ್ಲಿ ಆರಂಭವಾಯಿತು. ಆ ದೇಶದ ಸಹಕಾರಪದ್ಧತಿಯ ಅಭಿವೃದ್ಧಿಯು ಬಹಳ ಆಶಾಜನಕವಾಗಿದೆ. ಅಲ್ಲಿ ಈಗ ಸುಮಾರು ೩೫,೦೦೦ ರೈತರ ಸಂಘಗಳಿವೆ. ಸದಸ್ಯರುಗಳ ಸಂಖ್ಯೆ ಮೈಸೂರು ದೇಶದ ಪ್ರಜಾಸಂಖ್ಯೆಯಷ್ಟಿದೆ. ಲೇವಾದೇವಿ ನಡೆಸತಕ್ಕ ಪತ್ತು ಸಂಘಗಳೇ ಹೆಚ್ಚು. ಇವುಗಳಲ್ಲದೆ ಪ್ರಜಾರೋಗ್ಯ, ವಿಮಾ, ಮತ್ತು ವಾಣಿಜ್ಯ ಸಂಘಗಳೂ ಕೆಲಸಮಾಡುತ್ತಿವೆ. ಆಗಾಗ್ಗೆ ದೇಶದಲ್ಲಿ ತಲೆದೋರುವ ಕ್ಷಾಮಗಳನ್ನು ಹತೋಟಿಯಲ್ಲಿಡಲು ಕೆಲಸ ಮಾಡುತ್ತಿರುವ ಕ್ಷಾಮ ನಿವಾರಣ ಸಂಘಗಳು ಅಲ್ಲಿನ ವಿಶೇಷ ಸಂಸ್ಥೆಗಳು. ಕ್ಷಾಮ ಕಾಲದಲ್ಲಿ ಜೀವನಕ್ಕಿಲ್ಲದೆ ರೈತರಿಗೆ ತೊಂದರೆಯಾದಾಗ ಈ ಕಷ್ಟ ನಿವಾರಣೆ ಮಾಡಿಕೊಳ್ಳಲು ತಕ್ಕ ಸಲಹೆಗಳನ್ನೂ ಸಹಾಯವನ್ನೂ ಕೊಡುವುದು ಈ ಸಂಘಗಳ ಉದ್ದೇಶ. ಇದಕ್ಕಾಗಿ ಸಸ್ಯಗಳನ್ನು ಬೆಳೆಯುವ ಪ್ರಯೋಗಶಾಲೆಗಳನ್ನೂ ಕುರಿ ಮೇಕೆಗಳನ್ನು ಸಾಕುವ ವಿಧಾನಗಳನ್ನು ಕಲಿಸುವ ಸಂಸ್ಥೆಗಳನ್ನೂ ಈ ಸಹಕಾರ ಸಂಘಗಳು ಏರ್ಪಡಿಸುತ್ತವೆ. ಜಪಾನಿನಲ್ಲಿಯೂ ನಮ್ಮ ದೇಶದಲ್ಲಿರುವಂತೆ ಸಹಕಾರ ಪದ್ಧತಿಯು ಸರ್ಕಾರದಿಂದ ಆರಂಭಿಸಲ್ಪಟ್ಟು ಇನ್ನೂ ಅದರ ಆಶ್ರಯದಲ್ಲೇ ಮುಂದುವರಿಯುತ್ತಿದೆ. ಪ್ರಜೆಗಳ ಸ್ವಸಾಮರ್ಥ್ಯದ ಅಡಿಗಲ್ಲಿನ ಮೇಲೆ ಅದು ಇನ್ನೂ ನಿಂತಿಲ್ಲ. ಇನ್ನು ಮುಂದೆ ನಿಲ್ಲಬಹುದೆಂದು ನಿರೀಕ್ಷಿಸಬಹುದು.

ಚೀಣಾದೇಶದಲ್ಲಿ ಸಹಕಾರ ಪದ್ಧತಿಯು ೧೯೧೨ ರಲ್ಲಿ ಪ್ರಾರಂ
ವಾಯಿತು. ಜಪಾನಿನ ಮತ್ತು ಭರತಖಂಡದ ಪ್ರಭಾವವೇ ಇದಕ್ಕೆ
ಕಾರಣ. ಇಲ್ಲಿ ಲೇವಾದೇವಿ (ಪತ್ತು) ಸಂಘಗಳು ಬಹಳ ಪ್ರಾಶಸ್ತ್ಯಕ್ಕೆ
ಬಂದಿವೆ. ಇವುಗಳನ್ನು ಬಿಟ್ಟರೆ ಪತ್ತು, ಮಾರಾಟ, ವಿಮಾ, ಈ ತರಹ ಬೇ
ಬೇರೆ ಹಲವು ಉದ್ದೇಶಗಳುಳ್ಳ (Multi-purpose) ಸಂಘಗಳು ಮುಖ
ವಾದುವು. ಈ ಸಂಘಗಳು ಹಜ್ಜೆಹಜ್ಜೆಗೂ ಸರ್ಕಾರದ ಸಹಾಯವನ್ನು
ಬೇಡುತ್ತಿವೆ. ಇವುಗಳ ಆಡಳಿತವೂ ಅಷ್ಟು ಸಮರ್ಪಕವಾಗಿಲ್ಲ. ಸ
ಕಾರ ತತ್ವಕ್ಕೆ ಅನುಗುಣವಾದ ಕಾರ್ಯ ರೀತಿ ಆ ದೇಶದಲ್ಲ ಇನ್ನೂ
ಪ್ರಚಾರವಾಗಬೇಕಾಗಿದೆ.

ಯಹೂದ್ಯರು ಪ್ಯಾಲಸ್ಟೈನ್ ದೇಶಕ್ಕೆ ವಲಸೆಹೋಗಿ ನೆಲಸಿದಾಗ
ನಿಂದ ಅವರ ಕಾರ್ಯಚಟುವಟಿಕೆಗಳ ಪರಿಣಾಮವಾಗಿ ಸಹಕಾರೋ
ದ್ಯಮಗಳು ಅಲ್ಲಿ ಬಹಳ ಅಭಿವೃದ್ಧಿಗೆ ಬರುತ್ತಿವೆ. ಯಹೂದ್ಯರಲ್ಲಿ ಕೆಲ
ಮಂದಿ ಪ್ಯಾಲಸ್ಟೈನ್ ದೇಶದಲ್ಲಿ ವ್ಯವಸಾಯ ಕೈಕಸಬುಗಳನ್ನವಲಂಬಿ
ನೆಲಸಿರುವರು. ಇವರ ಪ್ರಜಾಸಂಖ್ಯೆ ಸುಮಾರು ೫ ಲಕ್ಷ. ಇವರ
ಸಹಕಾರ ಪದ್ಧತಿಯನ್ನು ಬಹು ಚತುರತೆಯಿಂದ ರೂಢಿಸಿಕೊಂಡು ಅ
ವೇಗವಾಗಿ ಮುಂದುವರಿಯುತ್ತಿರುವರು. ಯೂರೋಪು ದೇಶಗಳಲ್ಲಿ
ಯಹೂದ್ಯರು ನಡೆಸುತ್ತಿರುವ ಸಹಕಾರ ಸಂಸ್ಥೆಗಳೆಲ್ಲವೂ ಲೇವಾದೇ
(ಪತ್ತು) ಸಂಘಗಳು. ಪ್ಯಾಲೆಸ್ಟೈನಿನಲ್ಲಾದರೋ ಲೇವಾದೇ
(ಪತ್ತು) ಸಂಘಗಳು ಶೇಕಡ ೨೦ ಕ್ಕೂ ಕಡಮೆಯಾಗಿದ್ದು ಉಳಿದುವ
ಗಳೆಲ್ಲಾ ಇತರ ವಿವಿಧ ಉದ್ಯಮಗಳನ್ನು ಕೈಗೊಂಡಿರುವುವು. ಈ ರೀ
ಯಾಗಿ ವ್ಯವಸಾಯ ಮತ್ತು ಕೈಗಾರಿಕೆಯ ಸಾಮಾನುಗಳ ತಯಾರಿಕೆ
ಮಾರಾಟ, ಯಾನವಾಹನ ಸೌಕರ್ಯಗಳು ಎಲ್ಲವೂ ವ್ಯವಸ್ಥಿತವಾಗಿವೆ
ಇವುಗಳಲ್ಲದೆ ಮನೆಕಟ್ಟುವ ಸಂಘಗಳೂ ಕುಡಿಯುವ ನೀರನ್ನೊದಗಿಸು
ಸಂಘಗಳೂ ಸ್ಥಾಪನೆಯಾಗಿವೆ. ನಿರಾಶ್ರಿತರಾಗಿ ಬಂದವರಿಗೆಲ್ಲಾ ಸ
ಕಾರ ಸಂಘಗಳ ಮೂಲಕ ಸಹಾಯ ದೊರೆಯುತ್ತಿದೆ.

ಯಹೂದ್ಯರ ಈ ತೆರನಾದ ಸಹಕಾರ ಪ್ರಗತಿಯು ಎಲ್ಲರನ್ನೂ
ವಿಸ್ಮಯಗೊಳಿಸತಕ್ಕದ್ದಾಗಿರುವುದು. ಇದಕ್ಕೆ ಆ ಜನದ ಸದ್ಗುಣಗಳೇ
ಕಾರಣ. ಅವರಲ್ಲಿ ಶಿಸ್ತಿನ ಕಟ್ಟು ಬಲವಾಗಿದೆ. ಪರಸ್ಪರ ವಿಶ್ವಾ

ಮತ್ತು ನಂಬಿಕೆ, ದೂರದರ್ಶಿತ್ವ, ವ್ಯವಹಾರದಕ್ಷತೆ, ಕಷ್ಟಸಹಿಷ್ಣುತೆ, ಸಹನೆ, ದೃಢಸಂಕಲ್ಪ ಇವೇ ಮುಂತಾದ ಸದ್ಗುಣಗಳು ಅವರ ರಕ್ತಗತವಾದುವು. ಸಹಕಾರ ಪದ್ಧತಿಯು ಇಂಥಾ ಜನರಲ್ಲಿ ಬೇರೂರಿ, ಹೊಮ್ಮಿ, ಊರ್ಜಿತವಾಗುವುದೇನಾಶ್ಚರ್ಯ. ಇವುಗಳೆಲ್ಲಕ್ಕೂ ಮಿಗಿಲಾಗಿ ಅವರ ಹೆಂಗಸರೂ ಮುಂದೆ ಬಂದು ದಕ್ಷತೆಯಿಂದ ಸಹಕಾರ ಕಾರ್ಯನಿರ್ವಾಹ ಮಾಡುತ್ತಿದ್ದಾರೆ. ಯಹೂದ್ಯರಲ್ಲಿ ಸಹಕಾರ ಪದ್ಧತಿಯು ಇಷ್ಟರ ಪ್ರಗತಿಗೆ ಬಂದಿರುವುದಕ್ಕೆ ಯಹೂದ್ಯ ಸ್ತ್ರೀಯರ ಸಾಹಸವೇ ಮುಖ್ಯ ಕಾರಣವೆಂದು ಹೇಳಲೂಬಹುದು.

---

೪. ಭರತಖಂಡದಲ್ಲೂ ಮೈಸೂರಿನಲ್ಲೂ ಅದು ಬೆಳೆದ ಬಗೆ

ಭರತಖಂಡದಲ್ಲಿ ಮುಕ್ಕಾಲುಪಾಲು ಜನರಿಗೆ ವ್ಯವಸಾಯವೇ ಜೀವನಾಧಾರ. ನಮ್ಮ ವ್ಯವಸಾಯ ಪದ್ಧತಿಯು ಪ್ರಾಚೀನ ಸಂಪ್ರದಾಯದಲ್ಲೇ ನಡೆದು ಬರುತ್ತಿರುವುದು. ಇತರ ದೇಶಗಳಂತೆ ವಿಜ್ಞಾನ ಸಹಾಯದಿಂದ ಸುಧಾರಿಸಿದ ಪದ್ಧತಿಗಳು ಜನಸಾಮಾನ್ಯದಲ್ಲಿ ಹರಡಿಲ್ಲ. ಆದುದರಿಂದ ವ್ಯವಸಾಯದ ಉತ್ಪತ್ತಿಯೂ ರೈತನ ವರಮಾನವೂ ಇತರ ದೇಶಗಳಿಗಿಂತ ಬಹಳ ಕಡಿಮೆ. ಅದೂ ಅಲ್ಲದ ವ್ಯವಸಾಯವನ್ನೇ ನೆಚ್ಚಿಕೊಂಡಿರುವುದೂ ಒಂದು ಕಷ್ಟ. ಕಾಲಕ್ಕೆ ಸರಿಯಾಗಿ ಮಳೆ ಬಾರದಿದ್ದಲ್ಲಿ ಕ್ಷಾಮ ತಲೆದೋರಿ ವ್ಯವೆಸಾಯಗಾರರಿಗೆ ಜೀವನ ಸಾಗಿಸುವುದು ದುಸ್ತರವಾಗುತ್ತದೆ. ಇದರ ಮೇಲೆ ಸಮಾಜದ ಕಟ್ಟುಪಾಡುಗಳಿಗೆ ಒಳಗಾಗಿ, ದುಬಾರಿ ಖರ್ಚುಗಳನ್ನು ನಿಲ್ಲಿಸುವ ಹಾಗಿಲ್ಲ. ಸಾಮಾನ್ಯವಾಗಿ ರೈತರು ಅವಿದ್ಯಾವಂತರಾದುದರಿಂದ ಮಿತವ್ಯಯದ ಪದ್ಧತಿಯು ಅವರಿಗೆ ತಿಳಿಯದು. ತಿಳಿದರೂ ಕಾರ್ಯಾಚರಣೆಯಲ್ಲಿ ಸಾಧಿಸಲು ಅವಕಾಶವಿರು

ವುದಿಲ್ಲ. ಒಳ್ಳೆಯದಾಗಲಿ ಕೆಟ್ಟದ್ದಾಗಲಿ, ಎಲ್ಲವೂ ಕರ್ಮ ಫಲವೆಂ… ಅವರ ನಿಶ್ಚಲವಾದ ನಂಬಿಕೆ. ವರಮಾನದ ಮಿತಿಯನ್ನು ಮೀರಿದ ಗೃ… ಕೃತ್ಯದ ಖರ್ಚನ್ನು ಸರಿತೂಗಿಸಲು ಸಾಲಕ್ಕೆ ಕೈ ಒಡ್ಡುವರು. ತೀ… ಸಲು ಚೈತನ್ಯವಿಲ್ಲದೆ ಸಾಲವು ದಿನೇ ದಿನೇ ಏರುವುದು. ನಮ್ಮ ದೇ… ದಲ್ಲಿ ವ್ಯವಸಾಯಗಾರರ ಸಾಲದ ಹೊರೆ ಎಷ್ಟಿರಬಹುದೆಂಬುದು ಸ್ಪಷ್ಟ… ಮಾಡಿ ತಿಳಿಯುವುದು ಕಷ್ಟಸಾಧ್ಯ. ಆದರೂ ಕೆಲವು ಅಂದಾಜುಗ… ಆಧಾರದ ಮೇಲೆ ಅರ್ಥಶಾಸ್ತ್ರಜ್ಞರು ದೇಶೀಯ ಸಂಸ್ಥಾನಗಳ… ಬಿಟ್ಟು ಬ್ರಿಟಿಷ್ ಭಾರತದಲ್ಲಿ ಮಾತ್ರವೇ ರೈತರ ಸಾಲದ ಒಟ್ಟು ಹೊರೆ… ಒಂದು ಸಾವಿರ ಕೋಟಿ ರೂಪಾಯಿಗಳಿಗೆ ಕಡಮೆ ಇಲ್ಲವೆಂದು ಲೆಕ್ಕಹಾ… ರುವರು. ಕೆಲವು ವರ್ಷಗಳ ಹಿಂದೆ ಮದರಾಸು ಅಧಿಪತ್ಯದಲ್ಲಿ ನಡೆಸಿ… ಪರಿಶೋಧನೆಯಿಂದ ಆ ಪ್ರಾಂತ್ಯದಲ್ಲಿ ರೈತರ ಸಾಲವು ಇನ್ನೂರು ಕೋ… ರೂಪಾಯಿಗಳಿಗೆ ಕಡಮೆ ಇಲ್ಲವೆಂದು ವರದಿಯಾಗಿದೆ. ಮೈಸೂರ… ದೇಶದಲ್ಲಿ ರೈತರ ಸಾಲವು ಮೂವತ್ತೈದು ಕೋಟಿಗೆ ಕಡಮೆ ಇಲ್ಲವೆಂ… ಅಧಿಕಾರಯುತವಾಗಿ ಅಂದಾಜು ಮಾಡಿರುವರು.

ಈ ಸಾಲದ ಏರಿಕೆಗೆ ಹೀನಾಯವಾದ ಬಡ್ಡಿಯ ದರವೂ, ಅಸಲ… ಜೊತೆಯಲ್ಲಿ ಬಡ್ಡಿಯನ್ನು ಕೂಡಿಸಿ ಸಾಲದ ಮೊತ್ತವನ್ನು ಏರಿಸುವ ಪ… ತಿಯೂ ಕಾರಣವೆನ್ನಬಹುದು. ಆದರೆ ಮುಖ್ಯ ಕಾರಣ ರೈತನ ವರಮಾ… ಕಡಮೆಯಾಗಿರುವುದು. ಇತರ ದೇಶಗಳೊಂದಿಗೆ ಹೋಲಿಸಿದರೆ ಭಾ… ತೀಯರ ವರಮಾನವು (ಸರ್ ಎಂ. ವಿಶ್ವೇಶ್ವರಯ್ಯನವರ ಗಣನೆ… ಪ್ರಕಾರ) ಈ ರೀತಿ ಇರುವುದು—

ದೇಶಗಳು	ಪ್ರತಿ ವ್ಯಕ್ತಿಯ ಸರಾಸರಿ ವಾರ್ಷಿಕ ವರಮಾನ ರೂ.
೧. ಅಮೆರಿಕಾ ಸಂಯುಕ್ತ ಸಂಸ್ಥಾನಗಳು	೨,೦೫೩
೨. ಕೆನಡಾದೇಶ	೧,೩೬೮
೩. ಗ್ರೇಟ್‌ಬ್ರಿಟನ್ ಮತ್ತು ಐರ್ಲೆಂಡು	೧,೦೯೨
೪. ಫ್ರಾನ್ಸು	೬೩೬
೫. ಜಪಾನ್	೨೬೧
೬. ಭರತಖಂಡ	೮೨

ಈ ಶೋಚನೀಯ ಪರಿಸ್ಥಿತಿಯನ್ನು ಉತ್ತಮಪಡಿಸಲು ಕೈಕೊಳ್ಳಬೇಕಾದ ಪ್ರಯತ್ನಗಳು ಎರಡು ವಿಧವಾಗಿವೆ. ಮೊದಲನೆಯದು ವರಮಾನವನ್ನು ಹೆಚ್ಚಿಸಲು ಪ್ರಯತ್ನ ಮಾಡುವುದು. ಎರಡನೆಯದು, ದುಂದು ಖರ್ಚನ್ನು ನಿಲ್ಲಿಸಿ ಅತ್ಯಾವಶ್ಯಕವಾದ ಉದ್ಯಮಗಳಿಗೆ ಸುಲಭ ದರದ ಬಡ್ಡಿಯಮೇಲೆ ಬಂಡವಾಳವನ್ನೊದಗಿಸುವುದು. ಇವುಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದಲೇ ಸಹಕಾರ ಪದ್ಧತಿಯು ನಮ್ಮ ದೇಶದಲ್ಲಿ ಆರಂಭವಾದುದು.

ಪ್ರಾಚೀನಕಾಲದಿಂದಲೂ ನಮ್ಮ ದೇಶದಲ್ಲಿ ಸಾಮಾಜಿಕ ಕೆಲಸಕಾರ್ಯಗಳಲ್ಲೆಲ್ಲಾ ಗ್ರಾಮಸ್ಥರೆಲ್ಲರೂ ಒಟ್ಟಿಗೆ ಕಲೆತು ಮಾಡುವುದೂ, ಗೃಹಕೃತ್ಯದ ಕೆಲಸಕಾರ್ಯಗಳಲ್ಲಿ ನಂಟರಿಷ್ಟರು ಮತ್ತು ನೆರೆಹೊರೆಯವರು ಸಹಕರಿಸುವುದೂ ವಾಡಿಕೆಯಲ್ಲಿವೆ. ಈ ರೀತಿಯ ಸಾಮೂಹಿಕ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿದ್ದುವೆಂಬುದಕ್ಕೆ ವೇದಗಳಲ್ಲೂ ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ಸಾಕಾದಷ್ಟು ಆಧಾರಗಳಿವೆ. ಭರತಖಂಡದ ನಾನಾ ಭಾಗಗಳಲ್ಲಿ ಬೇರೆ ಬೇರೆಯ ಕಸಬಿನವರು ತಮಗೆ ಬೇಕಾದ ಬಂಡವಾಳವನ್ನು ಸಾಮೂಹಿಕವಾಗಿ ಕೂಡಿಸುವ ಪದ್ಧತಿಯೂ ಇತ್ತು. ಅವುಗಳಲ್ಲಿ ಕೆಲವು ಈಗಲೂ ನಡೆದುಬಂದಿವೆ. ಅವುಗಳಲ್ಲೆಲ್ಲಾ ಮುಖ್ಯವಾದುದು ಮದರಾಸು ಆಧಿಪತ್ಯದಲ್ಲಿ ಹರಡಿದ್ದ ನಿಧಿ ಎಂಬ ಹೆಸರಿನ ಸಂಸ್ಥೆಗಳು. ಇವು "ಚೀಟಿಕಟ್ಟು" ಎಂಬ ಪದ್ಧತಿಯನ್ನನುಸರಿಸಿ ಜನರಿಗೆ ಬಂಡವಾಳವನ್ನೊದಗಿಸುತ್ತಿದ್ದುವು. ಇವು ಪರಸ್ಪರ ಸಹಾಯದ ಆಧಾರದಮೇಲೆ ಬೆಳೆದುಬಂದುವು. ಇವುಗಳನ್ನು ಅನುಸರಿಸಿ ಪಂಜಾಬಿನಲ್ಲಿಯೂ ಸಂಯುಕ್ತ ಪ್ರಾಂತದಲ್ಲಿಯೂ ಈ ಮಾದರಿಯ ಸಂಸ್ಥೆಗಳು ಹರಡಿದುವು. ಇವಲ್ಲದೆ ಪಂಜಾಬಿನಲ್ಲಿ ೧೮೯೧ರಲ್ಲಿ ಸ್ವತಂತ್ರವಾದ ಒಂದು ಸಹಕಾರ ಸಂಸ್ಥೆಯು ಆರಂಭವಾಗಿ ಕೆಲವು ವರ್ಷ ಕೆಲಸ ಮಾಡಿತು. ೧೮೯೪ರಲ್ಲಿ ನಮ್ಮ ಸಂಸ್ಥಾನದಲ್ಲಿಯೂ ವ್ಯವಸಾಯದ ಬ್ಯಾಂಕುಗಳು ಸರಕಾರದವರಿಂದ ಸ್ಥಾಪಿಸಲ್ಪಟ್ಟು ಕೆಲವು ವರ್ಷ ಕೆಲಸ ನಡೆಸಿದುವು. ಇತರ ಪ್ರಾಂತ್ಯಗಳಲ್ಲೂ ಅಲ್ಲೊಂದು ಇಲ್ಲೊಂದು ಸಹಕಾರ ಸಂಸ್ಥೆಗಳು ಹುಟ್ಟಿಕೊಂಡುವು. ಆದರೆ ಈ ಉದ್ಯಮಗಳೊಂದೂ ಊರ್ಜಿತವಾಗಲಿಲ್ಲ.

ವ್ಯವಸಾಯಗಾರರಿಗೆ ಬಂಡವಾಳವನ್ನೊದಗಿಸುವ ಪ್ರಥಮ ಪ್ರ
ತ್ನವು ೧೮೮೨ರಲ್ಲಿ ಮಹಾರಾಷ್ಟ್ರದಲ್ಲಿ ನಡೆಯಿತು. ಸರ್ ವಿಲಿ
ವೆಡರ್‌ಬರ್ನ್, ಮಹಾದೇವ್ ಗೋವಿಂದ ರಾನಡೆ ಈ ಇಬ್ಬರು ನ್ಯಾಯ
ಧೀಶರೂ ತಾವು ರಚಿಸಿದ ಯೋಜನೆಯೊಂದರ ವಿವರಗಳನ್ನು ಸರ್ಕಾರ
ಕಳುಹಿಸಿಕೊಟ್ಟರು. ಇವರ ಸಲಹೆಗಳನ್ನು ಸರ್ಕಾರದವರು ಒಪ್ಪಲಿ
ಆನಂತರ ಸರ್ಕಾರದವರೇ ತಕಾವಿ ಸಾಲಗಳ ಮೂಲಕ ರೈತರ
ಸಹಾಯವನ್ನೊದಗಿಸುವ ಕಾರ್ಯವನ್ನು ಕೈಕೊಂಡರು. ಈ ಏರ್ಪಾ
ಭರತಖಂಡದಲ್ಲೆಲ್ಲಾ ಈಗಲೂ ಆಚರಣೆಯಲ್ಲಿರುವುದು. ಐವತ್ತು ಅ
ವತ್ತು ವರ್ಷಗಳಿಂದಲೂ ನಡೆದುಬಂದರೂ ನಾನಾ ಕಾರಣಗಳಿಂದ
ವ್ಯವಸ್ಥೆ ಜನಾದರಣೀಯವಾಗಿಲ್ಲ; ಇದರಿಂದ ರೈತರಲ್ಲಿ ಹೆಚ್ಚು ಮಂದ
ಪ್ರಯೋಜನವೂ ಆಗಿಲ್ಲ. ಅಲ್ಲದೆ ಇದರ ಮುಖ್ಯೋದ್ದೇಶವಾದ ವ್ಯ
ಸಾಯಾಭಿವೃದ್ಧಿಯೂ ನೆರವೇರಲಿಲ್ಲ.

ಈ ಯೋಜನೆಯು ಫಲಕಾರಿಯಾಗದೆ ಇದ್ದುದರಿಂದ ವ್ಯವಸಾ
ಗಾರರಿಗೆ ಬಂಡವಾಳವನ್ನೊದಗಿಸಲು ಬೇರೆ ಮಾರ್ಗಗಳನ್ನು ಹುಡ
ಕಲು ಯೋಜನೆಗಳಾರಂಭವಾದುವು. ಮದರಾಸು ಸರ್ಕಾರದವ
೧೮೯೨ರಲ್ಲಿ ವ್ಯವಸಾಯ ಬ್ಯಾಂಕುಗಳನ್ನು ಸ್ಥಾಪಿಸುವುದು ಸಾಧ್ಯವ
ಇಲ್ಲವೇ, ಅದಕ್ಕೆ ಸಾಧಕಗಳೇನು ಬಾಧಕಗಳೇನು ಎಂಬುದನ್ನು ಪರಿಶೀ
ಸಲು ಫ್ರೆಡ್ರಿಕ್ ನಿಕಲ್‌ಸನ್ ಎಂಬ ಅಧಿಕಾರಿಯನ್ನು ನೇಮಿಸಿದರ
ಆತನು ಮದರಾಸು ಪ್ರಾಂತದಲ್ಲಿ ಹಿಂದಿನಿಂದ ನಡೆದುಬಂದಿದ್ದ "ನಿಧಿ
ಸಂಸ್ಥೆಗಳ ರಚನೆ ಮತ್ತು ಕಾರ್ಯಕ್ರಮಗಳನ್ನೂ ಪಾಶ್ಚಾತ್ಯ ದೇಶಗಳ
ವ್ಯವಸಾಯಗಾರರಿಗೆ ಬಂಡವಾಳವನ್ನು ಒದಗಿಸಲು ಏರ್ಪಟ್ಟ ವ್ಯವಸ
ಯನ್ನೂ ಬಹುಶ್ರದ್ಧೆಯಿಂದ ಕೂಲಂಕಷವಾಗಿ ಪರಿಶೀಲಿಸಿ ಭಾರತೀಯ
ಸ್ಥಿತಿಗತಿಗಳಿಗನುಗುಣವಾದ ಸಲಹೆಗಳನ್ನೊಳಕೊಂಡ ತನ್ನ ವರದಿಯನ
ಸರ್ಕಾರಕ್ಕೆ ಒಪ್ಪಿಸಿದನು. ಈ ವರದಿಯಲ್ಲಿ ಅತ್ಯುಪಯುಕ್ತವಾದ ವಿ
ಯಗಳು ಸಂಗ್ರಹವಾಗಿವೆ; ರೈತಾಪಿ ಜನರ ಜೀವನ ಪರಿಶ್ರಮ ಚೆನ್ನಾ
ಗಿದೆ; ಸಲಹೆಗಳೂ ಕೂಡ ವಿವೇಕಪೂರ್ಣವಾಗಿವೆ. ರೈತರ ಏಳಿಗೆ
ಸಹಕಾರ ಪದ್ಧತಿಯನ್ನನುಸರಿಸಬೇಕೆಂಬುದೇ ಈ ವರದಿಯ ಮುಖ್ಯ
ಸಲಹೆ.

ಇದೇ ಸಮಯದಲ್ಲಿ ಸಂಯುಕ್ತ ಪ್ರಾಂತದ ಅಧಿಕಾರಿಯಾಗಿದ್ದ ದೂಪರ್ನೇ ಎಂಬ ಜಿಲ್ಲಾಧಿಕಾರಿಯು ತನ್ನ ಅಧಿಕಾರಕ್ಕೆ ಒಳಪಟ್ಟ ಜಿಲ್ಲೆಯ ರೈತರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ತನ್ನ ಸ್ವಂತ ಜವಾಬ್ದಾರಿಯ ಮೇಲೆ ಕೆಲವು ಕಾರ್ಯಗಳನ್ನು ಕೈಕೊಂಡನು. ಇವುಗಳಲ್ಲಿ ರೈತರಿಗೆ ಬಂಡವಾಳವನ್ನೊದಗಿಸುವ ಬ್ಯಾಂಕುಗಳ ವ್ಯವಸ್ಥೆ ಒಂದು. ಈ ತರಹ ಬ್ಯಾಂಕುಗಳು ಅವನ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಚೆನ್ನಾಗಿ ಕೆಲಸಮಾಡುತ್ತಿದ್ದುವು. ಸರ್ಕಾರದ ಪ್ರೇರಣೆಯಾಗಲಿ ಬೆಂಬಲವಾಗಲಿ ಇಲ್ಲದೆ ಖಾಸಗಿಯಾಗಿಯೇ ಈ ರೀತಿ ಕೆಲಸವನ್ನು ಕೈಕೊಂಡು ನಡೆಸಿದುದು ದೂಪರ್ನೆಯ ಸಾಹಸ. ತಾನು ನಡೆಸಿದ ಪ್ರಯೋಗಗಳನ್ನು ಕುರಿತು ಒಂದು ವರದಿಯನ್ನು ಪ್ರಕಟಿಸಿದನು. ನಿಕಲ್‌ಸನ್ ವರದಿಯೂ ದೂಪರ್ನೆಯ ವರದಿಯೂ ಎರಡೂ ಇಂಡಿಯಾ ಸರ್ಕಾರದ ಗಮನಕ್ಕೆ ಬಂದುವು. ಇವುಗಳನ್ನು ಪರಿಶೀಲಿಸಲು ಇಂಡಿಯಾ ಸರ್ಕಾರದವರು ೧೯೦೦ರಲ್ಲಿ ಕಲ್ಕತ್ತೆಯಲ್ಲಿ ಒಂದು ಸಭೆ ಸೇರಿಸಿದರು. ಈ ಸಭೆಯ ನಿರ್ಧಾರದಂತೆ ಇಂಡಿಯಾ ಸರ್ಕಾರದವರು ವ್ಯವಸಾಯಗಾರರ ಬದುಕನ್ನೂ ಬಾಳನ್ನೂ ಉತ್ತಮಪಡಿಸಲು ರೈಫೀಸೆನ್ ಮಾದರಿಯ ಲೇವಾದೇವಿ (ಪತ್ತು) ಸಹಕಾರ ಸಂಘಗಳನ್ನು ಸ್ಥಾಪಿಸಲು ನಿಶ್ಚಯಿಸಿದರು. ಇದನ್ನು ಕಾರ್ಯರೂಪಕ್ಕೆ ತರಲು ಬೇಕಾದ ಕಾನೂನು ೧೯೦೪ರಲ್ಲಿ ಆಚರಣೆಗೆ ಬಂತು.

ಈ ಕಾನೂನಿಗನುಸಾರವಾಗಿ ಸರ್ಕಾರದವರು ಪ್ರತಿಯೊಂದು ಪ್ರಾಂತದಲ್ಲೂ ಸಹಕಾರ ಸಂಘಗಳ ರಿಜಿಸ್ಟ್ರಾರರೆಂಬ ಅಧಿಕಾರಿಗಳನ್ನು ನೇಮಿಸಿದರು. ಅವರ ಮೂಲಕ ಮತ್ತು ಅವರ ಮೇಲ್ವಿಚಾರಣೆಗೆ ಒಳಪಟ್ಟಂತೆ ಸಹಕಾರ ಸಂಘಗಳ ಸ್ಥಾಪನೆಗೆ ಅವಕಾಶವಾಯಿತು. ಅಲ್ಲದೆ ಹೊಸದಾಗಿ ಸ್ಥಾಪಿಸಲ್ಪಟ್ಟ ಸಂಘಗಳಿಗೆ ಸ್ಟಾಂಪು ಮತ್ತು ಕೋರ್ಟು ಫೀ, ರಿಜಿಸ್ಟ್ರೇಷನ್ ರುಸುಮು, ಇವೇ ಮುಂತಾದ ಖರ್ಚುಗಳಿಲ್ಲದೆ ವ್ಯವಹಾರ ನಡೆಸುವ ರಿಯಾಯಿತಿಗಳನ್ನು ಒದಗಿಸಿಕೊಟ್ಟರು. ಇವುಗಳ ಜೊತೆಗೆ ಸಹಕಾರ ಪ್ರಚಾರ ಮತ್ತು ಶಿಕ್ಷಣ, ಸಹಕಾರ ಸಂಘಗಳ ಮೇಲ್ವಿಚಾರಣೆ, ಲೆಕ್ಕ ಪರಿಶೋಧನೆ, ಇವೇ ಮೊದಲಾದ ಜವಾಬ್ದಾರಿಯ ಭಾರವನ್ನೆಲ್ಲಾ ಸರ್ಕಾರದವರೇ ವಹಿಸಿಕೊಂಡರು.

೧೯೦೪ನೆಯ ಕಾನೂನಿನಲ್ಲಿ ಒಂದೆರಡು ನ್ಯೂನತೆಗಳು ಕಂ
ಬಂದುವು. ಈ ಕಾನೂನಿಗನುಸಾರವಾಗಿ ಲೇವಾದೇವಿ ಸಂಘ
ಸ್ಥಾಪನೆ ಮಾತ್ರ ಸಾಧ್ಯವಾಯಿತು. ಮಾರಾಟದ ಸಹಕಾರ ಸಂ
ಗಳು, ವಿಮಾ ಸಹಕಾರ ಸಂಘಗಳು, ಸಹಕಾರಿ ಉಗ್ರಾಣಗಳು
ಇಂಥಾ ಸಂಸ್ಥೆಗಳ ಸ್ಥಾಪನೆಗೆ ಅವಕಾಶವಿರಲಿಲ್ಲ. ಸಂಘಗಳ ಅ
ವೃದ್ಧಿಗೆ ಆಗತ್ಯವಾಗಿ ಬೇಕಾದ ಕೇಂದ್ರ ಸಂಸ್ಥೆಗಳ ರಚನೆ ಮ
ನಿರ್ವಾಹಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದಿದ್ದುದು ಇದರ ಇನ್ನೊಂ
ಲೋಪ. ಇವೆರಡು ನ್ಯೂನತೆಗಳನ್ನೂ ೧೯೧೨ನೆಯ ಇಸವಿಯಲ್ಲಿ ಶಿ
ಪಡಿಯಾದ ಸಹಕಾರದ ಕಾನೂನು ಹೋಗಲಾಡಿಸಿತು. ಅಲ್ಲಿಂದೀ
ವಿವಿಧ ಸಹಕಾರ ಉದ್ಯಮಗಳು ಬೆಳೆಯಲು ಸಾಧ್ಯವಾಗಿದೆ.

೧೯೧೯ರವರೆಗೂ ಈ ಕಾನೂನಿಗೆ ಒಳಪಟ್ಟಂತೆ ಸಹಕಾರ ಸಂ
ಗಳ ಆಡಳಿತವೆಲ್ಲವೂ ಕೇಂದ್ರ ಸರ್ಕಾರದ ಹತೋಟಿಯಲ್ಲೇ ಇದ್ದಿತ
ಅಲ್ಲಿಂದೀಚೆಗೆ, ರಾಜಕೀಯ ಸುಧಾರಣೆಗಳ ಪರಿಣಾಮವಾಗಿ, ಸ
ಕಾರ ಸಂಸ್ಥೆಗಳ ಆಡಳಿತವು ಪ್ರಾಂತ ಸರ್ಕಾರಗಳಿಗೆ ವರ್ಗಾಯಿಸ
ಟಿತು. ಕೆಲವು ಪ್ರಾಂತ ಸರ್ಕಾರಗಳು ಇಂಡಿಯಾ ಸರ್ಕಾರದ ಕಾನ
ನಿನಲ್ಲಿ ತಮ್ಮ ಪ್ರಾಂತದ ಸ್ಥಿತಿಗತಿಗಳಿಗನುಗುಣವಾಗಿ ಅತ್ಯಾವಶ್ಯಕವಾ
ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಹೊಸ ಕಾನೂನುಗಳನ
ರಚಿಸಿಕೊಂಡಿವೆ. ಪ್ರಾಂತ ಸರ್ಕಾರಗಳು ಸಹಕಾರದ ವಿಚಾರದ
ಬಹಳ ಆಸಕ್ತಿ ಹೊಂದಿವೆಯಾದುದರಿಂದ ಸಹಕಾರ ಪರಿಸ್ಥಿತಿಯು ಬಹ
ಚುರುಕಾಗಿ ಮುಂದುವರಿಯುತ್ತಿದೆ. ಆಗಿಂದಾಗ್ಗೆ ಪ್ರಾಂತ ಸರ್ಕಾ
ದವರು ಸಹಕಾರ ಪದ್ಧತಿಯ ಪ್ರಗತಿಯನ್ನು ವಿಮರ್ಶಿಸಿ ಅದನ್ನು ಸುಧ
ರಿಸುವ ಉದ್ದೇಶದಿಂದ ಪರಿಶೀಲನಾ ಸಮಿತಿಗಳನ್ನೇರ್ಪಡಿಸುತ್ತಿದ್ದಾ
ಆಗಿಂದಾಗ್ಗೆ ನಿಪುಣರ ಸಲಹೆಗಳನ್ನು ಪಡೆಯುತ್ತಿದ್ದಾರೆ; ಪ್ರಗತಿಪ
ಯುಕವಾದ ಸಲಹೆಗಳನೇಕವನ್ನು ಕಾರ್ಯರೂಪಕ್ಕೆ ತರಲು ನೆರವಾ
ದ್ದಾರೆ.

ಸಹಕಾರ ಪದ್ಧತಿಯು ನಮ್ಮ ದೇಶದಲ್ಲಿ ಹುಟ್ಟಿ ಬೆಳೆದು ಬಲಗೊ
ಡಿರುವುದು ಸರ್ಕಾರದ ಬೆಂಬಲದಿಂದಲೇ. ಇದರ ಬೆಳವಣಿಗೆಯ
ಸರ್ಕಾರವೇ ಮುಖ್ಯ ಪಾತ್ರವನ್ನು ವಹಿಸಿರುವುದು. ಇತರ ದೇ

ಗಳಲ್ಲೂ ಆಯಾ ಸರ್ಕಾರಗಳು ಸಹಕಾರ ಪದ್ಧತಿಯ ಬೆಳವಣಿಗೆಗೆ ನಾನಾ ರೂಪದಲ್ಲಿ ಸಹಾಯ ಸಂಪತ್ತುಗಳನ್ನೊದಗಿಸಿರುವುವು. ಆದರೆ ಭರತಖಂಡದಲ್ಲಿ ಸಹಕಾರಕ್ಕೆ ಸರ್ಕಾರದಿಂದ ದೊರೆಯುತ್ತಿರುವಷ್ಟು ಬೆಂಬಲ ಬೇರೆ ಯಾವ ದೇಶದಲ್ಲೂ ದೊರೆತಿಲ್ಲ. ಇಲ್ಲಿ ಸಹಕಾರ ಪದ್ಧತಿಯು ಸ್ವತಂತ್ರವಾಗಿ ಜನರ ಮುಂದಾಳುತನದಲ್ಲಿ ಬೆಳೆಯದೆ ಸರ್ಕಾರದ ಪಾಲನೆಗೆ ಒಳಪಟ್ಟು ಸರ್ಕಾರದ ಪ್ರೋತ್ಸಾಹದಿಂದ ಜನಗಳಲ್ಲಿ ಆಚರಣೆಗೆ ಬಂದಿವೆ. ಸಹಕಾರದಿಂದ ಪ್ರಜೆಗಳ ಆರ್ಥಿಕ ಮತ್ತು ನೈತಿಕ ಜೀವನವು ಉತ್ತಮಗೊಳ್ಳುವುದೆಂಬ ದೃಢವಾದ ನಂಬಿಕೆ ಇದ್ದುದರಿಂದಲೇ ಸರ್ಕಾರದವರು ಇದನ್ನು ದೇಶದ ಆದ್ಯಂತವೂ ಪ್ರಚಾರ ಮಾಡುವ ಕೆಲಸವನ್ನು ಕೈಕೊಂಡರು. ಇದರಿಂದ ಪ್ರತಿಫಲವೂ ಹೇರಳವಾಗಿ ದೊರಕಿದೆ. ಆದಾಗ್ಯೂ ಪ್ರಜೆಗಳ ಸ್ವಸಾಮರ್ಥ್ಯದಿಂದಲೇ ಬೆಳೆದ ಪದ್ಧತಿಗೂ ಸರ್ಕಾರದ ಪ್ರಯತ್ನದಿಂದಲೇ ಬಳಕೆಗೆ ಬಂದ ಪದ್ಧತಿಗೂ ವ್ಯತ್ಯಾಸವಿದ್ದೇ ಇದೆ. ಸರ್ಕಾರವೂ ಸಹ ಕಾಲಕ್ರಮದಲ್ಲಿ ಸಹಕಾರ ಪದ್ಧತಿಯು ಸಂಪೂರ್ಣವಾಗಿ ಖಾಸಗೀ ಆಡಳಿತಕ್ಕೆ ಒಳಪಡಬೇಕೆಂಬ ಘನ ಉದ್ದೇಶವನ್ನು ಹೊಂದಿರುವುದು. ಇದನ್ನು ಅಧಿಕಾರಿಗಳು ಆಗಿಂದಾಗ್ಗೆ ಹೇಳುತ್ತಲೇ ಇರುವರು. ಉತ್ಸಾಹದಿಂದ ಮುಂದೆ ಬಂದು ಪ್ರಾಮಾಣಿಕವಾದ ಸೇವೆ ಸಲ್ಲಿಸುವ ಖಾಸಗಿ ಜನರು ಬಹಳ ವಿರಳ. ರೈತರ ಪ್ರಗತಿಸಾಧನೆಗೆ ಪ್ರತಿಯೊಂದುಹಳ್ಳಿಯಲ್ಲೂ ರೈಫೀಸೆನ್ನಿನಂತೆ ಮಾರ್ಗದರ್ಶಕರು ಒಬ್ಬೊಬ್ಬರು ಇರುವುದು ಅತ್ಯಾವಶ್ಯಕ. ಇದನ್ನರಿತೇ ಸರ್ ಫ್ರೆಡ್ರಿಕ್ ನಿಕಲ್‌ಸನ್ನನು ತನ್ನ ಅಮೂಲ್ಯವಾದ ವರದಿಯಲ್ಲಿ 'ಪ್ರತಿಯೊಂದು ಗ್ರಾಮದಲ್ಲೂ ರೈಫೀಸೆನ್ನಿನಂತೆಯ ದುಡಿದು ಕೆಲಸ ಸಾಧಿಸತಕ್ಕ ಮಹನೀಯನನ್ನು ಪತ್ತೆಮಾಡುವುದೇ ಸಹಕಾರ ಪದ್ಧತಿಯ ಏಳಿಗೆಗೂ ರೈತನ ಜೀವನೋದ್ಧಾರಕ್ಕೂ ಮೂಲಸಾಧನ' ಎಂದು ಸಾರಿದುದು. ಇದರ ಆಧಾರದ ಮೇಲೆಯೇ ಗ್ರಾಮಾಂತರಗಳಲ್ಲಿ ಅನಿಯಮಿತ ಜವಾಬ್ದಾರಿಯುಳ್ಳ ರೈಫೀಸೆನ್ ಸಂಘಗಳು ಏರ್ಪಟ್ಟಿವೆ. ಆದರೆ ಈ ತರಹ ಸಂಘಗಳಿಂದ ನಿರೀಕ್ಷಿಸಿದಷ್ಟು ಫಲ ದೊರೆಯದೆ ಸಹಕಾರ ಪ್ರೇಮಿಗಳಿಗೆ ನಿರುತ್ಸಾಹ ಉಂಟಾಗಿದೆ. ಸಂಘಗಳ ರಚನೆಗಳಲ್ಲಿ ರೈಫೀಸೆನ್ ಮಾದರಿಯೇ ತಪ್ಪಿರಬಹುದೆಂಬ ಶಂಕೆಯೂ ಈಚೆಗೆ ಕೆಲವರಲ್ಲಿ

ತಲೆದೋರಿದೆ. ಗ್ರಾಮಾಂತರದಲ್ಲಿ ದಕ್ಷತೆಯಿಂದ ಕಾರ್ಯನಿರ್ವ
ನಡೆಸತಕ್ಕ ನಿಃಸ್ವಾರ್ಥರಾದ ಖಾಸಗಿ ಜನರಿಲ್ಲದಿರುವಾಗ ಅನಕ್ಷರಸ್ಥರೂ
ಅವಿದ್ಯಾವಂತರೂ ಆದ ನಮ್ಮ ರೈತರ ಮೇಲೆ ಅಪರಿಮಿತ ಜವಾಬ್ದಾ
ರಿಯ ಹೊರೆಯನ್ನು ಹೊರಿಸಿರುವುದು ತಪ್ಪೆಂದು ಕೆಲವರು ಅಭಿಪ್ರಾ
ಪಟ್ಟು ತಕ್ಕ ಬದಲಾವಣೆಗಳನ್ನು ಮಾಡಲು ಉದ್ಯುಕ್ತರಾಗಿರುವರು
ಮದರಾಸಿನಲ್ಲಂತೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಅತಿ ತೀವ್ರ
ವಾಗಿವೆ.

ಭಿನ್ನಾಭಿಪ್ರಾಯಗಳು ತುಂಬು ಜೀವನದ ಗುರುತು. ಪ್ರಗ
ಯುತವಾದ ಯಾವುದೊಂದು ಜೀವನದಲ್ಲೂ ಭಿನ್ನಾಭಿಪ್ರಾಯಗಳ
ಕಂಡುಬರುವುದು ಸಹಜ. ಇವುಗಳಿಂದ ಸಹಕಾರಪದ್ಧತಿಯ ಬೆಳವ
ಗೆಗೆ ಮತ್ತಿಷ್ಟು ಉತ್ತೇಜನ ದೊರೆಯುವುದು ; ವಿವಿಧ ಪ್ರಯೋಗಗಳನ್ನು
ನಡೆಸಲವಕಾಶ ದೊರೆಯುವುದು. ಈಗಾಗಲೇ ಭರತಖಂಡದ ಅದ್ಯಂ
ದಲ್ಲೂ ಸಹಕಾರಪದ್ಧತಿಗೆ ಬಹುಮಟ್ಟಿನ ಪ್ರಾಶಸ್ತ್ಯ ದೊರೆತಿದೆ. ಇದೇ
ನಮ್ಮ ಏಳಿಗೆಗೆ ನಲೀಸಾದ ಮಾರ್ಗವೆಂದು ಎಲ್ಲರಿಗೂ ಮನದಟ್ಟಾಗಿದೆ
ಬಡ ಬೋರೇಗೌಡನನ್ನು ಋಣಮುಕ್ತನನ್ನಾಗಿ ಮಾಡಲು ಇದೊಂದೆ
ಮಾರ್ಗವೆಂದು ಹಲವರ ದೃಢನಂಬಿಕೆ. ಎಲ್ಲೆಲ್ಲೂ ಸಹಕಾರ ಸಂಘಗಳ
ಬೆಳೆದಿವೆ, ಇನ್ನೂ ಬೆಳೆಯುತ್ತಿವೆ. ಈ ಸಂಘಗಳ ಉದ್ದೇಶಗಳು ವಿಧವಿಧ
ವಾಗಿವೆ. ಆದರೆ ಅತಿಶಯವಾಗಿ ಬೆಳೆದಿರುವುವು ಲೇವಾದೇವಿ (ಪತ್ತು
ಸಂಘಗಳು. ಚೀಣಾ, ಜಪಾನ್ ದೇಶಗಳಂತೆಯೇ ಭರತಖಂಡವೂ ಸಹ
ಈ ಮಾದರಿ ಸಂಘಗಳನ್ನು ಹೆಚ್ಚು ಆಸಕ್ತಿ ಮತ್ತು ಶ್ರದ್ಧೆಯಿಂದ ಬೆಳೆಸಿದೆ

ಆರ್ಥಿಕ ಸುಧಾರಣೆಯಲ್ಲಿ ಸುವ್ಯವಸ್ಥಿತವಾದ ಪತ್ತು ಮೊದಲ
ನೆಯ ಹಂತ. ಇದರ ಅಭಾವವೇ ಭಾರತೀಯರ ಆರ್ಥಿಕ ದುಃಸ್ಥಿತಿಗ
ಮುಖ್ಯಕಾರಣ. ವ್ಯವಸಾಯಗಾರರಿಗೆ ಸರಿಯಾದ ರೀತಿಯಲ್ಲಿ ಸಾಕಾ
ದಷ್ಟು ಬಂಡವಾಳವನ್ನೊದಗಿಸುವುದೇ ಅವರ ಬದುಕನ್ನು ಉತ್ತಮಪಡಿ
ಸುವ ಮೂಲ ಸುಧಾರಣೆ. ಪತ್ತು ಸಹಕಾರ ಎಲ್ಲಿ ಚೆನ್ನಾಗಿ ಬೇರೂರಿ
ವುದೋ ಅಲ್ಲಿ ಆ ತಳಹದಿಯ ಮೇಲೆ ಇತರ ವಿಧವಾದ ಸಹಕಾರಸಂಸ್ಥೆ
ಗಳು ಬೆಳೆಯುವುದು ಸುಲಭ. ಪತ್ತು ಸಂಘಗಳ ರಚನೆ ಮತ್ತು ಕಾರ್ಯ
ನಿರ್ವಹ ಸುಲಭ ; ಗ್ರಾಮಾಂತರದಲ್ಲಿ ವಾಸಿಸುವ ರೈತರ ಚೈತನ್ಯಕ್ಕೆ

ಎಂದಿಗೂ ಮೀರಿದ್ದಲ್ಲ. ಮಾರಾಟ, ವಿಮಾ, ಉಗ್ರಾಣ ಮುಂತಾದ ಇತರ ಸಹಕಾರ ಉದ್ಯಮಗಳು ರಚನೆಯಲ್ಲೂ ನಿರ್ವಹದಲ್ಲೂ ತೊಡಕಾದುವು. ಇವುಗಳ ನಿಭಾವಣೆ ಕೆಲವುವೇಳೆ ನುರಿತ ಸಹಕಾರಿಗಳಿಗೂ ಕಷ್ಟಸಾಧ್ಯ. ಪತ್ತುಸಹಕಾರದ ಅನುಭವವು ಈ ತೊಡಕಾದ ಉದ್ಯಮಗಳ ಬೆಳವಣಿಗೆಗೆ ಹೆದ್ದಾರಿ.

ಪತ್ತು ಸಹಕಾರವು ನಮ್ಮ ದೇಶದಲ್ಲಿ ಇಷ್ಟು ಸಹಜವಾಗಿ ಬೆಳೆದಿರುವುದಕ್ಕೆ ಇವೇ ಕಾರಣವೆನ್ನಬಹುದು. ಆದರೂ ಸುಧಾರಿಸಿದ ಆರ್ಥಿಕ ಜೀವನವು ಶಾಶ್ವತವಾಗಿ ನಮ್ಮ ರೈತರಿಗೆ ಸಿಕ್ಕಬೇಕಾದರೆ ನಮ್ಮ ದೇಶವೂ ಪಾಶ್ಚಾತ್ಯದೇಶಗಳ ಮೇಲ್ಪಂಕ್ತಿಯನ್ನನುಸರಿಸಿ ಲೇವಾದೇವಿ (ಪತ್ತು) ಸಂಘಗಳ ಜೊತೆಗೆ ವಿಧವಿಧವಾದ ಇತರ ಸಂಘಗಳನ್ನೂ ವೃದ್ಧಿಗೊಳಿಸಬೇಕು. ಈಚೆಗೆ ಈ ಮಾರ್ಗದಲ್ಲಿ ಖಾಸಗಿ ಸಹಕಾರಿಗಳೂ ಪ್ರಚಾರಸಂಘಗಳೂ ಪತ್ರಿಕೆಗಳೂ ಸರ್ಕಾರದೊಂದಿಗೆ ಶ್ರದ್ಧೆಯಿಂದ ಕಲೆತು ಚುರುಕಾದ ಚಳವಳಿ ನಡೆಸುತ್ತಿವೆ. ೧೯೩೧ ರಿಂದ ಈಚೆಗೆ ಆರ್ಥಿಕ ಮುಗ್ಗಟ್ಟು ತಲೆದೋರಿದಮೇಲಂತೂ ನಮ್ಮ ರೈತರ ಸ್ಥಿತಿಗತಿಗಳು ಅತಿ ಶೋಚನೀಯವಾದುವೆಂದು ಎಲ್ಲರಿಗೂ ಮನದಟ್ಟಾಗಿದೆ. ಇದರಿಂದ ಎಲ್ಲೆಲ್ಲೂ ಸುಧಾರಣೆಗಳ ಯೋಜನೆಗಳೂ ಹಲವೆಡೆಗಳಲ್ಲಿ ಹೊಸ ಹೊಸ ಪ್ರಯೋಗಗಳೂ ನಡೆಯುತ್ತಿವೆ. ೧೯೩೫ನೆಯ ಇಸವಿಯ ರಾಜಕೀಯ ಸುಧಾರಣೆಗಳ ಮೇರೆಗೆ ಪ್ರಾಂತೀಯ ಪ್ರಜಾಸರ್ಕಾರಗಳಿಗೆ ದೊರೆತಿರುವ ಸ್ವಾತಂತ್ರ್ಯ ಬಲದಿಂದ ಸುಧಾರಿಸಿದ ರೀತಿಯಲ್ಲಿ ಸಹಕಾರಸಂಘಗಳು ಬೆಳೆದು ಆ ಮೂಲಕ ಭಾರತೀಯರ ಆರ್ಥಿಕಜೀವನದ ಮಟ್ಟವು ಏರಬಹುದೆಂಬ ನಂಬಿಕೆ ಮೂಡುತ್ತಿದೆ.

ಬ್ರಿಟಿಷ್ ಪ್ರಾಂತಗಳಂತೆಯೇ ಮುಖ್ಯವಾದ ದೇಶೀಯ ಸಂಸ್ಥಾನಗಳೂ ಕಾನೂನುಗಳನ್ನೇರ್ಪಡಿಸಿ ಸಹಕಾರಪದ್ಧತಿಯನ್ನಾಚರಣೆಗೆ ತಂದಿವೆ. ಇದರಲ್ಲಿ ಅಗ್ರಸ್ಥಾನವು ಮೈಸೂರು ದೇಶಕ್ಕೆ ಸಲ್ಲುವುದು. ನಮ್ಮ ಸಂಸ್ಥಾನದಲ್ಲೂ ೧೯೦೫ ರಲ್ಲಿ ಸಹಕಾರದ ಕಾನೂನು ಜಾರಿಗೆ ಬಂತು. ಇದಕ್ಕೆ ಮುಂಚೆಯೇ ಪ್ರಜಾಪ್ರತಿನಿಧಿಸಭೆಯ ಕೋರಿಕೆಯಂತೆ ಸರ್ಕಾರದವರು ೧೮೯೪ರಲ್ಲಿ ರೈತರ ಸಾಲದ ನಿವಾರಣೆಗಾಗಿ ವ್ಯವ

ಸಾಯದ ಬ್ಯಾಂಕುಗಳನ್ನು ಏರ್ಪಡಿಸಿದರು. ಆ ವರ್ಷದ ಪ್ರಜಾಪ್ರ
ನಿಧಿ ಸಭೆಯ ಅಧಿವೇಶನದ ಆರಂಭಭಾಷಣದಲ್ಲಿ ಆಗಿನ ದಿವಾನರಾಗಿದ್ದ
ಸರ್ ಕೆ. ಶೇಷಾದ್ರಿ ಅಯ್ಯರವರು ಈ ಹೊಸ ಉದ್ಯಮಕ್ಕೆ ಸಂಬಂಧಿಸಿ
ಎಲ್ಲಾ ವಿವರಗಳನ್ನೂ ತಿಳಿಸಿರುವರು. ಇದನ್ನು ಓದಿದರೆ ಈ ವ್ಯ
ಸಾಯದ ಬ್ಯಾಂಕುಗಳು ಯೂರೋಪು ದೇಶದಲ್ಲಿ ಪ್ರವರ್ಧಮಾನಕ್ಕೆ
ಬಂದಿದ್ದ ಸಹಕಾರ ಸಂಘಗಳ ಮಾದರಿಗನುಸಾರವಾಗಿ ರಚಿತವಾದ
ವೆಂದು ಸ್ಪಷ್ಟಪಡುವುದು. ಉತ್ಸಾಹದಿಂದ ಕೈಕೊಂಡ ಈ ಹೊಸ
ಉದ್ಯಮವು ಕಾರಣಾಂತರದಿಂದ ಫಲಕಾರಿಯಾಗದೆ, ಸ್ಥಾಪಿಸಲ್ಪಟ್ಟ
ಎಲ್ಲಾ ಬ್ಯಾಂಕುಗಳೂ ಒಂದೊಂದಾಗಿ ಮುಚ್ಚಲ್ಪಟ್ಟುವು.

ಮೈಸೂರು ದೇಶದಲ್ಲಿ ಸಹಕಾರ ಕಾನೂನು ಜಾರಿಗೆ ಬರಲು
ಒಂದೆರಡು ಖಾಸಗಿ ಪ್ರಯತ್ನಗಳು ಮುಖ್ಯ ಕಾರಣಗಳಾಗಿವೆ. ದೊಡ್ಡ
ಬಳ್ಳಾಪುರದ ನೆಯಿಗೆಯವರು ಆಗಿನ ವಿದ್ಯಾಖಾತೆಯ ಮುಖ್ಯಾಧಿಕಾರಿ
ಗಳ ಸಲಹೆಯನ್ನನುಸರಿಸಿ ಒಂದು ಸಹಕಾರ ಸಂಘವನ್ನೇರ್ಪಡಿಸಲು
ಉದ್ದೇಶಿಸಿದರು. ಅದೇ ಸಮಯದಲ್ಲಿ ಬೆಂಗಳೂರಿನ ಹಲವು ಮಹನೀ
ಯರು ನಿಯಮಿತ ಜವಾಬ್ದಾರಿ ಸಹಕಾರ ಸಂಘ ಒಂದನ್ನು ಸ್ಥಾಪಿಸಲು
ದ್ದೇಶಿಸಿ, ಅದರ ಸಂಘಸ್ಥಾಪನೆಗೂ ಮತ್ತು ಅದರ ನಡವಳಿಕೆಗೂ ಆವ
ಶ್ಯಕವಾದ ಕಾನೂನು ಮೈಸೂರಿನಲ್ಲಿಯೂ ಏರ್ಪಡಬೇಕೆಂದು ಸರ್ಕಾರ
ವನ್ನು ಪ್ರಾರ್ಥಿಸಿ ಮನವಿಯೊಂದನ್ನು ಕಳುಹಿಸಿಕೊಟ್ಟರು.

ಮನವಿಯಲ್ಲಿ ಸಂಘದ ಉದ್ದೇಶಗಳು ಈ ರೀತಿ ನಮೂದಾಗಿವೆ :

೧. ಸದಸ್ಯರುಗಳಲ್ಲಿ ಮಿತವ್ಯಯದ ಅಭ್ಯಾಸ ಹರಡಲು ಉತ್ತೇ
ಜನ ಕೊಡುವುದು.

೨. ವೃತ್ತಿ ಮತ್ತು ಉದ್ಯಮಗಳ ಅಭಿವೃದ್ಧಿಗೆ ಮತ್ತು ಗೃಹ
ಕೃತ್ಯಕ್ಕೆ ಬೇಕಾದ ಸಾಲಗಳನ್ನು ಅವರಿಗೆ ಒದಗಿಸುವುದು.

೩. ಸದಸ್ಯರುಗಳಿಗೆ ಬೇಕಾದ ಆಹಾರಸಾಮಗ್ರಿಗಳನ್ನೂ
ಇತರ ಆವಶ್ಯಕವಾದ ಸಾಮಾನುಗಳನ್ನೂ ರಾಶಿಯಲ್ಲಿ ಕೊಂಡು ಚಿಲ್ಲರೆ
ಯಾಗಿ ಅವುಗಳ ಮಾರಾಟಕ್ಕೆ ಏರ್ಪಾಟು ಮಾಡುವುದು.

೪. ಸಾಧ್ಯವಾದಾಗ ಸದಸ್ಯರುಗಳು ಮನೆ ಕೊಳ್ಳಲು ಹಣವನ್ನೊ
ದಗಿಸಿ ಅದನ್ನು ಹಲವು ಕಂತುಗಳಲ್ಲಿ ವಾಪಸು ಪಡೆಯುವುದು.

ಇಂಡಿಯಾ ಕಾನೂನಿನ ಮಾದರಿಯನ್ನನುಸರಿಸಿ ಇಲ್ಲಿಯೂ ಕಾನೂನು ಮಾಡಬೇಕೆಂದಿದ್ದ ಮೈಸೂರು ಸರ್ಕಾರಕ್ಕೆ ಈ ಮನವಿಯೂ ಬೆಂಬಲವಾದಂತಾಯಿತು. ೧೯೦೫ರಲ್ಲಿ ಮೈಸೂರಿನಲ್ಲಿ ಕಾನೂನು ಜಾರಿಗೆ ಬಂತು. ಮೈಸೂರಿನ ಕಾನೂನು ಇಂಡಿಯಾ ಕಾನೂನನ್ನು ಮಾದರಿಗಾಗಿ ಅನುಸರಿಸಿದ್ದರೂ ಒಂದೆರಡು ಮುಖ್ಯ ವಿಷಯಗಳಲ್ಲಿ ಉತ್ತಮ ರೀತಿಯ ಬದಲಾವಣೆಗಳನ್ನೊಳಕೊಂಡಿದೆ. ಇಂಡಿಯಾ ಕಾನೂನು ಸಹಕಾರ ಲೇವಾದೇವಿ (ಪತ್ತು) ಸಂಘಗಳಿಗೆ ಮಾತ್ರ ಅನ್ವಯಿಸತಕ್ಕದಾಗಿತ್ತು. ಆದರೆ ಮೈಸೂರಿನ ಕಾನೂನು ಎಲ್ಲಾ ವಿಧವಾದ ಸಂಘಗಳಿಗೂ ಅನ್ವಯಿಸುವಂತೆ ರಚಿಸಲ್ಪಟ್ಟಿತು. ಅಲ್ಲದೆ ಇಂಡಿಯಾ ಕಾನೂನಿನಲ್ಲಿ ಮಾಡಿರುವಂತೆ ಹಳ್ಳಿಯ ಸಂಘಗಳು ಮತ್ತು ಪಟ್ಟಣದ ಸಂಘಗಳೆಂದು ವ್ಯತ್ಯಾಸಮಾಡದೆ ಮೈಸೂರು ದೇಶದ ಸ್ಥಿತಿಗತಿಗಳಿಗನುಗುಣವಾಗಿ ಒಂದೇ ತರಹ ಸಂಘಗಳಿಗೆ ಕಾನೂನುಮಾಡಲಾಯಿತು. ಈ ಮಾರ್ಪಾಡುಗಳು ೧೯೧೨ರಲ್ಲಿ ಇಂಡಿಯಾ ಕಾನೂನಿನಲ್ಲೂ ಸೇರಿಸಲ್ಪಟ್ಟುವು. ೧೯೦೫ ರಲ್ಲಿ ಆದ ಕಾನೂನು ಆಗಿಂದಾಗ್ಗೆ ತಿದ್ದುಪಡಿಯಾಗಿ ಪುನರ್ರಚಿತವಾಗುತ್ತಿದೆ.

ಮೈಸೂರು ಸಂಸ್ಥಾನದ ಕಾನೂನಿನ ಆಧಾರದಮೇಲೆ ಆರಂಭವಾದ ಮೊದಲನೆಯ ಸಂಘ ' ಬೆಂಗಳೂರು ಸಿಟಿ ಕೋಆಪರೇಟಿವ್ ಸೊಸೈಟಿ '' ಇದು ನಿಯಮಿತ ಜವಾಬ್ದಾರಿಯ ಸಂಘ. ಇದಾದನಂತರ ಸ್ಥಾಪಿತವಾದ ನಾಲ್ಕು ಸಂಘಗಳೂ ನಿಯಮಿತ ಜವಾಬ್ದಾರಿ ಸಂಘಗಳೇ. ಅನಿಯಮಿತ ಜವಾಬ್ದಾರಿಯ ತತ್ವವನ್ನನುಸರಿಸಿ ಏರ್ಪಟ್ಟಾದ ಮೊದಲನೆಯ ಸಂಘ '' ಮೊಳಕಾಲ್ಮುರುವಿನ ಕೃಷಿಕಸಹಾಯಕ ಸಂಘ. '' ಇದು ೧೯೦೭ನೆಯ ಅಕ್ಟೋಬರಿನಲ್ಲಿ ಸ್ಥಾಪಿತವಾಯಿತು. ಅಲ್ಲಿಂದೀಚೆಗೆ ಇಂಥಾ ಸಂಘಗಳು ಹೆಚ್ಚುಹೆಚ್ಚಾಗಿ ಬೆಳೆದುಬಂದಿವೆ.

ಮೂಲಸಹಕಾರಸಂಘಗಳು ಬೆಳೆದಮೇಲೆ ಅವುಗಳಿಗೆ ಹಣ ಒದಗಿಸಲು ಒಂದು ಕೇಂದ್ರ ಸಹಕಾರಸಂಸ್ಥೆಯು ಆವಶ್ಯಕತೆಯೊದಗಿತ್ತು. ಆದ್ದರಿಂದ ೧೯೦೮ರಲ್ಲಿ '' ಬೆಂಗಳೂರು ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕು '' ಸ್ಥಾಪಿತವಾಯಿತು. ಮತ್ತೊಂದು ಕೇಂದ್ರ ಸಂಸ್ಥೆಯು '' ಮೈಸೂರು ಪ್ರಾವಿನ್ಷಿಯಲ್ ಕೋಆಪರೇಟಿವ್ ಏಪೆಕ್ಸ್ ಬ್ಯಾಂಕ್ ''

ಎಂಬ ಹೆಸರಿನಿಂದ ೧೯೧೫ರಲ್ಲಿ ಸ್ಥಾಪಿತವಾಯಿತು. ಇವೆರಡೂ ಸ್ವಲ್ಪ ಕಾಲ ಒಟ್ಟಿಗೆ ಕೆಲಸಮಾಡಿದ ಮೇಲೆ ನಮ್ಮ ದೇಶದಲ್ಲಿ ಎರಡು ಕೇಂದ್ರ ಸಂಸ್ಥೆಗಳು ಅನಾವಶ್ಯಕವೆಂದು ನಿಶ್ಚಯವಾಯಿತು. ಬೆಂಗಳೂರು ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕು ಮೂಲಸಂಸ್ಥೆಯಾಗಿ ಬದಲಾಯಿಸಲ್ಪಟ್ಟಿತು. ಏಪೆಕ್ಸ್ ಬ್ಯಾಂಕ್ ಒಂದೇ ಕೇಂದ್ರಸಂಸ್ಥೆಯಾಗಿ ಉಳಿದಿದೆ. ೧೯೨೯ರಲ್ಲಿ ಜಮೀನು ಅಡಮಾನದ ಬ್ಯಾಂಕ್ ಒಂದು ಆರಂಭವಾಗಿ ಜಮೀನುದಾರರಾದ ರೈತರನ್ನು ಸಾಲದಿಂದ ವಿಮುಕ್ತರನ್ನಾಗಿ ಮಾಡುವ ಕೆಲಸವನ್ನು ಕೈಕೊಂಡಿದೆ.

೧೯೩೭-೩೮ನೆಯ ಸಾಲಿನ ಕೊನೆಯಲ್ಲಿ ನಮ್ಮ ಸಂಸ್ಥಾನದಲ್ಲಿ ೧,೪೪೫ ವ್ಯವಸಾಯ ಸಂಘಗಳೂ, ೪೩೫ ಇತರ ಸಂಘಗಳೂ ಕೆಲಸ ಮಾಡುತ್ತಿದ್ದುವು. ವ್ಯವಸಾಯ ಸಂಘಗಳ ಪೈಕಿ ೧,೩೭೫ ಲೇವಾದೇವಿ (ಪತ್ತು) ಸಂಘಗಳಾಗಿವೆ. ಭರತಖಂಡದ ಇತರ ಪ್ರದೇಶಗಳಲ್ಲಿರುವಂತೆಯೇ ಇಲ್ಲಿಯೂ ಲೇವಾದೇವಿಸಂಘಗಳೇ ಪ್ರಬಲವಾಗಿವೆ. ಇತರ ವಿಧವಾದ ಸಂಘಗಳಲ್ಲಿ ಮೈಸೂರಿನಲ್ಲಿ ಪ್ರಾಮುಖ್ಯ ಪಡೆದಿರುವುವೆಂದರೆ ಸಹಕಾರಿ ಉಗ್ರಾಣಗಳು. ಸಂಸ್ಥಾನದ ಹಲವೆಡೆಗಳಲ್ಲಿ ಸಹಕಾರಿ ಉಗ್ರಾಣಗಳು ಉಪಯುಕ್ತ ಸೇವೆ ಸಲ್ಲಿಸುತ್ತಿವೆ. ಹತ್ತಾರು ಮಾರಾಟದ ಸಂಘಗಳು ಉತ್ತಮ ಕೆಲಸಮಾಡುತ್ತಿವೆ. ಮನೆಕಟ್ಟುವ ಸಂಘಗಳು ಹರಡುತ್ತಿವೆ. ಇನ್ನಿತರ ಸಂಘಗಳು ಅಭಿವೃದ್ಧಿಯಾಗುವುದಕ್ಕೂ ತಕ್ಕ ಪ್ರಚಾರಕಾರ್ಯವು ಬಹು ಚುರುಕಿನಿಂದ ನಡೆಯುತ್ತಿದೆ. ಎಲ್ಲಾ ಸಂಘಗಳ ಸದಸ್ಯರ ಸಂಖ್ಯೆಯು ಸುಮಾರು ಒಂದೂವರೆಲಕ್ಷವಿರುವುದು.

೧೯೨೦ರಲ್ಲಿ ಮೈಸೂರು ಸರ್ಕಾರದವರು ಲಲ್ಲೂಭಾಯಿ ಶಾಮಲದಾಸ್ ಅವರ ಅಧ್ಯಕ್ಷತೆಯಲ್ಲಿ ಒಂದು ಪರಿಶೀಲನಾ ಸಮಿತಿಯನ್ನೇರ್ಪಡಿಸಿದರು. ಸಮಿತಿಯವರು ತಮ್ಮ ವರದಿಯಲ್ಲಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿರುವರು. ಹದಿನೈದು ವರ್ಷಗಳ ನಂತರ ೧೯೩೫ರಲ್ಲಿ ಮತ್ತೊಂದು ಪರಿಶೀಲನಾ ಸಮಿತಿಯು ಮಾಜಿ ಮುಖ್ಯ ನ್ಯಾಯಾಧೀಶರು ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್ ಕೆ. ಎಸ್. ಚಂದ್ರಶೇಖರ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ಕೆಲಸ ನಡೆಸಿ ವರದಿಯನ್ನೊಪ್ಪಿಸಿತು.

ಈ ಪರಿಶೀಲನಾ ಸಮಿತಿಗಳು ಕೊಟ್ಟ ಸಲಹೆಗಳಲ್ಲಿ ಹಲವು ಕಾರ್ಯ ರೂಪಕ್ಕೆ ಬಂದಿವೆ.

ಸರ್ಕಾರದ ಬೆಂಬಲವು ಈಗ ಹೆಚ್ಚಾಗಿದ್ದರೂ ಕಾಲಕ್ರಮದಲ್ಲಿ ಖಾಸಗೀ ಜನಗಳೇ ಹೆಚ್ಚು ಹೆಚ್ಚಾಗಿ ಸಹಕಾರ ಚಳವಳಿಯಲ್ಲಿ ಭಾಗ ವಹಿಸಿ ಸ್ವತಂತ್ರವಾಗಿ ನಡೆಸಿಕೊಂಡು ಬರಲೆಂಬುದೇ ಸರ್ಕಾರದ ಆಶಯ. ಇದನ್ನು ಈಡೇರಿಸಲು ೧೯೨೪ರಲ್ಲಿ ಪ್ರಚಾರ ಸಂಘ ಒಂದನ್ನೇರ್ಪಡಿಸ ಲಾಯಿತು. ಸಹಕಾರದ ವಿಷಯವಾಗಿ ಭಾಷಣಗಳನ್ನೇರ್ಪಡಿಸುವುದು, ಪತ್ರಿಕೆಗಳ ಮೂಲಕ ಜನರಲ್ಲಿ ಸಹಕಾರದ ತಿಳಿವಳಿಕೆಯನ್ನು ಹೆಚ್ಚಿಸುವುದು, ಸಂಘಗಳ ಕೆಲಸಗಳನ್ನು ಸಮರ್ಪಕವಾಗಿ ನಡೆಸಲು ಜನರಿಗೆ ಶಿಕ್ಷಣವನ್ನು ಏರ್ಪಡಿಸುವುದು—ಈ ಪ್ರಚಾರಕಾರ್ಯಗಳನ್ನು ಈ ಸಂಘವು ಕೈಕೊಂಡಿದೆ. ಈ ಸಂಸ್ಥೆಯ ಆಶ್ರಯದಲ್ಲೇ ವರ್ಷವರ್ಷವೂ ಸಹಕಾರ ಸಮ್ಮೇಳನವು ನಡೆಯುತ್ತಿರುವುದು. ಈ ಸಂಘದ ಪ್ರತಿನಿಧಿಯಾಗಿ ಚುನಾವಣೆ ಹೊಂದಿದವರೊಬ್ಬರಿಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಂದು ಸ್ಥಾನವಿದೆ.

ಮೈಸೂರು ದೇಶದಲ್ಲಿ ಸಹಕಾರ ಪದ್ಧತಿಗೆ ಸರ್ಕಾರದ ಉದಾರ ಪೋಷಣೆಯ ಜೊತೆಗೆ ರಾಜಾಶ್ರಯ ದೊರೆತಿರುವುದು ವಿಶೇಷ ಸಂಗತಿ. ಶ್ರೀಮನ್ಮಹಾರಾಜರ ಅರಮನೆಯ ನೌಕರರುಗಳ ಸೌಕರ್ಯಕ್ಕಾಗಿ ಹಲವು ಸಹಕಾರ ಸಂಘಗಳು ಕೆಲಸಮಾಡುತ್ತಿರುವುವು. ಇವುಗಳ ಏಳಿಗೆಯಲ್ಲಿ ಮಹಾಸ್ವಾಮಿಯವರು ತೋರಿಸಿರುವ ಆಸಕ್ತಿಯು ಅತಿಶಯವಾದುದು.

ಸಹಕಾರ ಉದ್ಯಮಗಳಿಗೆ ಉತ್ತೇಜನವನ್ನೂ ಸಹಾಯವನ್ನೂ ದಯಪಾಲಿಸುವುದು ರಾಜಮನೆತನದ ಸಂಪ್ರದಾಯವಾಗಿದೆ. ಆಳಿದ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರವರ ಮತ್ತು ಕೀರ್ತಿಶೇಷರಾದ ಶ್ರೀಮದ್ಯುವರಾಜ ಕಂಠೀರವ ನರಸಿಂಹರಾಜ ಒಡೆಯರವರ ಉದಾರಾಶ್ರಯವು ಸಹಕಾರಪದ್ಧತಿಗೆ ದೊರೆತಿದ್ದುದು ಭಾಗ್ಯವಿಶೇಷ. ಆಳಿದ ಮಹಾಸ್ವಾಮಿಯವರ ಕರುಣಾ ಕಟಾಕ್ಷದಿಂದ ಜನಿಸಿದ ಸಹಕಾರಸಂಘವೊಂದರ ಮೂಲಕ ಮೈಸೂರು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರದಲ್ಲಿ ಅನೇಕ ಸುಧಾ ರಣೆಗಳು ನಡೆದು ಆ ಗ್ರಾಮವು ಹಳ್ಳಿಗಳಿಗೆಲ್ಲಾ ಮಾದರಿಯಾಗಿದೆ.

ಅನೇಕ ವರ್ಷಗಳು ಸಹಕಾರಿಗಳೊಡನೆ ಕಲೆತು ಕೆಲಸ ಮಾ ಸಿದ್ಧ ಕೀರ್ತಿಶೇಷರಾದ ಶ್ರೀಮದ್ಯುವರಾಜರನ್ನು ಮೈಸೂರಿನ ಸಹಕಾ ಪದ್ಧತಿಯ ಪೋಷಕರೆನ್ನಬೇಕು. ಸಹಕಾರ ಸಮ್ಮೇಳನಗಳ ಸಮಾರಂಭ ವನ್ನು ಅವರು ನಡೆಯಿಸಿ ಕೊಡುವುದು ವಾಡಿಕೆಯಾಗಿತ್ತು. ಅವರ ಭಾಷ ಣಗಳು ಅಮೋಘವಾದ ವಿಷಯಗಳನ್ನೊಳಗೊಂಡ ಆದರ್ಶ ಉಪದೇಶಗ ಳಾಗಿವೆ. ಅವರು ಆಗಾಗ್ಗೆ ಏರ್ಪಡಿಸುತ್ತಿದ್ದ ಔತನ ಆತಿಥ್ಯಗಳು ಸಂ ಸ್ಥಾನದ ಬೇರೆ ಬೇರೆ ಭಾಗಗಳ ಸಹಕಾರಿಗಳನ್ನು ಒಟ್ಟುಗೂಡಿಸುವ ಬಾಂಧವ್ಯದ ಸರಪಳಿಗಳಾಗಿದ್ದುವು. ಆಗಾಗ ಸಂಘಗಳಿಗೆ ಭೇಟಿಕೊಡು ವುದರ ಮೂಲಕ ಅವುಗಳನ್ನು ಹೆಚ್ಚು ಶ್ರದ್ಧೆಯಿಂದ ಕೆಲಸ ಮಾಡುವಂತೆ ಪ್ರೋತ್ಸಾಹಿಸುತ್ತಿದ್ದರು. ದೇಶಾಂತರ ಸಂಚಾರ ಕಾಲದಲ್ಲಿ ಅನೇಕ ವಿಷಯಗಳನ್ನು ಸಂಗ್ರಹಿಸಿ ನಮ್ಮ ಸಹಕಾರಿಗಳಿಗೆ ತಿಳಿವಳಿಕೆ ಕೊಟ್ಟಿರು ವರು. ಉದಾರ ಮನಸ್ಸಿನಿಂದ ತಮ್ಮ ಹಣವನ್ನು ಸಹಕಾರ ಸಂಘಗಳ ಬಂಡವಾಳಕ್ಕೂ ಖರ್ಚಿಗೂ ಒದಗಿಸುತ್ತಿದ್ದರು. ಉತ್ತಮ ಕೆಲಸಮಾಡಿದ ಸಂಘಗಳಿಗೆ ಅವರು ದಯಪಾಲಿಸುತ್ತಿರುವ ವಿಶೇಷ ಬಹುಮಾನಗಳಿಂದ ಸಂಘಸಂಘಗಳಿಗೆ ಉತ್ತಮರೀತಿಯ ಪೈಪೋಟಿ ಹುಟ್ಟಿ ಸಂಘಗಳು ಅಭಿ ವೃದ್ಧಿಗೊಂಡುವು. ಒಟ್ಟಿನಲ್ಲಿ ಕೀರ್ತಿಶೇಷರಾದ ಶ್ರೀಮದ್ಯುವರಾಜರು ಸಹಕಾರಪದ್ಧತಿಯಲ್ಲಿರಿಸಿದ್ದ ದೃಢನಂಬಿಕೆಯೂ, ಅದರ ಬೆಳವಣಿಗೆಯಲ್ಲಿ ತೋರಿಸಿದ ತೀವ್ರ ಆಸಕ್ತಿಯೂ ಅದರ ಕಾರ್ಯರಚನೆಯಲ್ಲಿ ವಹಿಸಿದ್ದ ಶ್ರದ್ಧೆಯೂ ಸಹಕಾರಿಗಳಲ್ಲಿ ಇಟ್ಟಿದ್ದ ಭ್ರಾತೃವಾತ್ಸಲ್ಯವೂ ಎಲ್ಲರಿಗೂ ಮೇಲ್ಪಂಕ್ತಿಯಾದುದು. ಮೈಸೂರು ದೇಶದ ಸಹಕಾರಿಗಳೆಲ್ಲರೂ ಅವ ರನ್ನು ಮಾರ್ಗದರ್ಶಕರೆಂದು ಪರಿಗಣಿಸಿ ಗೌರವ ಪ್ರೀತಿ ವಿಶ್ವಾಸಗಳಿಂದ ಕೂಡಿ ಅವರನ್ನು "ಮೈಸೂರು ದೇಶದ ಮುಖ್ಯ ಸಹಕಾರಿಗಳು" ಎಂದು ಕರೆಯುವುದು ವಾಡಿಕೆಯಾಗಿತ್ತು. ಅವರ ಅಮೋಘ ಸೇವೆಯು ಚಿನ್ನದ ಅಕ್ಷರಗಳಲ್ಲಿ ಕೆತ್ತಿಡತಕ್ಕದ್ದಾಗಿದೆ.

೫. ಉಪಸಂಹಾರ

ಸಹಕಾರಪದ್ಧತಿಯ ಮೂಲತತ್ವಗಳು ಜೀವನದ ಉಚ್ಚಧ್ಯೇಯಗಳಾಗಿವೆ. ನಿತ್ಯಜೀವನದಲ್ಲೂ ಆರ್ಥಿಕ ವ್ಯವಹಾರದಲ್ಲೂ ಸಹಕಾರಿಗಳಲ್ಲಿ ಒಗಟ್ಟು, ಸ್ವಾತಂತ್ರ್ಯ, ಶಾಂತಿ, ದಯೆ, ಧರ್ಮ ಮುಂತಾದ ಸದ್ಗುಣಗಳು ಕಂಡುಬರುವುವು. ಈ ಅಸ್ತಿಭಾರದಮೇಲೆ ಕಟ್ಟಿದ ಜೀವನಭವನವು ಎಂದಿಗೂ ಸಡಿಲುವುದಿಲ್ಲ ; ಶಾಶ್ವತವಾಗಿ ನಿಲ್ಲುವುದು. ಈ ಧ್ಯೇಯಗಳ ಆಧಾರದ ಮೇಲೆ ಅಂತರರಾಷ್ಟ್ರೀಯ ಸೌಹಾರ್ದವನ್ನು ನಿರ್ಮಿಸುವುದು ಸಹಕಾರಿಗಳ ಉದ್ದೇಶ. ವಿಶ್ವಶಾಂತಿಯು ಶಾಶ್ವತವಾಗಿ ಬೆಳಗಬೇಕಾದರೆ ಸಹಕಾರ ತತ್ವಗಳ ಆಸರೆಯಲ್ಲದೆ ಬೇರೆ ಮಾರ್ಗವಿರುವುದಿಲ್ಲ. ಈ ಪದ್ಧತಿಯು ಪ್ರಪಂಚದ ಅನೇಕ ದೇಶಗಳಲ್ಲಿ ಹಬ್ಬಿಹರಡಿರುವುದು ಉತ್ತರೋತ್ತರ ಸ್ಥಾಪಿತವಾಗಬೇಕಾದ ಅಂತರರಾಷ್ಟ್ರೀಯ ವಿಶ್ವಾಸ ಮತ್ತು ಮಧುರಬಾಂಧವ್ಯಗಳ ಸಾಧನೆಗೆ ಬಹಳ ಸಹಾಯಕವಾಗಿದೆ. ಸಹಕಾರಪದ್ಧತಿಗೆ ಪ್ರತಿ ಕಕ್ಷಿಗಳಾಗಿ ಸ್ಪರ್ಧಿಸುತ್ತಿರುವ ಬಂಡವಾಳಗಾರರ ಪ್ರಭುತ್ವಕ್ರಮ ಮತ್ತು ಸಮಾಜ ಸಮತಾವಾದ ಕ್ರಮ—ಈ ಎರಡೂ ಪರಸ್ಪರ ವೈರಿಗಳಾಗಿ ಕಾದಾಡುತ್ತಿರುವ ಕಾಲದಲ್ಲಿ ಸಹಕಾರಪದ್ಧತಿಯ ಕೋಮಲಗುಣಗಳು ಪ್ರಕಾಶಕ್ಕೆ ಬರಲು ಅವಕಾಶವಿಲ್ಲದಿರಬಹುದು. ಆದರೆ ನಿರ್ದೋಷವೂ ನಿರ್ವಿವಾದವೂ ಆದ ತತ್ವಗಳನ್ನೊಳಗೊಂಡ ಸಹಕಾರ ಪದ್ಧತಿಗೆ ಅಂತ್ಯಜಯವು ಖಂಡಿತ. ಸಹಕಾರ ಪದ್ಧತಿಯ ಧ್ಯೇಯಗಳನ್ನೆದುರಿಸಲು ಇದುವರೆಗೆ ಯಾರಿಗೂ ಸಾಧ್ಯವಾಗಿರುವುದಿಲ್ಲ.

ಸಹಕಾರಿಗಳು ತಮ್ಮ ಪದ್ಧತಿಯ ಗುರಿ, ಉದ್ದೇಶ ಮತ್ತು ಸಾಧನ ಮಾರ್ಗವನ್ನು ಸೂಚಿಸಲು ಕಾಮನಬಿಲ್ಲಿನ ಬಣ್ಣಗಳನ್ನೊಳಗೊಂಡ ಧ್ವಜವನ್ನು ಸಂಕೇತವಾಗಿ ಇಟ್ಟುಕೊಂಡಿರುವರು. ವಿವಿಧ ಬಣ್ಣಗಳು ವಿವಿಧ ರಾಷ್ಟ್ರಗಳ ಸಂಕೇತ. ಈ ವಿವಿಧ ಬಣ್ಣಗಳು ಮಿಳನವಾಗಿ ಹೇಗೆ ಶುದ್ಧವಾದ ತೇಜಸ್ಸನ್ನು ಉಂಟುಮಾಡಬಲ್ಲವೋ ಅದೇ ರೀತಿ ಸಹಕಾರ ಪದ್ಧತಿಯು ಎಲ್ಲ ದೇಶದವರ ಧ್ಯೇಯಗಳನ್ನೂ ಸಮ್ಮೇಳನಗೊಳಿಸಿ ಅಂತರರಾಷ್ಟ್ರೀಯ ಐಕ್ಯವನ್ನು ಸಾಧಿಸಬಲ್ಲದು. ವಿವಿಧ ಬಣ್ಣಗಳ ಮಿಳನದಿಂದುಂ

ಟಾಗುವ ಶ್ವೇತವರ್ಣವು ಸಹಕಾರಪದ್ಧತಿಯ ಧ್ಯೇಯಗಳ ಪರಿಶುದ್ಧತೆ ಯನ್ನು ಸಂಕೇತಿಸುವುದು. ಈ ಧ್ವಜದಡಿಯಲ್ಲಿ ಸಹಕಾರಿಗಳೆಲ್ಲರೂ ಸೇರಿ ವರ್ಷ ವರ್ಷವೂ ತಮ್ಮ ಪದ್ಧತಿಯ ಮೂಲಕ ಭ್ರಾತೃಭಾವವು ಹೇಗೆ ವ್ಯಾಪಿಸಿದೆ ಎಂಬುದನ್ನು ತಿಳಿಸಲು ಅಂತರ್ರಾಷ್ಟ್ರೀಯ ಸಹಕಾರೋತ್ಸವವನ್ನು ಎಲ್ಲಾ ದೇಶಗಳಲ್ಲೂ ನಡೆಸುವುದು ಆಚರಣೆಗೆ ಬಂದಿದೆ. ಈ ಉತ್ಸವವನ್ನು ಭರತಖಂಡದಲ್ಲಿ ನವೆಂಬರ್ ತಿಂಗಳಿನ ಮೊದಲನೆಯ ಶನಿವಾರ ಆಚರಿಸುವರು. ಅಂದು ದೇಶದ ಅದ್ಯಂತವೂ ಸಹಕಾರಿಗಳೆಲ್ಲರೂ ಕಲೆತು ಸಹಕಾರ ಪದ್ಧತಿಯ ಪ್ರಚಾರ ಕಾರ್ಯವನ್ನು ಕೈಕೊಂಡು ಸಹಕಾರಪದ್ಧತಿಯ ಉಚ್ಚಧ್ಯೇಯಗಳನ್ನೂ ಅದರ ವಿಶ್ವವ್ಯಾಪನೆಯನ್ನೂ ವಿಶ್ವಸಹಕಾರಿಗಳ ಭ್ರಾತೃತ್ವವನ್ನೂ ಪುನಃ ಸ್ಮರಿಸಿ ಮನದಟ್ಟು ಮಾಡಿಕೊಂಡು ಅಂತರ್ರಾಷ್ಟ್ರೀಯ ಸೌಹಾರ್ದ ಸುಖ ಶಾಂತಿಗಳ ಸಾಧನೆಗೆ ಸಹಕಾರಮಾರ್ಗವಿಲ್ಲದೆ ಬೇರೆ ದಾರಿಯಿಲ್ಲವೆಂಬುದನ್ನು ದೃಢಪಡಿಸಿ ಸರ್ವರಿಗೂ ಮಂಗಳ ಉಂಟಾಗಲೆಂದು ಪ್ರಾರ್ಥನೆ ಸಲ್ಲಿಸುವುದು ವಾಡಿಕೆಯಾಗಿದೆ.

ಸಹಕಾರ ಗೀತ

೧

ಮಳೆಬಿಲ್ಲ ಬಣ್ಣದಲಿ ಮಿರುಗುವಾಶಾಧ್ವಜವ
ತಳೆದು ನಾಗರಿಕತೆಯ ಹಾದಿ ಹಿಡಿದು,
ಒಂದೆ ಗುರಿಯನು ನಂಬಿ, ಸಹಕಾರರಥವಿದನು
ಮುಂದು ಮುಂದಕೆ ನಡೆಸುತಿರುವವರಿಗೆ—
ನಾವಿಂದು ಬಾಗುವೆವು ಸೋದರ ಸ್ನೇಹದಲಿ
ಈ ವಿಶ್ವದೆಲ್ಲ ಸಹಕಾರಿಗಳಿಗೆ.

೨

ಬೆಳೆದು ಕೊಡುವವನಿಗಿಲ್ಲ, ಕೊಂಡುಣ್ಣುವನಿಗಿಲ್ಲ ;
ಗಳಿಸುವನು ಲಾಭವನು ನಡುವಣವನು !
ಕೂಡಿ ಕೊಳ್ಳುವ ಮಂತ್ರವನು ಜಪಿಸಿ ಸಾಧಿಸುತ
ದೂಡಬೇಕೀ ನಮ್ಮ ದೌರ್ಬಲ್ಯವ
ಇಲ್ಲಿ ಸಿದ್ಧಿಗೆ ಹಗೆಗಳಡ್ಡ ಬರಲೇನಂತೆ?
ಗೆಲ್ಲುವುದೆ ದಿಟ ಕೊನೆಗೆ ಸಹಕಾರವು !

೩

ಎತ್ತ ನೋಡಿದರತ್ತ ಮಿಡತೆ ಸಾಲಿಟ್ಟಂತೆ
ಮುತ್ತಿಹರು ಲಾಭಕೋರರು ನೆಲವನು !
ಹದಗೆಟ್ಟ ಹುರುಡಿನಲಿ ನುಗ್ಗಿ ನೂಕುತ, ಜಗಕೆ
ಕದನರಂಗದ ಪಾಡನೊಡ್ಡಿರುವರು.
ದಹಿಸುವೀ ಘೋರದಿಂದಿಳೆಯನುಜ್ಜೀವಿಸಲು
ಸಹಕಾರವೊಂದೆ ನಮಗಮೃತಧಾರೆ.

೪

ಒಂದುಗೂಡಿರಿ ಜಗದ ಸಕಲ ಸಹಕಾರಿಗಳೆ,
ಎಂದಿಗೂ ಸಡಿಲದಿಹ ಮೈತ್ರಿಯೊಳಗೆ.
ಸ್ವಾತಂತ್ರ್ಯ ಶಾಂತಿ ದಯೆ ಧರ್ಮವನು ಶ್ರದ್ಧೆಯಲಿ,
ಪ್ರೀತಿಯಲಿ ರೂಢಿಸುವ ದೀಕ್ಷೆಗೊಳಿರಿ.
ಕದಲದೀ ತತ್ವಗಳೆ ದಿಟದ ನಾಗರಿಕತೆಯ
ಸದನವನು ನಿಲ್ಲಿಸುವ ಕಂಬಸಾಲು !

(ತೀ. ನಂ. ಶ್ರೀಕಂಠಯ್ಯ.)

WD 1471—GPB—1,200—29-8-45